ಐದು ಬಗೆಯ ಸಾಹಿತ್ಯ ಸಂಗ್ರಹ

ಉದ್ಯಾನ

ವಿವಿಧ ಲೇಖಕರಿಂದ

ವಿಜಯ ಸಾಹಿತ್ಯ ಮಾಲೆ
ಸುರತ್ಕಲ್ಲು

ಅವೆಕ್ಕುಂಜ್ಜ ಶಂಕರ ನಾರಾಯಣ ನಾವಡ

೨೫-೧೧-೬೦.

ಉದ್ಯಾನ

(ಆಯ್ದು ಬಗೆಯ ಸಾಹಿತ್ಯ ಸಂಗ್ರಹ)

ವಿವಿಧ ಲೇಖಕರಿಂದ

1960

ವಿ ಜ ಯ ಸಾ ಹಿ ತ್ಯ ಮಾ ಲೆ

ಸುರತ್ಕಲ್ಲು, (ದ. ಕ.)

ಸಂಪಾದಕರು:

ಕೆ. ವೆಂಕಟರಾಯಾಚಾರ್ಯ,
ಕೆ. ಸುರೇಶ್.

ಸಲಹೆಗಾರರು:

ಉಡುಪಿ ಸೀತಾರಾಮಾಚಾರ್ಯರು,
ಬಿ. ಪದ್ಮನಾಭ ಸೋಮಯಾಜಿ.

*

ಮುದ್ರಕರು:
'ಉದಯ ಮುದ್ರಣಾಲಯ'
ಮಂಗಳೂರು-3.

ಬೆಲೆ: ರೂ. **1-50.**

ಅರಿಕೆಗಳು

ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯಗಳ ವಿವಿಧ ಮುಖಗಳನ್ನು ಕುರಿತು ವಿವಿಧ ರೀತಿಯಲ್ಲಿ ಬರೆದ ಚಿಕ್ಕ ದೊಡ್ಡ ಪುಸ್ತಕಗಳು ಈ 'ವಿಜಯ ಸಾಹಿತ್ಯಮಾಲೆ'ಯಲ್ಲಿ ಪ್ರಕಟಿಸಲಿವೆ. ಶಿಶು ಸಾಹಿತ್ಯ, ಸಣ್ಣಕತೆ, ಜನಪ್ರಿಯ ಕವಿತೆ, ಲಘು ಕಾದಂಬರಿ, ವಿಚಾರಾತ್ಮಕ ಪ್ರಬಂಧ, ವಿಮರ್ಶಾತ್ಮಕ ಕೃತಿ, ಅನುವಾದಿತ ಗ್ರಂಥ, ಹಳೆಯ ಕಾವ್ಯ, ಯಕ್ಷಗಾನ ಪ್ರಸಂಗ, ಮಹಿಳೆಯರಿಗಾಗಿ ಬರೆದ ಪುಸ್ತಕ ಮೊದಲಾದವು ಇದರಲ್ಲಿ ಪ್ರಕಟವಾಗುತ್ತವೆ. ಜನರ ವಿವಿಧ ಸಾಹಿತ್ಯ ವಾಚನಾಭಿರುಚಿಯನ್ನು ವಿಕಾಸಗೊಳಿಸುವಂತೆ ಸಣ್ಣ ದೊಡ್ಡ ಪುಸ್ತಕಗಳ ಪ್ರಕಟನೆಯೇ ಇದರ ಉದ್ದೇಶವಾಗಿದೆ.

ನಮ್ಮ ಉದ್ಯಮವನ್ನು ಮನಗಂಡು ಹಲವಾರು ಮಹನೀಯರು ಸ್ವಪರಹಸ್ತಗಳಿಂದ ಸಹಕಾರವನ್ನು ನೀಡಿದ್ದಾರೆ, ಇನ್ನು ಮುಂದೆಯೂ ಸಹಕರಿಸುವರೆಂಬ ಭರವಸೆಯಿದೆ.

ಇದಾಗಲೇ ಈ ಸಾಹಿತ್ಯಮಾಲೆಯ ಮೊದಲ ಪ್ರಕಟನೆಯಾದ 'ಕಂದರ ಕಣಜ'ವೆಂಬ ಶಿಶುಗೀತೆಗಳ ಸಂಕಲನವು ವಾಚಕರ ಕೈಸೇರಿದೆ. ಇದೀಗಣ ಸಂಕಲನದಲ್ಲಿ ಕನ್ನಡದ ಹಿರಿಯರು–ಕಿರಿಯರು ಬರೆದ ಚಿತ್ರ, ಕವಿತೆ, ನಾಟಕ, ಕತೆ, ಪ್ರಬಂಧಗಳು ಒಳಗೊಂಡಿವೆ. ಇವರಲ್ಲಿ ಹಲವರು ಇದಾಗಲೇ ಕನ್ನಡದ ವಾಚಕರಿಗೆ ಸುಪರಿಚಿತರಾಗಿದ್ದಾರೆ. ಕೆಲವು ಮಂದಿ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ, ಹಿರಿಯರ ಆದರ್ಶದಲ್ಲಿ ಮುನ್ನಡೆಯಲು ಬರುತ್ತಿದ್ದಾರೆಂದರೆ ಅತಿಶಯೋಕ್ತಿಯಾಗದು. ಇಂತಹ ಸಂಕಲನಗಳ ಮೂಲಕ ಹಿರಿಯರು–ಕಿರಿಯರು ತಮ್ಮ ಗುರಿಯತ್ತ ಹೇಗೆ ಸಾಗುತ್ತಿದ್ದಾರೆಂದು ತಿಳಿಯಬರುತ್ತದೆ. ಇಲ್ಲಿನ ಹಿರಿಯರ ಕೃತಿಗಳನ್ನು ಕುರಿತು ನಾವು ಪ್ರತ್ಯೇಕ ಹೇಳಬೇಕಾದುದಿಲ್ಲವಷ್ಟೆ! ಪರಂತು, ಕಿರಿಯರ ಕೃತಿಗಳಲ್ಲೂ ಇದ್ದ ಕೆಲವೊಂದು ವೈಶಿಷ್ಟ್ಯಗಳನ್ನು ಸೌಹಾರ್ದದಿಂದ ಕಂಡು, ಮುನ್ನಡೆಸಂತೆ ಹಾರೈಸುವುದು ಹಿರಿಯರ ಪಾಲಿಗೆ ಮೊಸಲೆಂದು ಭಾವಿಸುತ್ತೇವೆ.

ಈ ಸಂಕಲನಕ್ಕೆ ತಮ್ಮ ಕೃತಿಗಳನ್ನಿತ್ತು ಸಹಕರಿಸಿದವರಿಗೆ ನಮ್ಮ ಮೊದಲ ನೆನಕೆಗಳು ಸಲ್ಲಬೇಕಾಗಿವೆ. ಅಂತೆ, ನಮ್ಮ ವಿನಂತಿಗೆ ಮನ ಗೊಟ್ಟು ಆರ್ಥಿಕ ಸಹಕಾರವಿತ್ತವರಿಗೆ ನಮ್ಮ ಕೃತಜ್ಞತೆಗಳು. ಇದರಲ್ಲಿ ಅಳವಡಿಸಲು ಜಾಹೀರಾತುಗಳನ್ನಿತ್ತವರಿಗೂ ನಾವು ಆಭಾರಿಗಳು. ಇದನ್ನು ಅಂದವಾಗಿ ಮುದ್ರಿಸಿಕೊಟ್ಟ 'ಉದಯ' ಮುದ್ರಣಾಲಯದವರ ಉಪಕಾರ ಸ್ಮರಣೀಯವಾಗಿದೆ.

ಈ ಸಂಕಲನವು 'ಉದ್ಯಾನ'ದಂತೆ ಹಲವು ಬಗೆಗಳ ಸೌಂದರ್ಯದಿಂದ ಕೂಡಿದೆಯೆಂದು ತಿಳಿಯಬಹುದು. ಇದನ್ನು ಕನ್ನಡಿಗರು ಸಹೃದಯತೆ ಯಿಂದ ಬರಮಾಡಿಕೊಳ್ಳುವರೆಂದೂ, ನಮ್ಮ ಈ ಉದ್ಯಮಕ್ಕೆ ಮುಂದೆಯೂ ಸಹಕರಿಸುವರೆಂದೂ, ಪೂರ್ಣ ವಿಶ್ವಾಸದಿಂದ ಕೂಡಿ ನಾವು 'ಕನ್ನಡಮ್ಮ'ನ ಅಡಿದಾವರೆಗಳಲ್ಲಿ ಈ ಸಂಕಲನವನ್ನು ಸಮರ್ಪಿಸುತ್ತೇವೆ.

ತಾ. 31—10—'60
ತುಳಸೀ ಹಬ್ಬ.

ಸಂಪಾದಕರು.

ಆಶಯಗಳು

'ತಮ್ಮ ವಿಜಯ ಸಾಹಿತ್ಯಮಾಲೆಗೆ ವಿಜಯವಾಗಲಿ.'

(ತಾ. 15—4—'60) **ಎ. ಆರ್. ಕೃಷ್ಣ ಶಾಸ್ತ್ರಿ, ಬೆಂಗಳೂರು.**

'ನಿಮ್ಮ ಪ್ರಯತ್ನ ಸಾರ್ಥಕವಾಗಿ ಜಯ ಪಡೆಯಲಿ.'

(ತಾ. 16—4—'60) **ಡಿ. ವಿ. ಗುಂಡಪ್ಪ, ಬೆಂಗಳೂರು.**

'ಕಂದರ ಕಣಜ'ದ ಬಗೆಗೆ—

'ಪದ್ಯಗಳೆಲ್ಲಾ ಮಕ್ಕಳ ಬಳಕೆಯ ನುಡಿಗಳಿಂದ ಕೂಡಿವೆ. ಮಕ್ಕಳ ಮನೋಭಾವವನ್ನು ಅರಳಿಸತಕ್ಕುವಾಗಿವೆ.'

ಪ್ರಜಾವಾಣಿ, ಬೆಂಗಳೂರು.

'ಮಕ್ಕಳ ವಯೋಮಾನಕ್ಕೆ ಮತ್ತು ಜ್ಞಾನಕ್ಕೆ ಅನುಗುಣವಾಗಿ ಪದ್ಯಗಳ ವಿಷಯ ಭಾಷೆ ಶೈಲಿಗಳಿದ್ದು, ಪದ್ಯಗಳೆಲ್ಲಾ ಬಳಕೆಯ ನುಡಿ ಕಟ್ಟುಗಳಿಂದ ಕೂಡಿವೆ.'

ರಾಯಭಾರಿ, ಉಡುಪಿ.

'ಲೇಖಕರಿಗೆ ಉತ್ತಮ ಯಶಸ್ಸು ಲಭಿಸಲಿ ಎಂದು ಹಾರೈಕೆ.'

ಯುಗಪುರುಷ, ಕಿನ್ನಿಗೋಳಿ.



ಚಿತ್ರಕಾರರು: ಎಚ್. ಎಸ್. ರಾವ್, (ಅದವೂರು ಹೈಸ್ಕೂಲ್)

ಚಿಗುರು ಬೆಳಕು

ಇದು ಸುಖಸ್ಪರ್ಶ ವ್ಮೈಗೊಂಡು ಬಂತು
ಇದು ಸೂಸಿ ಬಂದ ಹರ್ಷ
ಮಗುಗಳಾಗಮನ ಜೀವ ಸಂಗಮನ
ಜಗಕೆ ಪುಷ್ಪ ವರ್ಷ.

ಮನದ ಮೂಲೆ ಮೂಲೆಯಲಿ ಮಲಿತ ತಮ
ಶಮನಗೊಳಿಸಲೆಂದು,
ಬಳಿಗೆ ಬಂತೊ ಈ ಚಿಗುರು ಬೆಳಕು ಮನೆ-
ಮನೆಯನುಳಿಸಲೆಂದು.

ದೇವಮನದ ಸ್ಮಿತ ಬಿಂದು ಒಂದು, ಒಂ-
ದೊಂದು ಮನೆಗು ಬೇರೆ.
ಜೀವಜಾತ್ರೆಯಲಿ ದಿನಂಪ್ರತಿಯು ಶಿವ-
ರಾತ್ರಿಗಿಹುದೆ ಮೇರೆ?

'ಅಂಬಿಕಾತನಯದತ್ತ'
ಧಾರವಾಡ.

ಸಂಕ್ರಾಂತಿ

ವರುಷವೆಲ್ಲ ಬಸಿರಲಿ ಬೆಳಸಿದ ಬೆಳೆ
ತುಂಬಿರೆ ಉಡಿಯಲ್ಲಿ,
ಹೆರಳ ಕಪ್ಪ ಬೆಳಗುವ ಹೂವಾಗಿ
ಅರಿಲಿರೆ ಮುಡಿಯಲ್ಲಿ;
ಮೂಡಲು ಬಡಗಲ ಮೂಲೆಯ ಗಾಳಿಯ
ಸೋಂಕಿಗಂಜಿ ಬೆರೆತ

ಗಿಡ ಮರ ಬಳ್ಳಿಯ ಒಡಲಲಿ ಪ್ರಕೃತಿ,
ಸಾಕೀ ಎದೆ ಕೊರೆತ,
ಮರಳಿ ಬರನೆ ಚೈತ್ರಾನಿಲ, ಬಾರವೆ
ಅಂದಿನ ಸುಖ ಶಾಂತಿ,
ಎಂದು ಸುಯ್ಯುತಿರೆ ತಾಯ ಸಂತಯಿಸೆ
ಬಂದಿದೆ ಸಂಕ್ರಾಂತಿ.

ತೆಂಕಣ ಮೊಗವಾಗಿರನೇ ಗ್ರಹಪತಿ?
ಈಗ ಇಕೋ ಇತ್ತ
ಪ್ರಸನ್ನ ದೃಷ್ಟಿಯನೆಸೆದನು; ಇನ್ನದು
ಎಲ್ಲಾ ಸಂಪತ್ತ
ತಂದೇ ತರುವುದು. ಚೈತ್ರಾನಿಲನಾ
ಅಪಾರ ದೂರದಲಿ
ನೆನೆದನು ಮೋಹದ ಬನವಸೆ ನಾಡನು.
ನಿಲುವನೆ ಬಾರದಲಿ?
ತೊರೆವನೆ ಮಲ್ಲಿಗೆಯನು ಇಮ್ಮಾವನು?
ಇದೊ ಪವನ ವದಂತಿ:
ಅಲರಿ ಎಲರವನು ಬಹುದ ಸೂಚಿಸಿದೆ
ಎಂದಿದೆ ಸಂಕ್ರಾಂತಿ.

ರಾಮನ ಸುದ್ದಿಯು ದೇವಿಗೆ ಸಲಿಸಿದ
ಮಾರುತಿವೊಲು, ಹಬ್ಬ.
ಪ್ರಕೃತಿಯ ಚಿಂತೆಯ ಹರಿಸಿದೆ; ಕಳೆದಿದೆ
ಒಳಹೊರಗಿನ ಮಬ್ಬ.
ಕೈಸೇರುವ ಮುನ್ನವೆ ಸುಖ ಮನದಲಿ
ಹಚ್ಚುವ ತಣ್ ಬೆಳಕ
ಹೊಳಸಿನಿಂದ ಮೂಡಿದೆ ಎಲ್ಲೆಡೆಯಲಿ
ಆನಂದದ ಪುಳಕ.
ಚಳಿಯ ಕೊಡನಿ ಗಿಡಮರಲತೆ ತಳರಿವೆ;

ಸಾರಿರೆ ಸಂಕ್ರಾಂತಿ,
ಜನದಲಿ ನೆಲ ಬನ ಬಾನಲಿ ತೊಳಗಿದೆ
ಅಪೂರ್ವ ನವ ಕಾಂತಿ.

ಮಾತೆಯ ಸಂತಸ ಮಕ್ಕಳ ಮುಟ್ಟಿದೆ
ಹೊಲಗಳ ಹಸನೆಳ್ಳು,
ಗದ್ದೆಯ ಬಯಲಿನ ಕಬ್ಬಿನ ಜಲ್ಲೆ
ಆಲೆಯ ಬಿಸಿ ಬೆಲ್ಲ,
ಮಣ್ಬೆರಿತ ಕೊಂಬು ಸೋಗೆಯ ಅರಿಸಿನ
ಕಾಪಿನ ಹೊಸನೆಲ್ಲು.
ಸೇರಿವೆ ಸಿರಿದಾರಿದ್ರ್ಯವನೆಣಿಸದೆ
ಊರಮನೆಯನೆಲ್ಲ.
ಊರ ಕಾವ ಈ ತಾಯ ಸಮೃದ್ಧಿ
ಕಾಂಬುದು ಕಾಡಿನಲು,
ಜನ ಬೆಳೆದ ಕಾಳಿನಿನಿತು ಸೇರಿರಲು
ಹಕ್ಕಿಯ ಗೂಡಿನಲು.

ಅನ್ನ ಬಂದೆಡೆಗೆ ಅದನುಂಬ ಬಾಯಿ
ಬಾರದೆ ಇದ್ದೀತೆ?
ತಂದಿಹಳೆಳೆಯುಸಿರನು ತಾಯ್ ಮನೆಗೆ
ಗೂಡಿಗೆ, ಸಂಪ್ರೀತೆ.
ಅರಸಿತಿ ಬೇಡಿತಿ ಹಸುಳೆಯ ಹೆತ್ತ್ರಿ
ಹೆತ್ತು ಎಳೆಯ ಮರಿಯ.
ಕಾಗೆ ಕೋಗಿಲೆ ಸಾರ್ಜಿವೆ ಜಗದಲಿ
ಆಶೆಯ ವಲ್ಲರಿಯ.
ನಲಿಯುತೆ ಬಾನಿನ ಸೊಂಪನು ಸೂಸುತ
ಸಂದಿರೆ ಸಂಕ್ರಾಂತಿ,
ತಳೆತಿದೆ ಎಲ್ಲೆಡೆ ಯಾವುದೊ ವಿಭ್ರಮ,
ಏನೊ ಸುಸಂಭ್ರಾಂತಿ.

ಗೊಂಚಲು ಗೊಂಚಲು ಹೂತಿವೆ ಮಾವು;
ಹೂತುರುಗದೆ ಸುರಗಿ?
ಮಲ್ಲಿಗೆ ಅರಳಲಿ ಮಲರಲು ತೊಡಗಿದೆ.
ಏತಕೊ ಮನ ಕರಗಿ
ಬನದಾಳದಿ ಕೂ ಎಂದೆಳೆ ಕೋಗಿಲೆ
ಕರೆದಿದೆ; ಅಕೊ ಕುಕಿಲು.
ದಿನದಿನ ಹರಿದಿರೆ ನಿಡಿನಿಡಿದಾಗಿ
ಬೆಳೆಯುತಲಿವೆ ಹಗಲು.
ಮನಜಲ ತೊಳೆದಿವೆ; ಗಂಧರ್ವರದೊ
ಕಿನ್ನರರದೊ ಎಂಬ
ಕೇಳಿ ಕೇಳಿಸದ ಮೃದು ಮಧುಗುಂಜನ
ತೀವಿದೆ ನಭದಿಂಬ.

ಹಿಂಗಡೆ ಚಳಿ, ನಿಡಿದಿರುಳು, ಹಿಮಂತ;
ಮುಂದಿಹುದು ವಸಂತ.
ಸಾವು ಹುಟ್ಟು ಸುಖ ಬೇನೆ ಸಂಸೃತಿಯ
ಕಡಲಿನ ಅಶ್ರಾಂತ
ಅಂತ್ಯವಿರಹಿತ ತರಂಗದೇರಿಳಿತ.
ಇಳಿತದ ಮಗ್ಗುಲಲೆ
ಏರು ಇದೆ ಕಣಾ: ಮನ ಸಮ ಇರಲಿ:
ಎದೆಯಲಿ ಹಿಗ್ಗಿರಲಿ;
ಹಚ್ಚಡವಿರೆ ಚಳಿ—ಭೋಗದ ವಸ್ತು;
ಬೇಡ ವೃಥಾ ಚಿಂತೆ.
ನೋಡು ಬಾಳೊಳಿಹ ಒಳಿತು ಸಂತಸವ-
ಎಂದಿದೆ ಸಂಕ್ರಾಂತಿ.

ತುಂಬಿದ ಬೋಗುಣಿ ಹಾಲನು ಹೊಸಕೊಕ್ಕೆ
ಒಲೆಯ ಮೇಲೆ ಇಕ್ಕಿ
ಈ ಮನೆಯೈಸಿರಿ ಇಂತು ಹೊಂಗಲೆಸೆ

ಹೊಂಗಿತು ಅನು ಉಕ್ಕಿ.
ಬೆಳಗಿಗೆ ತೌರಿಗೆ ಬಹ ಮಗಳನ್ನದ
ಬಣ್ಣದ ಹಿಡಿಹಿಡಿಯ
ಪಡಿದು ಸಿವಾಳಿಸಿ ಬೆಳೆಯ ಹರಸುವರು
ಒಡಹುಟ್ಟಿನ ಕುಡಿಯು.
ಮನೆಯ ಸಂಪದದ ಮೂರ್ತಿಗಳವರು,
ಗೃಹಲಕ್ಷ್ಮಿಯರಿಂತೀ
ಹಡೆದ ಹೆಣ್ ಬಂದ ಹೆಣ್, ಎಂದೋದಿಸಿ
ತೋರಿದೆ ಸಂಕ್ರಾಂತಿ.

ಬಣ್ಣದ ರೇಶಿಮೆ ಚಿನ್ನದ ಕಾಗಿನ
ಸೀಲೆಗಳನು ಉಟ್ಟು
ಅಂದಿಗೆ ಕಂಕಣ ಬಂದಿ ಬಾವಲಿ
ಓಲೆ ಮೂಗುಬಟ್ಟು
ಕಂಠಿಕೆ ಜಡಬಿಲ್ಲೆಯಲಂಕರಣದ
ಹರದೆಯರೆಳೆ ಮಗುವ
ಎದೆಗಳಿಗಪ್ಪಿ ಕಂಕುಳಲಿರುಕಿ
ತವಮ್ಮ ನಗೆಯುಗುವ
ಮೊಗದಲಿ ಸೆರೆಹೊರೆ ಮುಸುಗಳ ಹಾರಿ
ಎಳ್ಳು ಬೆಲ್ಲ ತಂತೀ
ಬಗೆಯ ಹರ್ಷವನು ಬೀರುತ ನಡೆಯು
ಜೀಗಿಡೆ ಸಂಕ್ರಾಂತಿ.

ಮಾರೆಮ್ಮನ ಗುಡಿ ಮುಂಗಡೆ ಪಂಕ್ತಿಕೆ
ಸಂದಣಿಸಿದೆ ಮಂದಿ:
ಹಬ್ಬಕೆ ಬಂದಿಹ ಊರವರುಂದಿರ
ನಗಲಿಮವೆ ಸುಸಂಧಿ
"ದೇವಿಯ ಮುಂಗಡೆ ಬಿದ್ದಿಹ ಗುಂಡನು
ಎತ್ತಿರಿ. ಪನಳವೆ?

ಇಲ್ಲವೆ ನಮ್ಮೊ ಹುಡುಗಿಯನಾಳಲು
ಅದೇನು ಕೇವಳವೆ?"
ಒಕ್ಕೈ ನೋಡುವ ತೆರ ಅಳಿಯದಿರು
ನಗುತುಜ್ಜುಗಿಸುವರು
"ಮೈದುನನಕ್ಕಗೆ ಸೋತೆ" ಎನ್ನುತ
ಊರನು ನಗಿಸುವರು.

ದನಗಳ ಮಾಳಕೆ ಬಿಡದೆಯು ಕೋಡಿಗೆ
ಬಣ್ಣ ಬಳಿದು, ಹೊಚ್ಚ
ಕುಚ್ಚು ವಸ್ತ್ರವನು ಕಟ್ಟಿ ಒಕ್ಕಲು
ಮುಚ್ಚಂಜೆಗೆ ಕಿಚ್ಚ
ಅವನು ಹಾಯಿಸಿದೆ; ತರುಣರು ಛಲದಲಿ
ಬೆಲೆತೊಡವಿನ ದನವ
ತಡೆದು ಸಿಂಗರವ ಸುಲಿದು ತೋಳ್ತ್ರ
ಮೆರೆದರು ಕಲಿತನವ.
ಅಂದು ಭೀಮ ಕರ್ಣಾರ್ಜುನರುಬ್ಬಿನ
ಎದೆಯೊಳಾವ ತಂತಿ
ಮಿಡಿಯಿತು ಅದೆ ಮಿಡಿದಿದೆ ಧೀರರಲಿ
ಇಂದಿನ ಸಂಕ್ರಾಂತಿ.

ದೀಪ ಹಚ್ಚಿರಲು ಮನೆಯಲಿ ಮಕ್ಕಳ
ಹಸೆಯಲಿ ಕುಳ್ಳಿರಿಸಿ,
ಮೇಲಾಗಿ ಬಾಳು ನೂರಾಗೆ ಬಾಳು,
ಎಂದವರನು ಹರಸಿ,
ದೇವನ ಕೃಪೆ ಸಿರಿ ಸಂತಸ ಚೆಲುವನು
ಸುರಿಯುತಿಂತು ನಿನ್ನ
ಸಾವಿರ ಕಾಲಕು ಸಲಹಲಿ ಮಗುವೇ
ಸುಖಿಯಾಗಿರು ಚಿನ್ನ,
ಎಂದು ತಾಯ್ದಿರೆರೆವರು ಶೀರುಂಡೆ ಹೊನ್

ಹೂವನವರ ಮೇಲೆ,
ಅಕ್ಕರೆಯೆ ಶೀರು ಹೂ ಹೊನ್ನಾಗಿ
ಸಂಕ್ರಾಂತಿಯು ವೇಳೆ.

ಸಂಜೆಗೆ ದೇವರ ಉತ್ಸವ ಊರಲಿ
ಬಿಜಯಿಸಿತೆಲ್ಲ ಕಡೆ;
ಉದಯಕೆ ತೌರನು ಹರಸಲು ದೇವಿ
ಬರುವ ಬಾಸಿಯುಡೆ.
ತುಪ್ಪದ ಅನ್ನ ಸಕ್ಕರೆ ಪೊಂಗಲು,
ಪಾಯಸ ಪನಿವಾರ,
ಕಬ್ಬಿನ ಜಲ್ಲೆ, ಮಕ್ಕಳ ಲಲ್ಲೆ,
ಮಂಗಳ ಮಣಿಹಾರ,
ಸುಬ್ಬನ ಓಲಗ, ರಂಗನ ಡೋಲು,
ಸೈಬಾಜಬಜಂತ್ರಿ,
ಹಿರಿ ಕಿರಿಯೆಲ್ಲರ ಬಗೆಯ ತುಂಬುವವು,
ತುಂಬಲಿ ಸಂಕ್ರಾಂತಿ.

ಸಕಲ ಪ್ರಕೃತಿ ಬಾಳ್ವೆಗೆ ಬಲ ನೆರೆಯು
ಸೆಳೆದುಸಿರೇ ಹಬ್ಬ;
ಹೊರಗಿನ ಒಳಗಿನ ಐಸಿರಿ ಸೌರಭ
ನೆಯ್ದಿಹ ಸವಿಗಬ್ಬ.
ಜೀವದುಗುಮ, ತನು ಹೊರೆಯುವ ಮಮತೆ
ಕಲೆ ಬೆಡಗು ವಿಲಾಸ,
ಘಲಗೆಲವು ಭಕ್ತಿ, ಚೆಲುವೊಲವು ಶಕ್ತಿ,
ಸರಸ ವಿಮಲ ಹಾಸ,
ಇನಿತೆಲ್ಲ ಸೊಗಸ ಮೈಗೊಂಡು ಇದಿರು
ನಿಂದಿರೆ ಸಂಕ್ರಾಂತಿ
ಜನದಲಿ ಮನದಲಿ ಮನೆಯಲಿ ನಾಡಲಿ
ಸೂರೆದಿದೆ ಸುಖಶಾಂತಿ.

ಈ ಮನ ಜನ ಮನೆ ನಾಡಲಿ ಒಳಿತನು
ಸೊರೆದಿಹ ಸಂಕ್ರಾಂತಿ,
ಸಾರು ಲೋಕದೆಲ್ಲೆಡೆಯನು; ನಿನ್ನಯ
ಸುಖ ಶೀತಲ ಕಾಂತಿ
ಮಾನವನನ್ವಯವನು ಕಾಡುತಲಿಹ
ಬೇನೆ ಭಯ ಭ್ರಾಂತಿ
ಸಾವು ಶಂಕೆ ಕಷ್ಟಕೆ ಅಣಗಿಸು
ನೀಡಲಿ ವಿಶ್ರಾಂತಿ.
ಇಲ್ಲವೆ ಕತ್ತಲು ಸಾವುಗಳಿಂದ
ಜಗವನು, ಸನ್ಮಂತ್ರಿ,
ಇರವಿನ ಬೆಳಕಿನ ಅಮೃತದ ಪದಕೆ
ನಡೆಯಿಸು ಸಂಕ್ರಾಂತಿ.

(ಮದ್ರಾಸ್ ಎ. ಐ. ಆರ್.
ಕೃಪೆಯಿಂದ) 'ಶ್ರೀನಿವಾಸ' ಬೆಂಗಳೂರು.

ಹುಲ್ಲು ಕಟಿಗ

ಗೃಹಪತಿಯು ಸುಮನಸನು ವಸಿತೂ ದನಕರುಗಳಿಗೆ
ದಿನದಿನಕೆ ಹೊರೆ ಹೊರೆಯು ಹುಲ್ಲು ಕೊಯ್ಯುತಿರುವ
ತೊತ್ತಿನ್ನ ಬಡವನ ಮನೆಯ ಹಿತ್ತಿಲ ಬಳಿಗೆ
ಕಾಡುತಲಿಹವನೊಮ್ಮೆ ತಿರುಗುತ್ತಿರುವ
ಶ್ರಮಣನೊರುವನ ಕಂಡು ಕುಯಿಲ ನಿಲ್ಲಿಸಿ ಬೇಗ
ನೋಡಿ ಕಾಲ್ಗೆರಗಿ, ಮುಡಿದನವನಡಿಯ ಮೇಲ್.
'ಕೊಂಚ ತಾಳ್ಮೆ ಮುನಿಪ, ಮನೆಪೋಗಿ ಬರುವೆನೀಗ'
ಎಂದು ಮನೆಗಾಗಿ ತನಗಿಟ್ಟ ಹಿಡಿಗೂಳ
ತಂದವನ ಮುಂದಿರಿಸಿ, 'ಉಣು ಜೀಯ' ಎನಲುಂಡು
ಸ್ವಾತಿ ಹನಿಯೊಂದುದುರೆ ಸಿಂಪಿತೀವಂತೆ,

ಬಸಿರಾರೆಯಾಗಿ ತೇಗುವ ಶ್ರಮಣನನು ಕಂಡು
ಅನ್ನಬರನುಬ್ಬಿ ಕರು ಬಿಟ್ಟ ಗೋವಂತೆ,

ಇಂತೆಂದ—'ಜೀಯ, ಸಂಕವಿ ಕೆಸರ್ಗೆ ಕುಸಿದೆನ್ನ
ಕನಿಕರಿಸಿ ನಲ್ನುಡಿಯ ನಡುಗೆಯ್ಯ ನೀಡ!
ಶ್ರಮಣನವನಿಗೆ—'ಗೆಳೆಯ, ನಿನ್ನೊಳೋರ್ ಪರರನ್ನ,
ಕಟ್ಟವಶ್ಯಕೆ ಮಿಕ್ಕ ಧನವನೀಡಾಡ.

'ಕೊಲಬೇಡ, ಕಳಬೇಡ, ಕಳ್ಳ ಕುಡಿಯಲು ಬೇಡ,
ಜೂಜಾಡಬೇಡ, ಮೋಸವ ಮಾಡಬೇಡ,
ಮುಳಿಸು ಮತ್ಸರ ಬೇಡ, ಸುಳ್ಳು ನುಡಿಯಲುಬೇಡ,
ಲೋಭ ಮದ ಬೇಡ, ಹಾದರವಾಡ ಬೇಡ.

ಈ ಧರ್ಮದಲಿ ರೆಕ್ಕೆಗೊಳೆ ಸುಲಭವಾಗೆದ್ದೆ,
ನೇರಾಗಿ ನಡೆಯೆ ಕೆಸರಲಿ ಕೆಡೆಯಬೇಕೆ?
ಸುಬುಧನಾಗಿ ಜಸವಡೆದು ಬಾಳ್ಗೆ ಇಹಪರ ಗೆದ್ದೆ;
ಕೇಳೆನ್ನ ಗೆಳೆಯ, ಹಕ್ಕಿಗೆ ಸಂಕವೇಕೆ?'

'ಆಸಂಪದಾಪ್ತದೆಯ, ಕೋಣನಿಗೆ ಕೊಂಬದಂತೆ,
ಸೋರ್ಮನೆಯು ತೊಟದಂತೆ ಬೇಲಿ ಮಾಡದಂತೆ,
ಎನ್ನೊಳಿಲ್ಲದನೋರ್ವೆ ಬೆರಳುಗುರುಗಳನಂತೆ.
ಹಣದಿಂದ ಹಿಂಜರಿವೆ, ಹಾವು ಹಾದಂತೆ

ಕೊಲ್ಲೆ, ಕದಿಯೆ, ಕಳ್ಕುಡಿಯೆ, ಮುಳಿಯೆ, ಮೋಸವ ಮಾಡೆ,
ಜೂಜಾಡೆ, ಹಾದರಿಸೆ, ಮೇಣಹಂಕಾರ
ಲೋಭ ಮತ್ಸರ ಮಾಣ್ಡೆ ನಿನ್ನೊಡೆಯ ಸುಳ್ಳಾಡೆ-
ಹೊತ್ತೆ ಭಾಷೆಯುನಿಂದೆ' ಎನಲನ್ನ ಭಾರ,

ಶ್ರಮಣಂ ತಥಾಸ್ತೆಂದು ತೆರಳಲಾ ಮರುಮನೆಯ
ಕಿಟಿಕಿಯಿಂದವನೆಲ್ಲ ಕಾಂಬ ಗೃಹಪತಿಯು
ಮಗಳವನ ಕರೆದೊರೆದಳಿಂತು—'ಭಾಪುರೆ ನೆನೆಯ-
ದೆಂತರ್ಜಿಸಿದೆ, ಅನ್ನಭರ, ಪುಣ್ಯತತಿಯ!'

ಮಗಳ್ ನುಡಿಯುತಿರ್ದೊಳ್ ಸುಮನನೆನೆ ಹೊರವಂದು-
'ಏನಮ್ಮ? ಏನಾಯ್ತು? ಜಾರೆ, ಬಾರಿತ್ತ!'
ಕೆಚ್ಚಲಿಂ ಧಾರೆಯನೆ ಮಾಗಿಗೆಯನಿಳಿತಂದು
ನಗುತೆಂದಳವಳಪನ ಕೆಲಕೆ ಸಾರುತ್ತ-

'ಕೇಳಪ್ಪ,— ಭಗವಂತನಿರಿಸಲಿತ್ತಲೆ ಸಾರೆ,
ತನ್ನ ತುತ್ತನ್ನವನಿಗನ್ನಭರನಿತ್ತ!
ಅವನೊರೆದ ಧರುಮದಲಿ ಹಕ್ಕಿಯನೆ ಗರಿಯಾರೆ
ಚರಿಪೆನೆಂದಿವನಾತನಿಗೆ ಭಾಷೆ ಹೊತ್ತ,

'ತಾತ, ನೀನನುದಿನ ಯಥೇಷ್ಟ ಬಡವರಿಗೀವ
ದಾನ ಬಡವಾಯ್ತಿವನ ಪಿಡಿಗೂಳ ಮುಂತೆ
ನಡುಹಗಲಿನಂಗೆಯ್ಯ ರವಿ ಜೀಗುತಿರೆ ದೀಪ
ಳಿಗೆಯನಾ ತುದಿಯನೀ ತುದಿಗುರಿಸಿದಂತೆ!

ದಾರಿಗೀರಿಯ ಗೊಡವೆ ನಿಮಗೆ, ಇನ್ನವಗಿಲ್ಲ,
ಸುಗತನೊರೆದುದೆ ದಾರಿ ತನಗೆ ಬೇರೇಕೆ?
ಎಂದಿನಿಂದಾನಪ್ಪ, ಕಿಟಿಕಿಯೊಳೆ ಇಹೆನಲ್ಲ,
ಕಂಡು ಬುದ್ಧನನಕಟ ಕಾಣದಿರಬೇಕೇ?

ಆಳನಟ್ಟಲೆ ತಾತ! ಕರಸಾತನಂ ನಿನ್ನ
ಬಳಿಗೆ! ಕೇಳವನ ಪುಣ್ಯದೊಳೊಂದು ಪಾಲ!
ನೀ ಧನಿಕನವ ಬಡವ, ಕೊಡನೆ ಕೇಳುವ ಮುನ್ನ?
ಇಟ್ಟುಕೊಳುವಿಯ ಇಂತೆರದೆ ನೀನವನ ಸಾಲ?'

ಸುಮನನೊಡನನ್ನಭರನಂ ಕರೆದು ನಗೆಗೂಡಿ
ಇಂತೆಂದನವಗೆ—'ಬಾ, ಬಾರೈ ವದಾನ್ಯ!
ಜಾಗು ಜಾಗುರೆ ಅನ್ನಭಾರ, ಬುದ್ಧನಿಗೂಡಿ
ನೀನಾದಿ, ನಿನ್ನ ಮನೆಯಾಯ್ತು ಗಡ ಧನ್ಯ!'

'ಯಾರಯ್ಯ? ಯಾರಾತ?'— ನಿಟ್ಟಿಸಿದವನಾಗ-
ನಾನು ನಸಿದವನೆ ಭಗವಂತನೇನೊಡೆಯ?

ಬುದ್ಧನಿಗೆ ಏತಿಗೂಳಿ? ಮಡದಿ ಮಕ್ಕಳ ಭಾಗ
ಕೊಡುತಿದ್ದೆನಲ್ಲ! ನಾನೇ ಸಾದೆ ಮಡೆಯ!

ಜೇಯ ಉಳಿಗೂಳ ತಳಿಪವನ ಬಳಿಪಿಡಿಪಂತೆ
ಕಳುಹಂಯದಕಟವನ ತಪ್ಪನೆನಿತಾಂತೆ!
ಮನೆಯೊಳಗ ಗಂಡುಮಗು, ಹೊರಗೆಷ್ಟು ಹಡೆದಂತೆ
ಧನ್ಯನೇಂ ಕಂಡವನ ನುಡಿಸಲೇಂ ನೋಂತೆ!'

'ತಾಳು, ತಾಳನ್ನಧರ!' ಮುನನವನಿಗಿಂತೆಂದ,
'ನಿನ್ನ ಪುಣ್ಯದಿ ಪಾಲನೆನಗೆ ನೀ ಕೊಡೆಯಾ?'
'ಅದ್ದಿ ಏನಿಲ್ಲ, ಭಗವಂತನಿಗೆ ಮಾತೊಂದ
ನರುಹಿ ಬಹೆ, ಮತ್ತೆ ಪಾಲೀವೆ ನಿನಗೊಡೆಯಾ'

'ಹಂಟಕೊಳಿ ನಿನ್ನ ಕಡು ನಿಪ್ಪಿಗಾನಮ ಕುಂದು,
ನೀರತ್ತೆ, ಗೆಳೆಯ, ಬತ್ತಿತೆ ಗಾಂಗವಾರಿ?'[೧೨]
'ಬಗೆದೆ ಭಗವಂತನೆನಗಿತ್ತ ಒತ್ತೆ ಇದೆಂದು
ಕ್ಷಮಿಸವಂ ನೀಡೆಂಬ ವರೆಗೆ ದಯದೋರಿ.'

'ಒಳಿತನ್ನಧರ, ತಡವಾಗಿದೂ ಸುಗತನನು ಕೇಳಿ
ಬಾ' ಎಂದು ಕಳುಹಲಾ ತೊತ್ತು ಮನೆಗಾಗಿ,
ಮನೆಯುವರಿಸಿಸುಕೊಂಡ ಮಿಕ್ಕುಣಿಸ ಕಯ್ತಾಳಿ,
[೧೩]ಗೌತಮನ ಬೆಂಬಳಿ ಮನೋಜವದಿ ಸಾಗಿ,

ದಾರಿಯೊಳಿ ಕಂಡು ಬುದ್ಧನ ತಂದ ತಿನಿಸಿಕ್ಕೆ,
ಅದನುಂಡು [೧೪]ಶಾಕ್ಯಮುನಿ ಹರಸುತಿಂತೆಂದ–
'ನೀನನ್ನವೆನಗಿಕ್ಕೆ ಹೆಸರೆನ್ನೊಭರವಕ್ಕೆ!'–
ಅನ್ನಭರನೆಂದಾದನವನಂದಿನಿಂದೆ.

ಆಗೆನ್ನಭರನೆಂದ—'ಧನ್ಯನಹೆ ಭಗವಂತ
ಹೆಸರ್ಗೆ, ಹರಕೆಗೆ; ಕ್ಷಮಿಸು ನಿನ್ನರಿಯದೆನ್ನ!
ನನ್ನೊಡೆಯ ಕೇಳ್ದ ನಾ ನಿನ್ನ ಬೋಧದಿನಾಂತ
ಪುಣ್ಯದಲಿ ಪಾಲವನಿಗೀಯಲೆ ಅದನ್ನ?'

ಬಿಸಿಲು ಮಳೆಗಾಳಿ ಜೊನ್ನವ ಬಿಸಿಲಿನುಮತಿಯು
ನನ್ನ ಭರ ಬೇಡುವರೆ? ನೀಡುವರೆ? ನೋಡ;
ಸೊಡರಿಂದ ಸೊಡರುದಿಸಿ ಊರಿನಾ ಗೃಹತತಿಯು
ಬೆಳಗುವೊಲು ನಿನ್ನ ಪುಣ್ಯದ ಪಾಲ ನೀಡ.'

ಸುಗತನಿಂತೆನೆ ತುಂಬುವೆರೆಯು ನಟ್ಟಿರುಳಂತ
ಶಾಂತ ಭಾಸ್ವಂತ ಭಗವಂತನಿಗೆ ಮಣಿದು,
ಅನ್ನೆಭರ ಮರಳಿ ಬರಲಲ್ಲೆ ಬಾಗಿಲ ಮುಂತೆ
ಕಾವ ಸುಮನನ ಕಂಡು ನಲಿದು ಮನೆದಣಿದು,

'ಒಡೆಯ, ಭಗವಂತನೊಪ್ಪಿಹನು, ಪಾಲನು ಪಡೆಯ!
ಎನೆ, ಸುಮನನವನ ಬಿಗಿಸೆಳೆದಪ್ಪುತಾಗ,
'ಸಲಿಸಲೆಂತೀ ಸಾಲ? ನಿನಗಿತ್ತೆ ಬಿಡುಗಡೆಯ!
ಹೊನ್ನಿತ್ತೆ, ಅಣ್ಣ, ನನ್ನಯ [೧೫]ಸರಿಕನಾಗ!'

ಎನಲನ್ನೆಭರ ಸುಮನಗೆರಗಿ, ಮಂಡಿಯನೂರಿ,
ಕೆಯ್ಮುಗಿದು ತಲೆವಾಗುತೆಂದ— 'ನನ್ನೊಡೆಯಾ
[೧೬]ಮಾರದೀ ಪಾಲಿದಕ್ಕೆ ಸಾಲದೀ ಜಗ ಪೂರ[೧೭]
ನಿನಗುಚಿತವಿದನಿತ್ತೆ ಕೊಳನದಕೆ ಪಡಿಯಾ![೧೮]

ಹೊನ್ನು ಬಿಡುಗಡೆಯೊಳ್ಳೆ, ನಿನ್ನಾಳ್ತನದಿ[೧೯] ಸಲುವೆ
ಭಗವಂತನೆನಗೆ, ಹಣವೀಡಾಡಬೇಕು?
ನುಗ್ಗೊಳಿಹ ಹುಳುಕೂಡೆಯು ಬಿಗ್ಗೆಯೋಗರದೊಲವೆ?
ಎನ್ನ ಕುಡುಗೋಲೆನ್ನ [೨೦]ಗುಡಿಲೆನಗೆ ಸಾಕು'

ಗೋವಿಂದ ಪೈ, ಮಂಜೇಶ್ವರ.

೧ ಅರಿ=ಕೊಯ್ಯು. ೨ ಶ್ರಮಣ, ಸವಣ=ಬೌದ್ಧ ಭಿಕ್ಷು. ೩ ಸಂಕ=ಸೇತುವೆ. ೪ ಓ=ಪ್ರೀತಿಸು. ಓವ=ಪ್ರೀತಿಸುವನು. ೫ ಕಟ್ಟಿವಸ್ತ್ಯ=ಅತ್ಯಂತ ಆಗತ್ಯ. ೬ ಅವ್ವ=ತಂಪೆ. ೭ ಅಂಗೆಯ್ಯ=ನೋಡುವಾಗ ಅಂಗೈ ಗಾತ್ರದಷ್ಟಾಗಿ ತೋರುವ. ೮ ದೀವಳಿಗೆ=ದೀಪಾವಳಿ. ೯ ಸುಗತ=ಬುದ್ಧ. ೧೦ ತೆರದೆ=ಮರಳಿಕೊಟ್ಟು ತೀರಿಸದೆ ೧೧ ಊಡಿ=ಉಣಿಸಿ. ೧೨ ಗಾಂಗವಾರಿ=ಗಂಗಾನದಿಯ ನೀರು. ೧೩ ಗೌತಮ=ಬುದ್ಧ. ೧೪ ಶಾಕ್ಯಮುನಿ=ಬುದ್ಧ.

೧೫ 'ಮೂಲ ಕಥೆಯಲ್ಲೂ ಆ ಹುಲ್ಲು ಕಟಿಗನ ಪೂರ್ವನಾಮವನ್ನು ಹೇಳಿಲ್ಲದೆ, ಮೊದಲಿನಿಂದಲೂ ಅತನನ್ನು 'ಅನ್ನೆಛರ--ಅನ್ನೆಛಾರ' ಎಂದೇ ಹೆಸರಿಸಿದೆ. ೧೬ ಸರಿಕ = ಸರಿಸಮಾನನಾದವನು. ೧೭ ಮಾರದು=(ಮಾರಿ ಹೋಗದು) ವಿಕ್ರಯಿಸಲಾರದು. ೧೮ ಮಾರಿ = ಪ್ರೀತಿಯಾಗಿ ಕೊಟ್ಟರೂ. ೧೯ ಪಡಿ= ಪ್ರತಿಫಲ. ೨೦ ಆಳ್ತನ - ಒಡೆತನ. ೨೧. ಗುಡಿಲು = ಗುಡಿಸಲು.

ಮುಗುದೆ

ಜನ್ಮಸವಿ ನಿಂದೊಪ್ಪಿಯುಡೆ ಕೊಸಲಾಗಿ ಜನದಲಿ
ನಡೆಯಲಾರಳಿವಳು ।
ಲಜ್ಜಾವಗುಂಠನವು ಕಣ್ಣ ಮುಸುಕುವುದಾಗಿ
ಮೊಗವೆತ್ತಲಾರಳಿವಳು ॥
ಕೆಂದುಟಿಯ ನಗೆಯಿಂದ ಬಿಗಿದಂಟಿಸಿದಳಾಗಿ
ಬಾಯ್ತೆರೆಯಲಾರಳಿವಳು ।
ಎದೆ ಬಿರಿವುದಾಗಿ ಕೈಬೀಸಲಾರದೆ ಬಳುಕಿ ಮೋನದಲಿ
ಮೆಲು ನಡೆವಳು ॥ ೧ ॥

ಹೂಮುಯ್ಯನಳಿಗಣ್ಣು ಕುಕ್ಕುವುದೆನುತ್ತಲೋ ಮಾನದ
ಬಿಸಿಲಿಗಳುಕಿಯೋ ।
ಸಿರಗನೇಕಡಿಗಡಿಗೆ ಸಂಪಣಿಸೆ ಬಹು ಬೆಲೆಯ ಕೊರಳಹಾರವ
ಮರೆಸಲೋ ।
ಅಲ್ಲದಿರಲಿದೆಯಲ್ಲಿ ಕೊರತೆಯಹುದೇನಬಲೆ ನಮ್ಮೊಡನೆ
ಹೇಳದಿಹೆಯಾ ।
ನಾವಸ್ಮರೇ ಮುಗುದೆ ನೀನುಸಿರದಿರೆ ಬಗೆಯಲಾರೆವೇ
ನಿನ್ನ ಬಗೆಯ ॥ ೨ ॥

ನೆಲವನಿಟ್ಟಿಸಿ ನಡೆವೆ ಎದೆಯ ಮುತ್ತಿನ ಮಾಲೆಗೊಂದು
ನಾಯಕರತುನವ ।
ಹುಡುಕಿ ಪಡೆವೆನೆನುತ್ತಲಿಡುಕಿಹರೆ ಬೀದಿಯಲಿ ನಿನ್ನ
ಜೀವನದ ಘನಿಯ ।

ಬಯಲಾಸೆಯಿದು ಬಾಳೆ ಹುಡುಕಿದರೆ ದೊರೆಯುವದು ಬಳಿಗೆ
ತಾನಾಗಿ ಬಹುದು ।
ನಿನಗೆ ಬೇಕಾದರದು ಹಂಬಲೆಲ್ಲವ ತೊರೆದು ಪ್ರೇಮಸಾಗರದಿ
ದುಮುಕು ॥ ೩ ॥

ಅದ ನಾವು ಕಂಡಿಹೆವು ಬಣ್ಣಿಸಲು ಕಲಿತಿಹೆವು
ಗುರುತುಗಳನರಿಯಿಸುವೆವು ।
ಮಿನುಗುತಿಹ ಕಲ್ಲಲ್ಲ ಬೆಲೆಗಟ್ಟಲಳವಲ್ಲ ಜೀವಿತಲತೆಯ
ಕಲಿಕೆಯು ॥

ನಿನ್ನ ಕಂಕಣದ ಕಿರುದನಿಗೆ ಕಂಪೆರೆಯುವುದು
ಬೊಗಸೆಗಂಗಳ ನೋಟದಿ !
ಉಯ್ಯಾಲೆಯಾಡುವುದು ನಿನ್ನ ಕುರುಳಿನ ಮುಗಿಲ
ಮಡಿಲಲ್ಲಿ ಪವಡಿಸುವುದು ॥ ೪ ॥

ಅತ್ತ ಕಿವಿಗೊಡು ತರಳೆ ಕತ್ತಲೆಯ ತೆರೆಮರೆಯೊ
ಳಂತರಂಗದ ನುಡಿವುದು ।
ದುಗುಡದಲಿ ನೀಸೆರಗನುಗುರಿಸುತ ಕುಳಿತಾಗ
ಬಿಂಬಿಪುದು ಕಂಬನಿಯೊಳು ॥
ಅಂತಾಗೆ ಕೈಗಳವೆ? ನಿನಗೆ ಬೇಕಾದರದು ಪ್ರೇಮಸಾಗರದಿ
ದುಮುಕು ।
ಕರವ ಸಂಪುಟಗೊಳಿಸಿ ಕಣ್ಮುಚ್ಚಿ ತೆರೆವಾಗ
ಹೃದಯರಾಗದಿ ನಲಿವುದು ॥ ೫ ॥

(1927) ಸೇಡಿಯಾಪು ಕೃಷ್ಣಭಟ್ಟ, ಮಂಗಳೂರು.

ಲೋಕ ರೀತಿ

೧ ಅಲರೊಂದು ಮೊಗವರಳಿ
ಬಲು ಹೊತ್ತಿನಿಂ ಕಾದು

ಬಂಡುಣಿಯ ಸ್ವಾಗತಿಸಿ
ಉಂಡು ತಣಿ ಮಧುವೆಂದು
ತುಂಬಿಹುದು ನಿನಗಾಗಿ
ಎನ್ನಿನಿಯ ನೀ ಬಾರ
ಎಂದೆಂದು ವಿನಯದಲಿ
ತಲೆ ತನ್ನ ಬಾಗಿಸಿತು, ತೂಗಿಸಿತು.

೨ ಸ್ವಾಗತಕೆ ದನಿಯಿತ್ತು
ರಾಗದಲೆ ಪಾಡುತ್ತ
ಬಳಿಸಾರಿ ತುಂಬಲರ
ನಳಿತೋಳ ತೆಕ್ಕೆಯಲಿ
ತುಂಬಿ ತಾ ಮೈಮರೆತು
ಸವಿಜೇನನೀಂಟುತಿರೆ
ಕಡೆಗಣ್ಣ ನೋಟಕ್ಕೆ
ಬೇರಲರು ಕಾಣಿಸಿತು; ಜಾನಿಸಿತು.

೩ ನೆರೆಯಲರ ಸಿರಿಬಣ್ಣ
ಸೆರೆಗೊಂಡು ಮಧುಕರನ
ಕರೆಕರೆದು ತನ್ನೆಡೆಗೆ
ಬರಸೆಳೆದು ಸೇರಿಸಲು
ಮುನ್ನಲರ ಮಧುವುಂಡ
ಭ್ರಮರವದು ಅದ ಮರೆತು
ಹೊಸವಲರ ಮೋಹದಲಿ
ಮೈಯುಬ್ಬಿ ಚುಂಬಿಸಿತು; ನಂಬಿಸಿತು.

೪ ಲೋಕದಿದು ನಿಜರೀತಿ
ಸಾಕಾಗೆ ಸಹಯೋಗ
ಮನಸಾಕವಿರಲೇನು
ಘನವೊಲುಮೆ ಇನಿತಿಲ್ಲ.
ನೇಹವದು ತನಿಸೋಗು

ವಂಚಕರ ಮಾಯುಬಲೆ
ರಾಗರಸ ಸುಲಿದೊಡಸೆ
ಸಾರಸನಿ ಹಿಂಗುವುದು; ತಂಗುವುದು.

ಶ್ರೀಮತಿ 'ಗಿರಿಬಾಲೆ' ಉಡುಪಿ

ಸುಗ್ಗಿ

(ಕನ್ನಡಿಯಿಂದಲೇ ಬರೆದ 'ಕಾಲೂರ ಚೆಲುವೆ'ಯ ಒಂದು ತುಣುಕು)

ಸುಗ್ಗಿ ಬಂದಿತ್ತು ಕುೞಿರ್! ತಂಗಾೞಿ ಪೋಗ್ಬಿಸಿಲ !
ಸೊಗ್ಗಿಸಿತು ಪೂದಳಿರ್ಗಳಲಂಪ ಕೂಡಿ !
ಹಿಗ್ಗಿರ್ಪ ಕಂಗಳಿಗೆ ! ಚೆಲ್ವಿಕೆಯ ಚೆಲ್ಲಾಡಿ !
ಮುಗ್ಗರಿಪ ಬಡ ಬಾಳ್ಗಳಿಂಗೆ ಕೈ ನೀಡಿ ॥ ೧ ॥

ಪೂದೊಡಂಬೆಯ ನೆೞಲ್ ! ತಾಗೆ ತೊರೆಯೊಳ್, ತೀಡಿ !
ಪೋದುವಂತಿರೆ ಕನ್ನಡಿಯ, ಚೆಲ್ವು ಕಣ್ಗೆ !
ಕೋದು ಪೂಮಿಡಿ ತಳಿರ ! ಕಾಡು ಸಲುಪೊಗರಿಸಿಂ !
ಪೂದಿಂಗಳರಸನಂ ! ಕರೆಯುಗುಂ ತುೞಿಲ್ಗೆ ॥ ೨ ॥

ಒಗೆದ ಪೂಪಣ್ಗಳಿಂ ! ತೊಡವಾಗೆ ಮಲೆಚೆಲ್ವು !
ಮುಗಿದು ಪಜ್ಜಿಲೆಗಯ್ಯ ತಟ್ಟಿ ಮೈ ಮಣಿಯೆ !
ಪಗಲಿರುಳ್ ಕಯ್ಸಡಿಮ ಕನ್ನಡಿಯನೇರ್ಪಡಿಸಿ !
ನಗೆ ಬಿಸಿಲ್ ಬೆಳ್ದಿಂಗಳೊಟ್ಟಿನಿಂ ಕುಣಿಯೆ ॥ ೩ ॥

ಎನಿತು ಪಸುರ್ದೊಳ್ತೆರಮ ! ದೆನಿತು ಮಂಜಳ ಕೆಂಪ
ದೆನಿತು ನಾಲಗೆ ಸುಡಿಯ ವಿರ್ಪ ಪೊಗರೆನಿತು? !
ಎನಿತು ಸರುಗಮ್ಮು ನೋಣೆನ್ನಲಿಯ ಬೆಡಗೆನಿತು !
ತನಿಯೊಸರ ಪೂವುಡಿಯ ಪೊಸ ಸೋನೆಯೆನಿತು ! ॥ ೪ ॥

ಕಯ್ತೊಂಬೆಯಂ ತೂಗೆ । ಸೆಲೆವಟ್ಟು ಕುಂಟಟ್ಟು !
ನೈ ಮುರಿಯುತೆಲೆವೆರಸನಲುಗಿ ಪೆಂಬಣ್ಣು ।
ಕಾಯ್ಗಳಂ ತೊಡವಿಟ್ಟು । ಹೂವಿಟ್ಟು ಕುಣಿಯುವಳ್ ।
ನೈವೆತ್ತ ಹಸುರುಟ್ಟು ಕಾಲೂರ ಹೆಣ್ಣು ॥ ೫ ॥

ಹೂವೆಲೆಯ ಚೆಲ್ವಾಡಿ । ಪಣ್ಕಾಯಕಾಣ್ಕೆಯಿಂ ।
ದೋಣಿ ನೇಸರ್ ಸೆರೆಗಳಿಂ ಸೊಡರ ಬೆಳಗಿ ।
ತೀವಿ ಕಮ್ಪಿನನಲ್ತೆ । ತುಳಿಲ್ಗೈಯುತಿದೆ ತುಂಬಿ ।
ಕಾಪನಂ ಬಗೆವೆತ್ತು ಬಲಿಯುತಿದೆ ಸುಗ್ಗಿ ॥ ೬ ॥

ಕೆ. ಪುಟ್ಟಣ್ಣ ಗೌಡ, ಸುಳ್ಯ.

ಭಕ್ತವಾತ್ಸಲ್ಯ

ಶ್ರೀರಮಣೀವರನವುಳಿನ-
ಪೇರುರನಘದೂರ ಶೌರಿ, ಪ್ರೋಣ್ಣೆರೆಯುಂದುಂ ।
ಭಾರತದಾಹವದೊಳ್ ತಾಂ
ಸಾರುಂಬಳಿಪಿಡಿಯಿಸೆಂದು, ಬಳಿಯುಂ ಧುರದೊಳ್ ॥ ೧ ॥

ಕಾಲಂ ಗಟ್ಟುಗ್ರದೆ ಕರ-
ವಾಳಮುನಾಂತಿರದೆ ಪಡೆವನೋ! ಪೋಣಾ ಶ್ರೀ ।
ಶೂಲಿಯೆ ಲಯಕಾಲದೆ ಜನ-
ಜಾಲಮುನಾರ್ದಿಕ್ಕಿ ಬಹನೊ! ಪೇಳ್ವೆ ಭೀಷ್ಮಂ ॥ ೨ ॥

ಭೂರಿಬಲಂಗಳನುಂ ನೃಪ-
ವಾರಮುನುಂ ಬಿಡದೆ ಕಡಿಯುತಾಗಳೆ ಯಮುನಾ ।
ಗಾರಮುನೊಳವುಗಿಸುತೆ, ಜನ-
ವಾರಿಧಿ ಭಯಮುಗೊಳೆಯುತೋಘ ಶೌರ್ಯದೆ ಪ್ರೋಯ್ದಂ ॥ ೩ ॥

ವೀರಾಗ್ರಣಿ ಪಾರ್ಥಂ ಕಡು-
ಶೌರ್ಯೋತ್ಸಾಹದೆ ವಿಶೇಷ ಕೌಶಲದಿಂದಂ ।
ಕೂರಲಗಂ ಎದೆಗಾಣಿಸಿ
ಸ್ರೋಲದೇಂ ಭೀಮ ಭೀಷ್ಮನಪರಿಕ್ಷಿಪನೇ ? ॥ ೪ ॥

ಏಗಳ್ ಕಣೆಯುಂ ತೊಡಚುವ
ನೇಗಳ್ ಶರಮಿಸುವನೆಂಬ ಬಗೆಯುಂ, ಬಗೆಗಂ ॥
ಪಾಗದು ಭಾವಿಸಲೆಸೆ, ಭಟ-
ನಾಗಳ್ ಸರಸಂ ವಿಭಾಡಿಸಿದನಾಹವದೊಳ್ ॥ ೫ ॥

ನೊಂದು ನರಂ, ಮೇಣ್ ಮೂರ್ಛೆಗೆ
ಸಂದಂ, ತೇರ್ ತಿರ್‍ರನೆಂದು ತಿರುಗಲ್, ಹರುಗಳ್ ।
ಅಂದಂ ಗಿಡೆ, ಮತ್ತಂ ಮಿಗೆ,
ಸಂಧಿಸಿದಂ ಕೋಲ್ ಸಾಲ ಗೋವಿಂದಂಗಂ ॥ ೬ ॥

ಕೂರಲಗುಂ ನಾಂಟಲ್ ಪಣೆ-
ಗೋರಂತಿರದೊಡನೆ ನೊಂದು ಬೆಂಮಂ ಬಗೆಯೊಳ್ ।
ಭೂರಿ ಕ್ರೋಧಮನಾಂತುಂ
ಶ್ರೀರಮಣಂ ತಾಂ ತುಡುಂಕೆ ಚಕ್ರಮನಾಗಳ್ ॥ ೭ ॥

ಈಗಳೆ ಭೀಷ್ಮನ ಜೀವನ
ನೀಗಿಪೆ ಜಗಮೆಲ್ಲ ದಣಿಪೆನೆಂದುಂ ಭರದೊಳ್ ।
ಯೋಗೀಂದ್ರವಿನುತ ಚಕ್ರಮ-
ನಾಗಳೆ ತಾಂ ಕಳುಪಲೆಂದು ನಿಂದಂ ನೆಲದೊಳ್ ॥ ೮ ॥

ನಲವಿಂದೀಕ್ಷಿಸಿ ಭೀಷ್ಮಂ
ಫಳಿಲನೆ ತಾನಿಳಿದು ರಥಮನಿರಗುತಲೆಂದಂ ॥
ನಳಿನಾಕ್ಷ ಏನಿದೇನಿದು !
ಛಲಮ್ಮೆ, ನೀನೆನ್ನ ಕೊಲ್ಲೆನೆಂದುಂ ಬಗೆದ್ಯೆ? ॥ ೯ ॥

ಸೃಷ್ಟಿ ಸ್ಥಿತಿಲಯ ಕಾರಣ !
ಕಷ್ಟಮದೇಕಿನಿತು ? ಕೊಲಲು ಚಕ್ರಮದೇಕೈ ? ॥

ಇಷ್ಟೇಂ ಸಾಹಸ? ಗುಬ್ಬಿಯ
ಹುಟ್ಟಡಗಿಸಲೇಕೆ ಬಿದಿಯ ಬಾಣಮುಮೇಯುಂ? ॥ ೧೦ ॥

ಆದೊಡದೇಂ ಚಕ್ರದೆ ಹೊಡೆ !
ಮಾಧವ! ನೀಂ ಮನದಿ ಬೇರೆ ಬಗೆಯಲ್ವೇಡಾ ।
ಶ್ರೀಧರನೇ! ನಿರತಂ ತವ
ಪಾದಾಂಬುಜ ಭಕ್ತನೆನ್ನ ಮುಟ್ಟುಗೆ! ನೋಳ್ಪೆಂ ॥ ೧೧ ॥

ಹರಿ! ನಿನ್ನ ನಾಮ ಸುಧೆಯಂ
ಭರದಿಂದೀಂಟುತೆಯುದಾಪಗಂ ಸಂತಸದೊಳ್ ।
ಇರುತಿರ್ಪುದಿದುಂ ನಿಜಮಾ-
ಗಿರೆ, ನೀನಾರ್ದಿಟ್ಟರೆನ್ನ ಮುಟ್ಟದು ಚಕ್ರಂ ॥ ೧೨ ॥

ಮಿಗೆ ತವ ಪವಿತ್ರ ನಾಮಂ
ಬಿಗಿದಿರ್ಪ ವಜ್ರಕವಚದಂತಿರೆ ಮೆಯ್ಯೊಳ್ ॥
ನಗಧರ! ಸುದರ್ಶನಂ ತಾ-
ನುಗಿಯಲ್ಕಾರ್ತಪುದೆಯದೇಕೆ ಪೌರುಷ? ಬಿಡು ! ನೀಂ ॥ ೧೩ ॥

ಹೇ ದೇವ ! ಕಳುಪು ಚಕ್ರಮ-
ನೀಮೋಹಿಯ ಕೊಲ್ಲಲೆಂದುಮಾದೊಡಮಂ ತ- ॥
ನ್ನೀದೇಹದ ಸನಿದೊಂದಂ
ಸಾಧಿಸಿಯುರಿಯಲ್ ತವಪದಸೇವಕನಲ್ಲಿಂ ॥ ೧೪ ॥

ವರ ಭಗವದ್ಭಕ್ತಾಗ್ರಣಿ
ಸುರುಚಿರ ಗುಣಭರಿತ ಭೀಷ್ಮನಿಂತೆಸೆ, ಕರುಣಾ ॥
ಭರಣಂ, ಕ್ರೋಧೋದ್ರೇಕಮ-
ನುರೆ ತೊರೆದುಂ, ನಗುತೆ ತೇರನೇರಿದ ನೊಲವಿಂ ॥ ೧೫ ॥

ಹರಿಯುಂ ಧುರದೊಳ್ ಚಕ್ರಮ-
ನಿರದಾಂ ಪಿಡಿವಂತೆ ಮಾಳ್ಪೆನೆಂದುಂ, ಗೆಯ್ದಾ ॥
ವರಗುಣಿ ಭೀಷ್ಮನ ಸಾಹಸ
ದಿರವೇಂ ಕೇವಳಮೆ? ಸುಗುಣದೆತ್ತರಳಿಕಿರಿದೇಂ? ॥ ೧೬ ॥

ಭಾರತರಣದೆ ಸುದರ್ಶನ
ಧಾರಿಯೆ ತಾನಾಗೆನೆಂಬ ಮಾತಂ ಮುರಿದುಂ, ||
ಶೌರಿಯು, ಭಕ್ತನ ಪ್ರೋಣ್ಕೆಯ
ಪ್ರಾರ್ಥಿಸಿದನಮಮ ! ಶರಣರೊಳ್ ಕೃಪೆಯೆಸಿತೋ! | ೧೭ ||

ಸುರತ್ಕಲ್ ಸುಬ್ಬರಾವ್.

ಶಬ್ದಾರ್ಥ: ೧ ಪಾರುಂಬೆಳ್= ಚಕ್ರ. ೨ ಅರ್ದಿಕ್ಕಿ= ಹೋರಾಡಿ. ೩ ಕೋಲು = ಬಾಣ. ೪ ಅರ್ದಿಸಿಟ್ಟ= ಚುಚ್ಚಿ ಹೊಡೆದು ಬಿಟ್ಟ. ೫ ಅತ್ಯರ್ಪಣೆ= ಸಮರ್ಥ ವಾಯ್ತು. ೬ ನವಿರ್= ಕೂದಲು. ೭ ಅರಿಯಲ್= ತುಂಡು ಮಾಡಲು ೮ ಎಳ್ತರ= ಉನ್ನತಿ.

ಪುರುಷ ಸೂಕ್ತ

೧ ಮೇಲೆದ್ದನು ಮಾದೇವ!

ಸಾವಿರ ತಲೆ ಸಾವಿರ ನೆಲೆ
ಸಾವಿರ ಕಿಡಿ ಕಣ್ಣೋಟ
ಸಾವಿರ ನಡೆನುಡಿ ಮುಮ್ಮಡಿ
ಸಾವಿರ ಬಿಸಿಯುಸಿರಾಟ!

ಸಾವಿರ ಯುಗ ತಾಮಸಿಯಲಿ
ಸಾವಿನ ಹೆಡ ತಲೆಮೆಟ್ಟಿ
ಸಾವಿರ ಯುಗ ಜಾಗೃತಿಯಲಿ
ಹುಟ್ಟಿನ ಮೈ ಮುರಿಕಟ್ಟಿ-

ಸಾವಿರ ಜನ ಹೃತ್ಕೋಶದ
ಆಕ್ರೋಶದೆ ಹೊರಬಿದ್ದು
ಸಾವಿರದಿನ ರಾತ್ರಿಯ ಸಂ-
ತೋಷದೆ ಮೈನವಿರೆದ್ದು

ಸಾವಿರ ಬಾಯ್ ಬೇಗುದಿಯಲಿ
ಹಸಿವಿನ ಹಲ್ ಕಡೆಕಡೆದು
ಸಾವಿರ ಕೆನ್ನಾಲಗೆಯಲಿ
ಮೂಲೋಕದ ಮೊಲೆಯುಂಡು

ಸಾವಿರಗಳನೆಲ್ಲಾ ಬರಿ
ಕೈಯಲಿ ತಾಕುಡಿಕುಡಿದು
ಸಾವಿರದವ ತಾನೊಬ್ಬನೆ
ತಾನೇ ಕೊನೆಮೊದಲೆಂದು

ಮೇಲೆದ್ದನು ಮಾದೇವ!
೨ ಮೇಲೆದ್ದನು ಮಾದೇವ!

ನೀರಾಯಿತು ನೆಲ ತೋರಿತು
ಹಬ್ಬಿತು ಜೀಕಿನ ಬೆಂಕಿ
ಯಾರಿಲ್ಲದ ಶೂನ್ಯತೆಯಲಿ
ಸಿಂಹಾಸನವನೇಕಾಕಿ!

ಮಾರನು ಮೈದೋರನು ಸಂ
ಸಾರದ ಕೃತಿ ತೊಡಗಿಲ್ಲ
ಆರಂಭದೊಳೋಂಕಾರದ
ದನಿಯೊಂದೇ ಜೀವಾಳ!

ದೆಸೆಗಂಡನು ಮುನಿಸಿಲಿ ಮೈ
ಹೊಸೆಹೊಸೆದನು ಮಾದೇವ
ಕಸುಸಿಸಿರಿತು - ಎರಡಾಯಿತು
ಒಂದೇತನದನುಭಾವ!

ಕಾರುಣ್ಯದ ಕೃತಿಯಂಚಲಿ
ವಲಿ ತೋರಿತು ಶೃಂಗಾರ
ತಾರುಣ್ಯದ ರಸ ಸಮ್ಯಕ್
ಸಾಯುಜ್ಯದ ಪರಿವಾರ!

ಸಿಡಿದೆದ್ದನು ಮನ್ಮಥ! ಜಡ
ಪಡಿಸಿತು ಪೌರುಷ ಲೋಕ
ಅಡರಿತು ಮೈ ಮನಸಿಲಿ ಹೊಸ
ಹುಮ್ಮಸ ವಿಸ್ಫುಜ್ಜೀಕ!

ಮೇಲೆದ್ದನು ಮಾದೇವ!

೩ ಮೇಲೆದ್ದನು ಮಾದೇವ!

ಮಳೆ ಸುರಿಯಿತು ಹೊಳೆ ಹರಿಯಿತು
ನೀರ್ದುಂಬಿತು ನೆಲನೆಲಕೆ
ಹೊಲಹೊಲದಲಿ ಬೆಳೆಬಿತ್ತಿತು
ಮೇಲೆದ್ದಿತು ಸಿರಿನೋಕೆ

ಅನುಕೂಲದ ಮನದಾಳದ
ಮಾನುಷ್ಯದ ಮೃದು ಮಮತೆ
ತನದೆಂಬುವ ತತ್ಪರತೆಯ
ಕೃತಿಕಲ್ಪದ ಕಾತರತೆ!

ಜೀವದ ಬಾಯ್ ರುಚಿಗೊದಗಿತು
ರಸರೋಚಕದನುಪಾನ
ಸಾವ್ ಸುತ್ತಿದ ಹೂವಿನ ಹೊಸ
ಪರಿ ಪರಿಮಳದುದ್ಯಾನ!

ವಿಧಿಯಾಟದ ವೈವಿಧ್ಯದ
ನೈವೇದ್ಯದ ನವನೀತ
ಇದು- ಸುರುಚಿರ ಸಾಗರದಲಿ
ಸೇರುವ ಜೀವನ ಸೂಕ್ತ!

ಸಾವಿರ ತಲೆ ಸಾವಿರ ನೆಲೆ
ಸಾವಿರ ಕಿಡಿ ಕಣ್ನೋಟ
ಸಾವಿರ ನುಡಿ ನಡತೆಯ ಸಂ

ಸಾರವ ಬಿಸಿಯುಸಿರಾಟ!

ಮೇಲೆದ್ದನು ಮಾದೇವ!

ಎಸ್. ವೆಂಕಟರಾಜ, ಉಡುಪಿ.

ಶ್ರೀಕೃಷ್ಣನ ನಾಡು.

(ಸತ್ಯಾಲೋಕನ ಕಾವ್ಯದಿಂದ)

ಶ್ರೀಮದ್ರಮಸಂಕಾಂಬುಧಿ।
ಸೋಮಂ ಸದ್ಧರ್ಮಬೀಜಸವನೀಕಾಂತಿ।
ಪ್ರೇಮಂ ಸದ್ಗುಣ ಗಣ ನಿ।
ಸ್ಸೀಮಂ ಶ್ರೀ ಕೃಷ್ಣದೇವನ ಸಮಪ್ರತಿಮಂ ॥ ೧ ॥

ರವಿಶಶಿಪಾವಕಾಕೃತಿಯನಾಂತಮ ಕೃಷ್ಣನ ಘೋರಶೌರ್ಯರೋ
ಚವಿತತಿ ದುಷ್ಟ ವೈರಿ ಕುಮುದಾಂಬುಜಕಾನನಕೆಂದೆನಲ್ ಸುರೂ।
ಪವಿಮಳ ತೇಜಮುಂ ಸುಡದೆ ಕೋಡದೆ ಪ್ರೊತ್ತದೆ ಕಾಂತಿ ಬೀರುವಾ।
ರವಿ ಶಶಿ ಪಾವಕಾಕೃತಿಯುವೆಂಬಿನಮೊಪ್ಪಿದನೇಂ ಮಹಾತ್ಮನೋ ॥ ೨ ॥

ರಿಪುದೈತ್ಯಾನೀಕಮಂ ಬೆಂಬಿಡಿದು ಬಿಡಿಸು ತೀಡಾಟುಗುಂ ವೈರಿಹೃತ್ತಂ।
ವಿಪುಳಂ ಕೋಕ್ಗುಟ್ಟಿಕುಂ ಕುಂಕುಮ ತಿಲಕಮನಾಭಾಮಿನೀವಕ್ತ್ರದಿಂಕೆ।
ಕ್ತ್ರಪಹಾರಂ ಮಾಡುಗುಂ ಮೇಣತುಳಘನವ ಕೈನಾಚರ್ಗುಂಸಂತಸಂಸೇ।
ವಿಪ ಸಾಧುವ್ರಾತಮಂ ಸಂತಯಿಪ ಸುಗುಣದಿಂ
ಕೃಷ್ಣದೇವ ಪ್ರಭಾವಂ ॥ ೩ ॥

ನಾಗನ ಸಂತಯಿಕುಂ ಬಿ।
ಜ್ಞಾಗಂಗಳ ತಣಿಸಿಯಾವಿಜಿನ್ನೋತ್ತುಗಳಂ।
ಜೇಗಂ ಸಡಿಲಿಸಿ ನಾಕದ।
ಲೋಗರುಮಂ ಹರಿಸಪಡಿಕುಮಾವನ ಪ್ರಭಾವಂ ॥ ೪ ॥
ವಸುಧಾ ಭಾರವನಿಳಿಸೆ ಗಿ।

ರಿಪುನಾಣತಿವಡೆದು ಪ್ರಪ್ಟಿಯಿಸಾ ಪರಿ ದುರುಳ |
ಪ್ರಸರವನೆಸುವನೆನುತುಂ |
ನಿಸವಂ ಪೇಳ್ದಲ್ಲಿ ಸಂದೆಯುಂ ಬಂದಪುದೇ || ೫ ||

ಮುಳಿಸಿನ ಮಾತು ನೀಂ ಬರೆಪಂ ಪ್ರಸಿವೋಸದ ಕಾಡುವಪ್ಪಿಸಂ |
ನಿಳಿತಮುಯೋಗ್ಯತಾನೆನೆಸ ಮಿಂದು ಕರಾನ್ವಿತ ಮಡ್ಡ ಕೊಯ್ಯುದಾ |
ಕಳವಿನ ಪಾಂಟುಪಕ್ಕೆರುಜೆಯುಂಬಿದುಳರ್ಕಸಿಬಿರ್ ಪಿಪಾದಪಾ |
ಕುಳ ಗೃಹಕಭ್ರಮೇ ನೆಲೆಯೆನಲ್ ನೆಲಸೊಪ್ಪಿತು
ಶೌರಿಯಂಕೆಯಿಂ || ೬ ||

ಪ್ರಿಯಭಾವಂ ಪರನೋಪಕಾರಮುದಿರಾಚಿತ್ರಂ ಮನಸ್ಸಂಯಮುಂ |
ನಯವಾಕ್ಯಂ ಗುರುದೇವತಾನುರತಿಯುಂ ಜ್ಞಾನಂ ತಪಂ ಸತ್ಯಮುಂ |
ದಯೆದಾನಂ ಧೃತಿ ಶುದ್ಧಿ ಶೌರ್ಯಗುಣ ಮಾತ್ಮೀಯತ್ವ
ಮೆಂಬೀಗುಣೋ |
ದಯದಿಂ ವರ್ಣಿತರಾಗಿ ಲೋಗರೆಸವರ್ ಮಾಹಾತ್ಮ್ಯದಿಂ
ಕೃಷ್ಣನಾ || ೭ ||

ನಿಯಮಿತ ತೇಜೋ ಮಾರ್ಗ ಸ |
ಮಯದಿಂ ರವಿ ನಿತ್ಯವೃತ್ತನೆಂತಂತು ಪ್ರಜಾ |
ಜಯಮೆಲ್ಲಂ ನಿತ್ಯನಿಯಮ |
ನಿಯತರುಮಾಕಾಂತ ಭಕ್ತಿ ಮಾರ್ಗಾಕ್ರಾಂತರ್ || ೮ ||

ಪಕ್ಷವನಾಸದವರ್ ಕರಿ |
ಪಕ್ಷಯುಗಪ ಪಕ್ಷ ಪಕ್ಷಮುದನನುಕರಿಸು |
ತ್ತಕ್ಷಯ ಕಳವನೆಯುತೆ ರ
ಮ್ಯ ಕ್ಷಯದೊಳಾ ಕೃಷ್ಣಪಕ್ಷಮಂ ಪಿಡಿದೆಸವರ್ || ೯ ||

ಹದಿಬದೆ ಪೆಣ್ ಸಂಯತ ಚಿ |
ತ್ತದಂ ಪುರುಷನುತ್ತಮೌಜಸಂ ಜನಮಾನ್ಯಂ |
ಮುದದಂ ಬಾಲಂ ಗುರುಜನ |
ವಿಧೇಯನುಂ ದೇಶಭಕ್ತನಿರ್ಕುಂ ಕುವರಂ || ೧೦ ||

ಇಳೆಗಭಿನುತಮೆನೆ ಸುಗುಣಾ ।
ವೞಿಯುಂ ಕೃಷ್ಣ ಪ್ರಜಾಜನವನೀ ಸಾಗ್ರರ್ಗಂ ।
ಜಳಧಿಯ ಜಳಮೆನಿತಿರೆಯುಂ ।
ತೞಿಗೊಳಸೊಳೆ ಬೆಲೆವುದಲ್ತೆ ಸಲೆ ನೞಿನಕುಳಂ ॥ ೧೧ ॥

ಬತ್ತದು ಕೆರೆ ಪೊತ್ತದು ಮನೆ ।
ಬತ್ತದ ತೆಸೆ ಮುತ್ತಡೆತ್ತಲಾದೊಡಮೆಂದುಂ ।
ಕುತ್ತಂ ತಲೆಯೆತ್ತದೆನಲ್ ।
ಮತ್ತಿನ ನಾಡಿಂತುಟಲ್ತೆನಲ್ ನಾಡೆಸಗುಂ ॥ ೧೨ ॥

ಪಥವಿಡಿವಲ್ಲಿಯಲ್ಲಿ ಪೂಸಬಾಳೆಯ ತೆಂಗಿನ ಕೌಂಗುದೋಂಟದಿಂ ।
ಪೃಥುಳ ಕುಜಾಳಿಯಿಂ ಕಿಸಲಯಾಳಿಯ ಸೋಜೆಯ ಕಾಪುಗಾಡಿನಿಂ ।
ಮಥಿಸಿದ ಚೆಲ್ವಿನಿಂಪೆಸವ ವಾರಿಜಷಂಡದಿನೊಪ್ಪಿ ತೋರ್ಪವು ।
ನೃಥನ ಧನಸುರ್ವಸಂಗಳಿನಮೇಂ ಸೊಬಗೊಪ್ಪಿತೊ ನಾಡೆ ನಾಡಿನಾ ॥ ೧೩ ॥

ಟಿ. ಕೇಶವಭಟ್, ಮೈಸೂರು.

ಹುಣ್ಣಿಮೆ

ಬಿಸಿನಿಯ ಚುಂಬಿಸಿ ಕೋಕವನಗಲಿಸಿ
ರವಿ ಮರೆಯಾದನು ಬಾನ ಮಸುಳಿಸಿ,
ನೋಟವೆ ಸೊಂಪು, ಮನಸಿಗೆ ತಂಪು
ಸಂಜೆಯ ತುಟಿಯಾಯಿತು ನಸುಗೆಂಪು,
ಹಕ್ಕಿಗಳಾಡುತ ಇಕ್ಕೆಗೆ ಬರಲು
ಮಧುಕರಿ ತಾವರೆ ಮನೆಯೊಳಗಿರಲು
ಇರುಳದೊ ಬರುತಿಹಳೊ । ಜಗವನು । ವಂಚಿಸಿ ನಗುತಿಹಳೊ ॥ ೧ ॥

ಬೆಳಕನು ಬೀರಿ ಬಿಳಿ ಮೊಗ ದೋರಿ
ಬಂದನು ವಿಧು ಉದಯಾಚಲವೇರಿ,
ಕುಮುದಿಯನರಳಿಸಿ, ನಳಿನಿಯ ಮುದುಡಿಸಿ

ಬಿಳಿಯುರೆಯಲಿ ಪನಿನೀರನು ಸುರಿಸಿ.
ತಾರೆಗಳಾಟ, ಮುಗಿಲಿನ ಓಟ
ಓಹೋ! ಇದೆ ತಾ ಮಾಯೆಯ ಮಾಟ.
ಧರೆಯಂ ನೋಡುವನೂ । ಮಪನನು । ಹೊಂಚುತ ತಿರುಗುವನೂ ॥ ೨ ॥

ಸೊಬಗಿನ ಕಣಿಯೆ, ಸ್ಮರನರಗಿಣಿಯೆ
ಕಾಣುವೆ ನಿನ್ನನು ನಾ ಮನದಣಿಯೆ.
ತಿಲಕವನಿಟ್ಟು, ಕುಪ್ಪುಸತೊಟ್ಟು
ಬಾರೇ ಜೊನ್ನದ ಸೀರೆಯನುಟ್ಟು.
ಕತ್ತಲೆಯೋಡಲು ನೀನೆಡೆಯಾಡಲು
ಉಕ್ಕುತಲಿದೆ ಕೋ ತುಂಬಿದ ಕಡಲು
ನೊರೆಯಿಂದಾಡುತಿದೆ । ನಿನ್ನನು । ಅಲೆಯಿಂದಪ್ಪುತಿದೆ ॥ ೩ ॥

ಏನೀ ಸೊಬಗು, ಏತಕೆ ಬೆಡಗು
ಜಾರುತಲಿದೆ ಆ ರಜನಿಯ ಸೆರಗು
ಮಿರುಗುವ ನಿನ್ನೀ ಗಾಡಿಯ ನೋಡಿ
ಅಡಗಿತು ತಾರೆಯು ಮುಗಿಲೊಳಗೋಡಿ
ಅರಳಿತು ತಳಿರು, ಅದುರಿತು ಅಲರು
ಮೆಲ್ಲನೆ ಬೀಸುತಲಿದೆ ಕಿರುವೆಲರು,
ಎದೆಯನು ಸೀಳುವುದೂ । ಗಾಳಿಯು । ತೆರೆಗಳಲೇಳುವುದೂ ॥ ೪ ॥

ಏತರ ಚೆಲುವು, ಲಜ್ಜೆಯ ನಿಲುವು
ಹುಣ್ಣಿಮೆ ನೀರೆ! ಕೊಡು ಎನಗೊಲವು
ಏನೀ ಕಲಕಲ ನಗುವೆಯೊ ಕಿಲಕಿಲ.
ಎನ್ನೀ ಎದೆಯೊಳು ಭಾವದ ಕಳವಳ
ರಾತ್ರಿಯ ರಾಣಿಯೆ, ಕಲಸಿಕವಾಣಿಯೆ.
ಪೇಳೀ ತಿರೆಯೊಳು ನಿನಗಾರೆಣೆಯೆ
ಬೆಳಕದು ಚೆಲ್ಲಿರಲೂ । ಚಿಮ್ಮನೆ । ಹುಣ್ಣಿಮೆ ನಗುತಿಹಳೂ ॥ ೫ ॥

ಎಮ್. ರಾಜಗೋಪಾಲಾಚಾರ್ಯ, ಉಡುಪಿ.

ರಾತ್ರೀದೇವಿಗೆ—

[ವೈದಿಕ ರಾತ್ರೀ ಸೂಕ್ತದ ಕಲ್ಪನೆಯ ಆಧಾರದಿಂದ]

ವಿಶ್ವವನೆ ಮುಸುಕುತಿಹ ಓ ರಾತ್ರಿ-ದೇವಿ!
ನಿಜಕು ನೀನಾಗಿರುವೆ-ತಾಮಸದಧಿಷ್ಠಾತ್ರಿ,
ಓ ರಾತ್ರಿ-ದೇವಿ!
ಕಾಣುತಿಹ ಜಗವಿದನು ಕಾಣದಂತಾಗಿಸುವೆ-
ಕಾಣುವೀ ಕಣ್ಗಳನೆ ಕುರುಡು ಮಾಡಿಸುವೆ-
ನೀನು ನೆಲೆಸಿರುವಲ್ಲಿ ಎನಿತು ಕಣ್ತೆರೆದರೂ
ಬ್ರಹ್ಮಾಂಡವೇ ಶೂನ್ಯವಾದಂತೆ ಇಹುದು!
ನೀನಿರಲು ಬೆಳಕಿಲ್ಲ
ಬೆಳಕಿರಲು ನೀನಿಲ್ಲ
ಅದರಿಂದಲೇ ಬೆಳಕು ನಿನ್ನ ತಡೆಯುತ್ತಿಹುದು
ನಿನ್ನ ಪಯಣದ ಗತಿಗೆ ಅದುವೊಂದು ಒಡಕು
ಜ್ಯೋತಿಸ್ಸು ತಮವ ಬಾಧಿಸದಿಹುದೆ...? ನಿಜಕು
[ಜ್ಯೋತಿಷಾ ಬಾಧತೇ ತಮಃ]
ಬೆಳಕಿನೆಡೆಯಲ್ಲಿ ನಿನ್ನಯದೇನು ಬೆಡಗು?
ಎಂತಿದ್ದರೂ ನೀನು ಕಾಲ ರಾತ್ರಿ
ಅಂತರಿಕ್ಷದೊಳಿರ್ಪ ಸ್ತೋತ್ರಪಾತ್ರಿ
ನೀನು-ಕಾಣುವ ವಿಶ್ವಕಿದಕೊಂದು ಆಶ್ರಯಣಿ,
ನಿನ್ನಾಶ್ರಯವನು ಬಯಸುವರೆಲ್ಲ ಜನನಿ!
ಜಾಗರಣೆಯಲ್ಲ ನೀನ್ ನಿದ್ರಾಸ್ವರೂಪಿಣೀ
ಸೃಷ್ಟಿ ಕೋಟಿಗೆ ಸೌಖ್ಯವನ್ನೀವ ಸುಖಿನಿ!
ನೀಡುತಿಹೆ ಸುಖನಿದ್ರೆ-
ಸಂತೋಷದಾ ಮುದ್ರೆ!
ಬಳಲಿ ಬೆಂಡಾಗಿ ದಣಿದಿಹ ಜೀವಕೋಟಿಗಳು
ನಿನ್ನ ಮಡಿಲಲ್ಲಿ ಮಲಗವೆ ರಾತ್ರಿ ರಾಣಿ!

ಭದ್ರೆ ನೀನ್! ಭಗವತಿಯು ನೀನ್! ಕೃಷ್ಣೆ ನೀನ್! ವಿಶ್ವ-
ವೈಶಾಲ್ಯದಲ್ಲಿ ನೀನ್ ನಿಬಿಡಂದೆನಿಸಿಹೆ!
ಅಸ್ತವೇ ನಿನ್ನುದಯ
ಉದಯವೇ ನಿನ್ನಸ್ತ-
ವಿಶ್ರಾಂತಿಯನ್ನೀಸುವರಿಗೆ ನೀನು 'ಸಂವೇಶಿನೀ'
ವ್ಯವಹಾರ ವಿಮುಖರಿಗೆ ನೀನು 'ಸಂಯಮಿನೀ'
ಆಕಾರವನ್ನೆಲ್ಲ ಆವರಣಗೊಳಿಪೆ ನೀ
ಓ ಜನನಿ! ನಕ್ಷತ್ರ ಗ್ರಹಮಾಲಿನಿ!
ಕಾಮದಾಯಿನಿ ರಾಜ್ಞಿ
ಕಾಮಿಜನಕಾಶ್ರಯಿಣಿ—ರಾತ್ರಿ ದೇವಿ!

ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ನೆಕ್ರಾಜೆ.

ನಾಗರಿಕರು

ಪೂರ್ಣ ಪ್ರಜ್ಞರು ನಾವೆಂದರಿತಿಹ ।
ನಾಗರಿಕರು ನಾವು ॥
ಅಧ್ಯಾತ್ಮಿಕದಾ ಸುಡು ಬೂದಿಯೊಳು ।
ಭೌತಿಕವಾದದ ಜೀವನ ಜೀವಿಸುವ ।
ನಾಗರಿಕರು ನಾವು ।
ಈ ವರ್ತಮಾನದ ಯಾರಿಗು ಸೋಲದ ।
ಗಳಿಸಿದುವೆಲ್ಲವು ವೆಚ್ಚಕೆ ಸಾಲದ ।
ನಾಗರಿಕರು ನಾವು ॥
ಹೆಸರಿರದಾವುದೊ ರೋಗದ ವೇಗದ । ನಾಗರಿಕರು ನಾವಲ್ಲ ॥
ಬಡತನ ಸಿರಿತನ ತುಂಬಿದ ಜಗದೊಳು । ಸಮತೆಯು ತರಬಲ್ಲ ॥
ನಾಗರಿಕರು ನಾವು ॥
ವಿಷಯ ಲಾಲಸೆಯ ಅಗ್ನಿಕುಂಡದಲಿ ।

ಶ್ರದ್ಧೆಯ ಹೋಮಿಸಿದವರು ।
ಆಡಂಬರ ದಾಹದ ಹೊಂಡದಲಿ ।
ಸರಳತೆ ಸತ್ವವ ಹುಗಿದವರು । ನಾಗರಿಕರು……
ಸುತ್ತಲು ಹಸಿದಿಹ ಸಾವಿರ ಹೊಟ್ಟೆಯ
ಕೂಗಿಗೆ ಗಮನವ ಕೊಡದವರು
ಎತ್ತೆತ್ತಲು ಕಾಪಟ್ಯವ ಕಾಣುವ
ತೆರೆದಿಹ ಸಾಸಿರ ಕಣ್ಣುಳ್ಳವರು ॥ ನಾಗರಿಕರು……

ನಾವೇ ಬೀಸಿದ ಬಲೆಯೊಳು ಸಿಲುಕಿ
ಹೊರ ಬರಲಾರದೆ ಪರಿತಪಿಸುವೆವು ।
ಚೇತನವಿರುವನು ಜಡದೊಳು ಹುಡುಕುವ
ಮೇಧಾವಿಗಳಲ್ಲವೆ ನಾವು ॥ ನಾಗರಿಕರು ನಾವು ……

ವ್ಯಕ್ತಿಯ ಪತನದ ಕಾರಣವನ್ನು
ವ್ಯಕ್ತಿಯೊಳರಸದೆ ಸಮಾಜವನ್ನು
ದೂರುವ ಸಂಸ್ಕೃತ ಮನುಜರು ನಾವು
ಅನ್ಯರ ಪತನವೆತನ್ನೇಳಿಗೆಯ
ಸಾಧನವೆನ್ನುತ ತಿಳಿದವರು ॥

ಮುಂದೋಡುವ ಜನದುದ್ದದ ಕಾಲನು
ಕಡಿಯುತ ಕುಳ್ಳರ ಕಾಲಿಗೆ ಬಿಗಿಯುತ
ಹಿಂದುಳಿದವರನು ಮುಂತರುವವರು ॥ ನಾಗರಿಕರು ನಾವು ॥

ಧ್ಯೇಯದ ಸಿದ್ಧಿಯ ಸಿದ್ಧಿಯೊಳು
ಸಮತೆಯ ಕಾಣುವ ಕಣ್ಣುಳ್ಳವರು ॥
ಸಿಗರೇಟಿನ ಬಿಳಿ ಹೊಗೆಯಲ್ಲಿ
ಹೊಸ ವಿಶ್ವದ ನಿರ್ಮಾಪಕರು
ಸ್ವಜತೆಯ ಪ್ರಿಯ ಸಾಕ್ಷಾತ್ಕಾರಕೆ
ಆದರ್ಶದ ಬಲಿಕೊಟ್ಟವರು ॥ ನಾಗರಿಕರು ನಾವು ।
ಗೌರೀ ಶಂಕರ ದೌನ್ನತ್ಯದೊಳೂ
ಪೆಸಿಫಿಕ್ ಸಾಗರದಾಳದೊಳೂ
ಸಮತೆಯ ತಂದಿತ್ತಿಹವರು ।

ಆಟಂ ಬೋಂಬನು ಕೈಯೊಳು ಹಿಡಿದೇ
ಶಾಂತಿಯ ಮಂತ್ರವ ಜಪಿಸುವ ಜನರು ||
ನಾಗರಿಕರು ನಾವು
ಪೂರ್ಣಪ್ರಜ್ಞರು ನಾವೆಂದೆಂತಿಪ ನಾಗರಿಕರು ನಾವು.

"ಯಾದವೇಂದ್ರ" ಉಡುಪಿ.

ತೋಟ

ನನ್ನ ನಾಡ ನೋಳ್ಪಂದು
ಹೊನ್ನ ಹೊರೆಯ ಸಿರಿಯ ತಂದು
ಸಗ್ಗವನ್ನು ಮೀರಲೆಂದು
ಹಿಗ್ಗಿ ಹಿಗ್ಗಿ ನೆಗೆದು ನಿಂದು
ಎಸೆಯುತಿರುವೆ ತೋಟವೆ
ಎಂಥ ಸಿರಿಯ ನೋಟವೆ || ೧ ||

ಪಚ್ಚೆರಂಗಿನುಡಿಯನುಟ್ಟು
ಬಿಚ್ಚಿದೆಳೆಯ ತಳಿರ ತೊಟ್ಟು
ಹಣ್ಣು, ಕಾಯಿ ಹೂವ ಬಿಟ್ಟು
ಬಣ್ಣದೊಡವೆ ಮುಡಿಯೊಳಿಟ್ಟು
ಬೆಳೆಯುತಿರುವೆ ತೋಟವೆ
ನಲಿಯುತಿರುವ ನೋಟವೆ || ೨ ||

ಹಕ್ಕಿವಿಂಡು ಹಾರಿ ಬಂದು
ಉಕ್ಕುತಿರುವ ಬೆಳೆಯನುಂಡು
ಸೊಕ್ಕಿ, ನಕ್ಕು, ಹಾರಿ, ನೆಗೆದು
ಸೌಖ್ಯಕಾಗಿ ಗೂಡಗೈದು
ಮೆರೆಯುತಿಹವು ಮುದದಲಿ
ನಿನ್ನ ಪುಣ್ಯ ದಯದಲಿ || ೩ ||

ನಾಡಿಗಿಂದು ನೀನೆ ಅರಸು
ನಿನ್ನ ಮರೆಯೆ ಸಿರಿಯು ಕನಸು
ನಿನ್ನ ಸೇವೆಯೊಂದೆ ಉಣಿಸು
ನಿನ್ನ ಮಕ್ಕಳನ್ನು ಹರಸು
　　　　ನಿನ್ನ ದಯದಿ ಬಾಳ್ವೆವು
　　　　ನೀನು ತೊರೆಯೆ ಸಾವೆವು ॥ ೪ ॥

ಬಾನನೋಡಿ ನೋಡಿ ನಲಿವೆ
ಮೌನದಿಂದ ಮುದವ ಕರೆವೆ
ನಾಡ ಕಾಮಧೇನು ಇರುವೆ
ಬೇಡಿದಂಥ ಫಲವ ಕೊಡುವೆ
　　　　ಕೊಡುವ ದಯವು ನಿನ್ನದು
　　　　ಪಡೆವ ಪುಣ್ಯ ನಮ್ಮದು ॥ ೫ ॥

ನಾರಾಯಣ ಶೊರ್ಕೆ, ಬಂಕಿಕೊಡ್ಲು

ಪಾವನನ ಪಾಡು

ಮೂಡಣಾಗಸದಲ್ಲಿ
ಹುಣ್ಣಿಮೆಯ ನಿಶಿಯಲ್ಲಿ
ಮೂಡಿಬಹ ಚಂದಿರನು ಹೊಳೆಯುತಿಹನು ॥
ನಾಳೆ ಬಹ ಸುಖದುಃಖ
ಗಳನೆಲ್ಲ ಭಾವಿಸುವ
ಮಾನವನ ಮೂಢತೆಗೆ ನಗುತಲಿಹನು ॥
ಜಗದೊಳಗೆ ಅವನಿಂತು ಚರಿಸುತಿಹನು ।
ಮಿಗಿಲಾದ ಜ್ಞಾನವನು ಹಬ್ಬುತಿಹನು ॥
　　‘ಇಹದಲ್ಲಿ ದಣಿಯುವುದು
　　ಪರವನುದ್ಧರಿಸಲಿಕೆ’
　　ಎಂಬ ಸಾರುವ ನುಡಿಯು ಕಾಡು ನುಡಿಯು ॥

ಅಲ್ಲಿ ಸುಖವನು ಬಯಸಿ
ಇಲ್ಲಿ ನೋವನು ಸಹಿಸಿ
ಕೊರಗುತಿಹ ಮಾನವನು ಮೂಢನಹನು ।
'ಪರ'ವೆಂಬ ವಿಷಯವನು ಸಾಧಿಸಲಿಕೆ ।
ಇಹದಲ್ಲಿ ಕೊರಗುವುದು ಏನು ಸರಿಕೆ? ॥

ಇಹವೆಲ್ಲ ಪರಕಾಯ್ತು
ಸುಖವೆಲ್ಲ ಬರಿದಾಯ್ತು
ಮಾನವನ ಬದುಕಿನಲಿ ಫಲವದೇನು? ॥
ಪರವು ಶಾಶ್ವತವೆಂದು
ಇಹವು ನಶ್ವರವೆಂದು
ಸಾರುವವನಲ್ಲೆಮಗೆ ವಿಶ್ವಾಸವೇನು? ॥
ಇಹದಂತೆ ಪರಲೋಕವಿರಲಿಕಿಲ್ಲೇನು?
ಇಹುದು ಗುಣಯುತನಾಗಿ ಇಹದಲ್ಲಿನ್ನೇನು? ॥

*　　*　　*　　*　　*

ಇಂದು ನೀ ಗಗನದಲಿ
ಉಡುಗಡಣದೆಡೆಯಲ್ಲಿ
ತಾನೆ ತಾನಾಗಿರುತ ಸುಖಪಡುತಲಿ ।
ಮಮತೆ ಸೌಜನ್ಯಗಳ
ಶಾಂತಿ ಸಹಕಾರಗಳ
ನೆಲೆಯಾಗಿ ಅಕ್ಷದಲಿ ಬೆಳಗುತಿರುತ ।
ಜಗಕೆ ನೀತಿಯನೊರೆದು ಸುಖವ ನೀಡು ॥
ಮನಕೆ ಶಾಂತಿಯನ್ನಿತ್ತು ನಿರತ ಕಾಪಾಡು ॥

'ನಮ್ಮಂತೆ ಪರರಾಗಿ
ಅವರ ನಗು ನಮಗಾಗಿ
ಇರಲದುವೆ ಸುಖ'ವೆಂಬ ಭಾವವಿದನು ॥
ನಿನ್ನ ಉದಯಾಸ್ತದಲಿ
'ಇಳಿತ ಭರತ'ದ ಕಡಲು

ಜಗದಿ ನಿತ್ಯವು ನಮಗೆ ಸಾರುತಿಹುದು ||
ಕಷ್ಟ ಸಂತುಷ್ಟಿಗಳ ಬಿತ್ತರಿಸುತಿಹುದು ||
ಸೃಷ್ಟಿ ವೈಚಿತ್ರ್ಯದಲಿ ನೀನೊಬ್ಬನಹುದು ||

ನಿನ್ನ ಮಂಡಲದಲ್ಲಿ
ಜೊನ್ನ ಕೆನೆ ತುಂಬಿರಲು
ಜಗದ ಜೀವನಿಗಾಗಿ ಅದನೆರೆಯಲು
ಅಜ್ಞಾನವನು ನೀಗಿ
ಸತ್ಯ ಪಥದಲಿ ಸಾಗಿ
ಪ್ರಕೃತಿ ದೇವಿಯ ಮಗುವು ನಲಿಯುತಿರಲಿ ||
ನಿನ್ನಂತೆ ಜಗವಾಗ ಬಯಸುತಿಹೆಯಾ?
ನಿನ್ನಂತೆ ಪರರ ಸಂತೋಷಿಸುವೆಯಾ? ||

ನಿನ್ನ ಬೆಳಕಿನ ಮುಂದೆ
ಎಲ್ಲ ಸುಖಗಳು ಹಿಂದೆ,
ಮಂಜು ಬಿಸಿಲಿನ ಮುಂದೆ ಕರಗುವಂತೆ ||
ನಿನ್ನೆಳನಗೆಯ ಮುಂದೆ
ಸಕಲ ದುಃಖವು ಕಂದೆ
ನೀನೆ ಸರಿ ನಿನಗಿನ್ನು ಚಂದಮಾವ. ||
ನೀನು ಜಗದಧಿದೇವ ಚಂದಮಾಮ ||
ನೀನು ಸುಖದಭಿಮಾನಿ ಚಂದಮಾಮ ||

ಸುಖದುಃಖಗಳ ಕಂತೆ
ಭಿನ್ನ ಮುಖಗಳ ಚಿಂತೆ
ಎಲ್ಲಕೂ ನೀನೆ ಕಾರಣನಿರಲು ಬೇಕು! ||
ಸುಪ್ತ ಚೇತನದಲ್ಲಿ
ಜಾಗೃತಿಯ ಹೊಂದಿಸಲು
ನೀನುಳಿದ ಬಳಿಕೆಲ್ಲಿ ಆಶೆಯಿರಬೇಕು |
ದಿವ್ಯಗುಣಧಾಮ ನಿನ್ನೆಳನಗೆಯ ಬೀರಿ
ದಿವ್ಯತೆಯ ಕಡೆಗೆ ಸಾಗಿಸು ದಾರಿ ತೋರಿ ||

ಗರಿಗೆದರಿ ನಿಂದಿರುವ
ಭೀಮ ಭೂರುಹನಿವಹ
ನಿನ್ನೆದೆಯ ಹಾಲುಂಡು ತಣಿಯುತಿಹುದು ॥
ನಿನ್ನ ಹೆಮ್ಮೆಯ ಕಳಸ
ನನ್ನ ಮೇಲ್ಮೆಯ ವಿಳಸ
ನನ್ನ ನಿನ್ನಿಂದ ದೂರವೆ ಇರಿಸುತಿಹುದು ॥
ದುರಹಂತೆ ಮಿತಿಮೀರಿ ನಿನ್ನಿಂದಲೆನ್ನನ್ನು-
ಕೊಂಡುಕೊನರದ ತೆರದಿ ಅಡ್ಡಿ ಬರುತಿಹುದು ॥

ಹಲವು ಮಾರ್ಗದಿ ತೊಳಲಿ
ಕಲ್ಲು ಮುಳ್ಳಲಿ ಬಳಲಿ
ಸುಖದ ಹಾಡಿಯನರಸಿ ಬಳಲಿ ಬೇಸತ್ತೆ ॥
ಸಾಕಾಯ್ತು ಈ ಬಾಳು
ಸ್ವಾಭಿಮಾನದ ಬೀಳು
ನನ್ನ ತೀವನು ಕುಲುಕಿ, ನೀನು ಬೆಳಗಿಸುತೆ
ದೇವ ಕಾಪಾಡು ಸುಖ ಸಾಗರವ ನೀಡು ॥
ಪಾವನನ ಮಾಡೆನ್ನ ನಿರತ ಕಾಪಾಡು ॥

ಕೆ, ರಮಾನಾಥರಾವ್, ಬಿ. ಎ. ಸುರತ್ಕಲ್ಲು.

ವಿಚಿತ್ರ ವೇದಾಂತ

(ಶಿವ ಮಲ್ಲಿಕಾ ಸಂವಾದಂ) ಸಾಂಗತ್ಯ ರಾಗ

ಶಿವ--ಮುಗಿಲು ಮುತ್ತಿಹುದತ್ತ ಕತ್ತಲಾಗುತೆ ಬಂತು,
ಗಗನವು ಗುಡುಗುಡಿಸುತಿದೆ;
ನಗರಾಜಗಮನೆ! ನೀನೆತ್ತ ಪೋದಪೆ? ಕೈಯೊ-
ಳಗೆ ರಾಜಿಸುವುದೇನು? ಬಾಲೆ!

ಮಲ್ಲಿಕೆ—ಗುಡಿಗೆ ಪೋಪೆನು ನಾನು ಕನಕಾಂಬಿಕೆಯ ಕಾಣು-
ತಡಿದಾವರೆಯ ವಂದಿಸಲ್ಕೆ;
ತಡವಾಯ್ತು ಗೃಹಕೃತ್ಯ ಮುಗಿವಾಗ ಗೆಳೆಯನೆ,
ಪಿಡಿದಿಹೆನರ್ಘ್ಯಭಾಜನವ.

ಶಿ—ಮಲ್ಲಿಕೆ! ನೀನೇನ ಕಲಿತುದು ಬಹು ಕಾಲ,
ಕಲ್ಲಿಗೆ ಪೂಜೆ ಮಾಡುವುದೇ?
ಬಲ್ಲವಳೆ ನೀನಿಂತು ಮೂಢಳಾದರೆ ಮತ್ತಾ-
ನೆಲ್ಲರ ಪೇಳುವದೇಕೆ ?

ಮ—ಕಲ್ಲನು ಪೂಜಿಸಲಲ್ಲ ನಾ ಪೋಪುದು
ಬಲ್ಲವರೊಡೆಯ ನೀ ಕೇಳೋ,
ಸುಳ್ಳಲ್ಲ, ನಾ ಪೋಪುದಂಬಿಕಾ ಪದಯುಗ-
ತಲ್ಲಜವನು ಪೂಜಿಸಲ್ಕೆ.

ಶಿ—ಎಲ್ಲಿ ನಿನ್ನಂಬಿಕೆ? ಮಲ್ಲಿಕೆ! ಮಂದಿರ-
ದಲ್ಲುಂಟು ಕಲ್ಲಿನ ಬೊಂಬೆ,
ಫುಲ್ಲಲೋಚನೆ! ಮನದ ಜ್ಞಾನವಲ್ಲವೆ ?
ಕಲ್ಲನಂಬಿಕೆಯೆಂಬೆಯಲ್ಲೇ ?

ಮ—ಮನವನು ಭಕುತಿಯಿಂ ತೊಳೆದು ನಿರ್ಮಲ ಮಾಳ್ಪ
. ಜನರಿಗೆ ಪ್ರಿಯಮಾತೆಯವಳು,
ಮನದೊಳು ಭಕ್ತಿಯು ರಸವಿಲ್ಲದವನಿಗೆ
ಮುನಿದಾಕೆ ಕಲ್ಲಿನಂತಿಹಳು.

ಶಿ—ಇರಲಿ; ನಾನೊಂದ ಕೇಳುವೆ ಕೇಳು ತರುಣಿಯೆ!
ಪರದೇವನೊಬ್ಬನಾಗಿರಲು,
ಹರಿಯೆಂದು ಹರನೆಂದು ಗಿರಿಜಾತೆ ಗಣಪರೆಂ-
ದರುಹುವರೇತಕೆ ? ಪೇಳು.

ಮ—ಅವನೊಬ್ಬನದು ನಿಜ, ನೀ ಪೇಳ್ದ'ಯವನೊಬ್ಬ'-
ನವನೆ ಶ್ರೀಹರಿಯೆಂದು ಕೆಲರು

ಶಿವನೆಂದು ಮತ್ತೊಬ್ಬ ಗಣಪನೆಂದಿತರರು
ಶಿವೆಯೆಂಬೆ ನಾನದರಿಂದೇಂ?

ಶಿ—ನಾರಿ! ನಿನ್ನಯ ದೇವ ನಾರಿಯಾಗಿಹನೆಂತು?
ನಾರಿಪೂರುಷ ಭೇದವವಗೆ–
ಸೇರದು; ನಿತ್ಯನಿರ್ಗುಣ ಸರ್ವಭೂತಾದಿ
ಕಾರಣನವನಲ್ಲವೇನೈ?

ಮ—ಸರಿ ಸರಿ; ನೀನಜ್ಞನವ ಲಿಂಗರಹಿತನಾ
ದರೆ ನೀನೆಂತವನೆಂದುಸುರಿದೆ?
ತರಭೇದವವಗಿಲ್ಲವಾದರೆ ನಾರಿಯೆಂ-
ಬುರು ಭಕ್ತಿಯೊಳು ದೋಷವೇನೋ?
'ತಿಳಿದುದರಿಂದಲೆ ತಿಳಿಯದಿದ್ದುದನೆಲ್ಲ
ತಿಳಿ'ಯೆಂದು ನುಡಿಗೀತಿಯಿಹುದು,
ಕಲಿಯೊ ಬಾಲನೆ ನೀಂ ಪ್ರಾಜ್ಞೋಪದೇಶವ
ತಿಳಿದವರಿಂದತಿ ಬೇಗ.

ಶಿ—ಜಗಕೆ ಕಾರಣನವ; ಜಗದಿ ತುಂಬಿರುತಿರೆ.
ಬಗೆದು ಮಂದಿರಕೇಕೆ ಪೋಪೆ?

ಮ—ಜಗವ ತುಂಬಿಹಗಿಲ್ಲಿ ಸ್ಥಳಭೇದವಾದರೆ
ಪುಗುವೆ ನಾನಂಬೆಯಾಲಯವ?

ಶಿ—ಕಲವಾಣಿ! ನಿನ್ನೊಳು ತುಂಬಿಹನವನಲ್ಲೊ,
ನಿಲದೆ ಮಂದಿರಕೇಕೆ ಪೋಪೆ?

ಮ—ನೆಲಸಿಹನೆನ್ನೊಳಾದುದರಿಂದಲವನನು
ಕಲೆಯಲಲ್ಲಿಗೆ ನಾನು ಪೋಪೆ.

* * * *

ಎಂದು ಪೇಳುತೆ ನಾರಿ ತೆರಳಲು, ತ್ವರೆಯೊಳು
ಕುಂದಿದಾನನವಾಗಿ ಶಿವನು–

ಬಂದನು ತನ್ನಯ ವಸತಿಗೆ-ಬಲುವಾಗಿ
ನೊಂದನು ಮನದೊಳಗವನು.

ಎಳೆವಯಸಿನೊಳು ನಾವೀರ್ವರನ್ಯೋನ್ಯದಿಂ
ಗೆಳೆತನದಿಂದಿರ್ಪೆವಯ್ಯೋ !
ಸುಲಲಿತ ಕೋಮಳೆಯವಳೆನ್ನ ವಚನಂಗ-
ಳೊಳು ಭೇದವೆಣಿಸಲಿಲ್ಲ.
ಎಡೆಯಿರುವಾಗ ನಾನವಳೊಳು ಪೇಳಿಹೆ-
ನಡಿಗಡಿಗಾ 'ಸಿದ್ಧ' ಮಂತ್ರ,
ಒಡನದಕೊಪ್ಪುತಲವ'ಳಂಥ ನಂಬಿಕೆ
ಇಡಲಾರೆ'ನೆಂದುಸುರಿಹಳು.
ಸರಸ ಮಾತಿನವಳು, ರತಿಯಂತೆ ಸುಂದರಿ,
ಸ್ವರದಿ ಕೋಗಿಲೆಯ ಮೀರಿಹಳು;
ಎರಕವಾಗುವಳು-ಮನ್ಮನಕೆಂದು ನೆನಸಿದೆ,
ಬರಿದೆ ಹಾ! ಕೋಪಮಾಡಿಸಿದೆ !

*   *   *   *

ತರುಣಿಯೊಳ್ ಮನಸೋತು ಶಿವನವಳೊಡನೆಯೆ
ಚಿರಕಾಲ ಪೋದ ಮಂದಿರಕೆ,
ಗುರುಕೃಪೆಯಿಲ್ಲದ ವೇದಾಂತ ಗತಿಗಿದು
ಪರಿಣಾಮ ಫಲವಪ್ಪುದು.

ಕೆ. ಎ. ದೇವದಾಸ, ಉಡುಪಿ.

ಪುನೀತ ಭಾರತ

(ಕಂದಂಗಳ್)

ಪ್ರಥಮೋದಯ ಕಿರಣಂಗಳ
ಪ್ರಥಮಂ ಭಾರತ ಹಿಮಾದ್ರಿಗರ್ಪಿಸಿ ದಿನಪಂ ।

ಪ್ರಥಮಂ ವಂದನಗೈದಾ
ಕತದಿಂ ಭಾರತ ಪುನೀತವಾಯ್ತುದು ಧನ್ಯಂ ॥ ೧ ॥

ಕೃಷಿ ಸಂಪನ್ನಂ ಭಾರತ
ಋಷಿ ಸಂಪೂಜ್ಯಂ ಸುಕೀರ್ತಿ ವೈಭವನಿಲಯಂ ।
ಋಷಿಗಳ ಪರಿಯೋಲ್ ನಿತ್ಯಂ
ಕೃಷಿಕಂದೇಶವಸುಭಿಕ್ಷಗೊಳಿಪುದು ಸ್ತುತ್ಯಂ ॥ ೨ ॥

ರತ್ನಂಗಳೊಳಂ ವಿಶ್ವದ
ರತ್ನಂ ಋಗ್ವೇದ ಭಾರತ ಮಹಾರತ್ನಂ ।
ರತ್ನ ಪ್ರಭೆಯಿಂ ಭಾರತ
ರತ್ನಾಕರಮಿದು ಪುನೀತ ವಿದ್ವತ್ತೀರ್ಥಂ ॥ ೩ ॥

ಮನು ವರ ವಾಲ್ಮೀಕಿಯರುಂ
ಘನ ಮಹಿಮಾನ್ವಿತರನೇಕ ಭಾರತ ಪುರುಷರ್ ।
ಜನಿಸುತ್ತಮರತೆ ಪಡೆದರ್
ಘನವಾದರ್ಶಂ ಪುನೀತ ಭಾರತ ಧರ್ಮಂ ॥ ೪ ॥

ದರ್ಶನ ಜ್ಯೋತಿಃಶಾಸ್ತ್ರಂ
ತರ್ಕಂ ನ್ಯಾಯಂ ವಿಧಾನ ಸತ್ಸಿದ್ಧಾಂತಂ ।
ಸರ್ವ ವ್ಯಾಪಕ ಮಾನ್ಯ ಮ
ದುರ್ವಿಯೊಳೆಂದುಂ ಪುನೀತ ಭಾರತ ಪೂಜ್ಯಂ ॥ ೫ ॥

ಗೀತಂವಾಙ್ಮಯ ನಾಟ್ಯಂ
ನೂತನ ಕಲೆಯುಂ, ಬೆಳಗಿವೆ ವೇದಗಳಿಂದಂ ।
ಜೋತಿರ್ಮಯಮೀ ಸಂಸ್ಕೃತಿ
ನೀತಿಯುದಾತ್ತಂ ಪುನೀತ ಭಾರತ ಸ್ವರ್ಗಂ ॥ ೬ ॥

ಕೆ. ಎನ್. ಭಟ್, ಶಿರಾಡಿಪಾಲ್.

'ಸಾಹಿತಿಯಾಗು'

ಸಾಹಿತ್ಯವನು ತಿಳಿವೆ! ಸಾಹಿತಿಯು ಆಗಿಲ್ಲ!
ಅಭ್ಯಾಸ ಬಹುಗೈವೆ! ಆಗಬಲ್ಲೆಯೊ ಏನೊ!
ಆದರೂ ತಿಳಿದವರು ಮನಮೆಚ್ಚಿ, ಸಾಹಿತೀ,
ಎನ್ನದಿರೆ ತಿಳಿಯುತಿರು ಸಾಹಿತಿಯು ನೀನಲ್ಲ! ॥ ೧ ॥

ಹಿತಸಹಿತ ಸಂಸ್ಕಾರ ಕೊಡದಿರುವ ಸಾಹಿತಿಯೆ!
ಹಿತರಹಿತ ಸಂಸ್ಕಾರ ಕೊಡುವ ಓ ಸಾಹಿತಿಯೆ!
ನಾನು ಸಾಹಿತಿಯೆಂದು ನೀನು ಹೇಳುವುದಲ್ಲ,
ಜನ ತಿಳಿದು ಅಹುದೆಂದು ಹೊಗಳುತಿರಬೇಕಲ್ಲ! ॥ ೨ ॥

'ರಸಿಕಜನ ಒಪ್ಪಿದಿರೆ, ಅಭಿನಯದ ಕೌಶಲ್ಯ
ಸರಿಯೆಂದು ನಾನುಸಿರೆ,' ಎಂದಿಹನು ಕವಿವರ್ಯ.
ಅದೇ ಪ್ರಮಾಣವು ನಿನಗೆ, ಅದು ಹೊರತು 'ನಾನಾದೆ
ದೊಡ್ಡ ಸಾಹಿತಿ' ಹೇಗೆ ಎನ್ನುವುದು ಅಪಹಾಸ್ಯ! ॥ ೩ ॥

ಪದ್ಯ ತೆಂಗಿನ ಫಲವು ಒಡೆದು ಸವಿದರೆ ಸಿಹಿಯು
ಗದ್ಯ ಕದಳೀ ಫಲವು ಸುಲಿದು ಮೆದ್ದರೆ ರುಚಿಯು
ಕತೆಯು ದ್ರಾಕ್ಷಿಫಲವು ಮೃದುವು ಸುಲಭವು ಸಿಹಿಯು
ಅದನೆ ಒಲಿವುದು ಜನವು ಅದು ಸಹಜ ಅಭಿರುಚಿಯು! ॥ ೪ ॥

ಕತೆಯ ಸುಲಭದ ಸಿಹಿಯು ಸವಿಯೆ, ಕಷ್ಟದ ಗದ್ಯ
ಪದ್ಯದಾ ಬಹುರುಚಿಯು ಸವಿ ಮಾಸಿ ಹೋಗುವುದೆ?
ಗದ್ಯ ಪದ್ಯದ ಸವಿಯು ಹೀರುವಭ್ಯಾಸ ನಿನ
ಗಿಲ್ಲದಿರೆ ಆ ಸವಿಯು ತಪ್ಪೆ? ಅದು ನಿನ್ನದೆ? ॥ ೫ ॥

ಕಾವ್ಯಕ್ಕೆ ಮಿಗಿಲು ಕತೆ, ಕವಿಗಿಂತ ಕತೆಗಾರ
ಮಿಗಿಲೆಂಬ ಹೊಸತು ಕತೆ ಅದು ಅಂತೆಗಳ ಕಂತೆ!
ರಸವೆಲ್ಲಿ ಹುದುಗಿರಲಿ! ಅದನು ಆಸ್ವಾದಿಸುವ
ಅಭ್ಯಾಸ ನಿನಗಿರಲಿ ಅದು ಕಾವ್ಯವೋ ಕತೆಯೊ! ॥ ೬ ॥

ಉತ್ತಮದ ಸಂಸ್ಕೃತಿಗೆ ಶ್ರೇಷ್ಠ ಸಾಹಿತ್ಯ ನೆಲೆ!
ಸಾಹಿತ್ಯ ಶ್ರೇಷ್ಠತೆಗೆ ಶ್ರೇಷ್ಠ ಸಂಸ್ಕತಿಯು ನೆಲೆ!
ಗಂಡಹೆಂಡಿರ ತೆರವು ಸಾಹಿತ್ಯ ಸಂಸ್ಕೃತಿಯು
ಒಂದಕೊಂದಾಶ್ರಯವು, ಬಿಡದೆ ನಡೆವುದು ಜತೆಯು! ॥ ೭ ॥

ನಾನೆಂದು ತಾನೆಂದು ಮೇಲು ಸಾಹಿತಿಯೆಂದು
ದ್ವೇಷ ಮತ್ಸರ ತಂದು ಬೈದುಕೊಳುತಿರೆ ಇಂದು
ಅವರ ಅನುಕರಣಗಳ ಹೀನ ಸಂಸ್ಕೃತಿ ಕೊಡುವ
ಬೈವ ಸಾಹಿತ್ಯಗಳ ಸಾಹಿತಿಯು ನೀ ಬೇಡ! ॥ ೮ ॥

ಕಾವ್ಯವೋ, ಕವಿತೆಯೋ, ಕತೆಯೊ, ಕಾದಂಬರಿಯೊ,
ನಾಟಕವೊ, ನಾಣ್ನುಡಿಯೊ, ಹೃದ್ಯಗದ್ಯದ ಕೃತಿಯೊ,
ವಿಧ ವಿಧದ ರಚನೆಯಲಿ ಉನ್ನತದ ಭಾವಗಳು
ನವರಸದ ಒಸರಿನಲಿ ತೊಯ್ದರದು ಸಾಹಿತ್ಯ! ॥ ೯ ॥

ಕತೆ ಕಾವ್ಯ ವಿರಚಿಸುವ, ಕಲೆಗಳಲಿ ನುರಿತಿರುವ,
ವಾಗ್ಮಿಯೆಂದೆನಿಸಿರುವ ವಿದ್ವಾಂಸ ಸಾಹಿತಿಯು.
ಅದು ಹೊರತು ಯಾರನೋ ಹೊಗಳಿ ಬರೆದರೆ ಸಾಹಿ
ತಿಯು ಆಗುವೆನೊ ಏನೊ–ಎಂದು ಭ್ರಮಿಸಲು ಬೇಡ ॥ ೧೦ ॥

ಯಾವುದೇ ಕೃತಿ ಇರಲಿ ರಸಭಾವ ಹೊನಲಾಗಿ
ಹರಿದಿರಲಿ ಹಿತ ಸಿಗಲಿ ಅದು ತಾನೆ ಸಾಹಿತ್ಯ!
ಸಾಹಿತ್ಯ ಸೃಷ್ಟಿಯನು ಗೈದು ರಸಋಷಿಯಾಗು!
ಓದುಗರ ಹಿತವನ್ನು ಬಯಸಿ 'ಸಾಹಿತಿಯಾಗು!' ॥ ೧೧ ॥

ಶ್ರೀ| ಕೆ. ಎಸ್. ಪದ್ಮನಾಭಾಚಾರ್ಯ, ಗುರುಪುರ, (ದ. ಕ.)

ಭವ್ಯ ಭಾರತ ದೇಶ

ನೂರಾರು ಬರಿಸಗಳ ಬಂಧನವ ಕಡಿದೊಗೆದು
ಬಂದಿತ್ತು; ಸ್ವಾತಂತ್ರ್ಯ ನಮ್ಮ ಬಳಿಗೆ ।

ಹಾ! ಎಂಥ ಶುಭದ ಗಳಿಗೆ ।
ಕೋಟಿಗಟ್ಟಲೆ ಜನರ ಕನಸು ನೆನಸಾಗಿತ್ತು
ಇನ್ನಿಲ್ಲ ಪರರ ಬೇಗೆ ।
ಸಂತೋಷ ದುನ್ಮಾದದುಬ್ಬೆಗದಿ, ಜನ ತತಿಯು
ನಲಿದಿತ್ತು; ಹೃದಯ ತುಂಬಿ ।
ಸ್ವಾತಂತ್ರ್ಯ ಬಂದಿತ್ತು–ಸವಿ ಸುಖದ ಕಲ್ಪನೆಯ
ಭವ್ಯ ಭವಿತವ್ಯವನು ನಂಬಿ ॥ ೧ ॥

ನಮ್ಮದೇ ಸರಕಾರ–ಆಳುವವರೂ ನಾವೆ
ನೆಮ್ಮದಿಯ ಬಾಳುವೆಗೆ ಇನ್ನೇನು ಬೇಕು?
ಇರುಳು ಕಳೆದುದಿಸಿತ್ತು; ಹೊಸತು ಬೆಳಕು.
ಅಜ್ಞಾನ–ದಾರಿದ್ರ್ಯ–ಜಡತನದ ದೌರ್ಭಾಗ್ಯ
ಅಳಿಯುತಿದೆ; ನಮ್ಮ ಬದುಕು ।
ಬಂಗಾರವಾಗಲಿದೆ–ಬಾಳು ಹಸನಾಗಲಿದೆ ।
ನಮ್ಮದಿದು 'ರಾಮರಾಜ್ಯ' ।
ಸತ್ಯ–ಶಾಂತಿ–ಅಹಿಂಸೆ–ಸಮತೆಯಾ ನೆರವಿನಿಂ
ತೆರೆಯಲಿದೆ; ನಮ್ಮ ಭಾಗ್ಯ ॥ ೨ ॥

ಎಂದೆನುವ ನೂರಾರು ಆಸೆ ಆಕಾಂಕ್ಷೆಗಳು
ಇಂದಿಲ್ಲ! ಉಳಿದಿಹೆವು ವಿಫಲರಾಗಿ ।
ಮುಂದೇನೊ? ತಿಳಿದಿಲ್ಲ; ಗೆಲವಿಗಾಗಿ ।
ಜಾತಿಮತ ವೈಷಮ್ಯ–ಸ್ವಾರ್ಥಮಯ ದೌರ್ಜನ್ಯ
ಇಣುಕುತಿವೆ; ಪಾಲಿಗಾಗಿ ।
ಅನ್ಯಾಯ ಮರೆ–ಮೋಸ–ಲಂಚ ವಂಚನೆಗಳಿಂ
ನಡೆಯುತಿದೆ; ಆಡಳಿತ ಯಂತ್ರ ।
ಸ್ವಜನಹಿತಕಾಂಕ್ಷಿಗಳು–ಅಧಿಕಾರ ಲೋಲುಪರು
ನಡೆಸುವರು; ವಿವಿಧ ತಂತ್ರ ॥ ೩ ॥

ನೂರಾರು ಪಕ್ಷಗಳು– ಪಕ್ಷದಭಿನೇತೃಗಳು
ವಿಧ ವಿಧದ ಘೋಷಣೆಯ ಸಾರಿ :

ಜನಮತವ ಗಳಿಸುವರು; ದೂರ ಗುರಿ ತೋರಿ.
ಜನತೆ ಕರಭಾರದಲಿ–ಪರಿಪರಿಯ ಬವಣೆಯಲಿ
ಪರಿತಪಿಸುತಿದೆ; ಬದುಕ ದೂರಿ ।
ಯೋಚನೆಯ–ಯೋಜನೆಯ ರೂಪದಲಿ ಸರ್ಕಾರ
ಕೋಟಿಗಟ್ಟಲೆ ಹಣವ ವ್ಯಯಿಸಿ ।
"ಕಲ್ಯಾಣ ರಾಜ್ಯ ಇದೊ! ಕಂಗೊಳಿಸುತಿದೆ; ನೋಡಿ"
ಎನ್ನುತಿದೆ; ಕೀರ್ತಿಯನು ಬಯಸಿ ॥ ೪ ॥

ಮುಂದೇನೊ ತಿಳಿದಿಲ್ಲ–ಜನಸತ್ತೆ ಬೆಳೆದಿಲ್ಲ ।
ಜನತಾ ರಾಜ್ಯದ ದಿನ ಉಳಿದಿದೆ ದೂರ ।
ಎಂದಳಿವುದೋ ಈ ಗಂಡಾಂತರ ।
ಸುಖ–ಶಾಂತಿ–ನೆಮ್ಮದಿ–ಬರುವನಕ ಈ ಜಗದಿ ।
ಸ್ವಾತಂತ್ರ್ಯ ಬರಿಯ ಪ್ರಚಾರ ।
ತಾಯ್ನಾಡಿನಧಃಪತನ । ಛೆ! ಎಂಥ ಅಪಮಾನ ।
ಜನ ಸತ್ತೆಗಭ್ಯುದಯವಿರಲಿ ।
ಸ್ವಾತಂತ್ರ್ಯ ಉಳಿದಿರಲಿ–ಚಿರಕಾಲ ಬಾಳಿರಲಿ ।
ಭವ್ಯ ಭಾರತ ದೇಶ ಬೆಳಗುತಿರಲಿ । ॥ ೫ ॥

"ವಿಚಿತ್ರ" ಯೇತಡ್ಕ.

'ಮಾತೃ ದೇವೋ ಭವ'

ಮಾತೃ ಪಿತೃ ಬಾಂಧವರು ಸ್ನೇಹಿತರು ಇರಲಲ್ಲಿ ।
ಮಾತೆಯನು ನೆನೆದಾಗ ಎನ್ನೆದೆಯಲಿಂತು ।
ಪ್ರೀತಿಯದು ಉಕ್ಕುತಿದೆ, ಬಣ್ಣಿಸಲದೆಂತು ।
ರೀತಿಯಲಿ? ಪೇಳ್ವೆನಾ ಕಾರಣವನಿಲ್ಲಿ ॥ ೧ ॥

ನವಮಾಸ ಪರ್ಯಂತ ಉದರದಲಿ ಹೊತ್ತು ।
ಬವಣೆಯನು ಹೊಂದಿದಾಕೆಯ ಬಯಕೆಯೇನು? ।

'ಕವಿದ ಕಷ್ಟವಿದೆಲ್ಲ ತಣಿಸುವುದು ಮುಂದೆ ಉ ।
ದ್ಭವಿಸುವಾ ಮಗುವಿಂದ ಸುಖಪಡೆವೆನೆಂದು' ॥ ೨ ॥

ಪ್ರಸವ ವೇದನೆಯಿಂದ ನರಳುತಿರುವಾಗ ।
ಶಿಶುವಿಗೋಸುಗ ತನುವ ಮೀಸಲಿರಿಸಿದಳು ।
'ಹಸುಳೆಯಾ ಕಿರು ನಗೆಯ ಮೊಗನೋಡಿದಾಗ ।
ಮಸಣಕ್ಕೆ ಸಂದರೂ ಸಾರ್ಥಕವದೆನುತ' । ॥ ೩ ॥

* * * * *

ಭವದಂಗ ಸಂಜಾತನಾಗಿ ನಾ ಮುಂದು ।
ಭವದೀಯ ಪಾಲನೆಯ ಬಲದಿ ಬಾಳಿದೆನು ।
ಹವಣರಿತು ನಿನ್ನ ಮನದೆಣಿಕೆಯನು ನಾನು ।
ಕವಿತೆಯಲಿ ಪೇಳಲಿಕೆ ಸಲುವೆನೇ ಇನ್ನು ? ॥ ೪ ॥

ಎದೆಯ ಹಾಲನು ಕುಡಿಸಿ ಬಟ್ಟೆಯನು ತೊಡಿಸಿ ।
ತೊದಲು ನುಡಿಗಳನಾಡಿ ಕಲಿಸಿ ಮೋದಿಸಿದೆ ।
ಒದರಿದರು, ಒದೆದರೂ, ಆಟವೆಂದೆಣಿಸಿ ।
ಮುದದಿಂದಲೆತ್ತಿ ನಲಿಸಿದೆಯೆನ್ನ ದಯದಿ ॥ ೫ ॥

ಹೊತ್ತು ಹೊತ್ತಿಗೆ ಅನ್ನ ಪಾನಾದಿಗಳನು ।
ಇತ್ತು ಸಂತೈಸಿ ಪಟ್ಟಿಹ ಪಾಡದೇನು ? ।
ಗೊತ್ತುಗುರಿಯಿಲ್ಲದಾ ಚಲದ ಮುದ್ದೆಯನು ।
ಮುತ್ತು ಕೊಡುತಲಿ ನಲಿಸಿ ಹಾಡಲಿಲ್ಲೇನು ? ॥ ೬ ॥

ಅಕ್ಕರೆಯ ಮಾತನ್ನು ಕಲಿಸಿ ಮೇಲ್ಮೆಯಲಿ ।
ತಕ್ಕಂತೆ ಶಿಕ್ಷಣವ ಕೊಡಿಸೆ ಗುರುಗಳಲಿ ।
ಚಿಕ್ಕವನು ನಾ ಬಳೆದು ಪರದೇಶಗಳಲಿ ।
ರೊಕ್ಕಗಳಿಸುವೆ, ಸುಖಿಪೆನೇಕಾಂತದಲ್ಲಿ ॥ ೭ ॥

ನಿನ್ನ ಹಿತಸ್ಮರಣೆಯನು ಮರೆತು ನಾ ಮೆರೆವೆ ।
ಬನ್ನ ಬಟ್ಟುದ ನೀನು ಅರಿಯದವನಾದೆ ।
ಎನ್ನ ಮನ ಮಾತೆಯಾ ಸೇವೆಗಾಶಿಸದೆ ।
ಎನ್ನವರ ಒಲುಮೆಯನು ಸರ್ವದಾಶಿಸಿದೆ ॥ ೮ ॥

ಅವರ ಮಾತಿನ ಬಲದಿ ನಿನ್ನ ಬಿಟ್ಟಿರುವೆ।
ಸವಿಯಾದ ಮಾತನ್ನು ನಿನ್ನೊಡಾಡಿರದೆ।
ಭವಿಯಾಗಿ ತಿರುಗುವೆನು ನೋಡು ಕಣ್ದೆರೆದು।
ತವಿಸಲ್ಕೆ ನೀನಿಂದು ನೊಂದುಕೊಳ್ಳುವೆನಾ ॥ ೯ ॥

* * * * *

ಇನ್ನಿಲ್ಲ ಮುನ್ನಿಲ್ಲ ಕಾಣಲಳವಲ್ಲ।
ಮುನ್ನ ಪೇಳಿದೆ 'ಮಾತೃ ದೇವ'ನಿಹೆನೆಂದು।
ಇನ್ನೆಲ್ಲಿಯಾ ಮಾತು, ಮಾತೆ ಗಮಿಸಿರಲು?।
ಪುಣ್ಯ ಹೀನರ್ಗೆ ತಾಯಿಯ ಋಣವದೇನು? ॥ ೧೦ ॥

ನಂದಿತೆನ್ನಯ ಮನದ ದೀಪ ಇನ್ನಿಲ್ಲ,।
ಬಂದು 'ಅಮ್ಮಾ' ಎಂದು ಕರೆಯುವಾ ಸೊಲ್ಲು।
ಸಂದಿತೇ ? ತಿರುಗಿ ಜನ್ಮಕೆ ಬರುವ ತನಕ।
ಬೆಂದು ಬವಣೆಯ ಪಡುವೆ ಕೃಪೆಯ ಮಾಡವ್ವಾ ॥ ೧೧ ॥

'ಸುರೇಶ್' ಬಾಳ.

ಅಭೀಪ್ಸೆ

'ಎಟಕದಿಹ ದ್ರಾಕ್ಷಿಯನು ಹುಳಿ'ಯೆಂಬುದುಂಟು, ಆ
ನುಡಿ ಬೇರೆ ನಾನೆಂಬ ಮಾತೆ ಬೇರೆ!
ಬಲು ಮಹತ್ವಾಕಾಂಕ್ಷೆ ನನಗೇಕೆ? ನಾ ಧನ್ಯ-
ನೀನೊಲಿದು ಬರಲು ಓ ಕವನ ನೀರೆ! ॥ ೧ ॥

ಮೂರುಪ್ಪರಿಗೆಯೊಂದು ಹೆಮ್ಮನೆಯು ಬಯಸೆನೈ
ಊರಗಲವಿಹ ಭೂಮಿ ಕಾಣಿ ಬೇಡ.
ಭೂರಿ ವಾಹನಗಳನು, ನೂರಾರು ಭೃತ್ಯರನು
ನಾನೊಲ್ಲೆ- ನೀ ಹೊಗಿಸು ನಿನ್ನ ನಾಡ. ॥ ೨ ॥

ಕುಳಿತಲ್ಲೆ ವಿಶ್ವವನು ಕುಣಿಸುವಂತಹ ಬುದ್ಧಿ-
ಶಿಖರವೇರುವ ಚಪಲವಕಟ ಬೇಡ!
ಲೋಕದ ಪವಿತ್ರಕೋಟಿಗಳಿಂಗೆ ಮಿಡುಗುತಿಹ
ಎದೆಯೊಳಗೆ ಬಂದು ನೀ ಮನೆಯ ಮಾಡ. || ೧ ||

ಆಕಾಶಯಾನದಲಿ ದೇಶದೇಶವ ಸುತ್ತಿ
ಬರುವ ಬಯಕೆಯು ಮೂಡಲಿಲ್ಲ ಮನದಿ
ಆ ನಭಃಪಟಲದಲಿ ನಿತ್ಯನೂತನ ವರ್ಣ-
ಲೀಲೆಯಲಿ ನೀನೆ ಮೈದೋರು ಮುದದಿ. || ೨ ||

ಧರ್ಮವೆಂಬುದ ದೀವಿಗೆಯ ಹೊತ್ತ ಆಚಾರ್ಯ-
ಪಟ್ಟ ಸಲ್ಲದು, ನಮೋ! -ಮಾನವತೆಯ
ಧರ್ಮವೊಂದೇ ಎಂದು ತಿಳಿದ ಹೃದಯದ ನೀಡು
ದಾನವತೆಯನು ಸುಡಲು ಹೂಡು ಚಿತೆಯ. || ೩ ||

ಭೌತಪ್ರಪಂಚದೊಳಗುಟ್ಟ ಭೇದಿಸಿ ಪ್ರಕೃತಿ-
ಯನು ಗೆಲ್ವ ವಿಜ್ಞಾನಿ ನಾನಾಗೆನು
ಈ ನಿಸರ್ಗದ ದಿವ್ಯ ಮಹಿಮೆಯೊಳೆ ಸೆಲೆಯೊಡೆದು
ರಸಮಂತ್ರವಾಗಿ ಅವತರಿಸು ನೀನು. || ೪ ||

ಕವನ ಸುಂದರಿ ಚಿತ್ಕಲಾಪೆ, ಮಂಗಳೆ, ವಿಶ್ವ-
ರೂಪೆ ನೀನೆಲ್ಲೆಲ್ಲು ತೋರೆ ಸಾಕು.
ಅದ ಅಷ್ಟೈಶ್ವರ್ಯಕೂ ಮಿಕ್ಕ ಭಾಗ್ಯವಿದು
ಕವಿಹೃದಯವಿರಲು ಇನ್ನೇನು ಬೇಕು? || ೫ ||

ಅಮೃತ, ಸೋಮೇಶ್ವರ.

ನಿರಪೇಕ್ಷೆ

ಬೇಲೂರ ದೇವಳದ ಸಾಲಗೋಡೆಗಳಲ್ಲಿ
ಸಾಲಾಗಿ ಮಿರುಗುತಿಹ ಶಿಲ್ಪಗಳನು,

ಮೇಲು ಬದಿಯಲಿ ನಿಂದ ಮದನ ಕೈಯಂತಿರುವ
ಸಾಲಭಂಜಿಕೆಗಳನು ಮೆಚ್ಚಿ ಹೊಗಳುವೆವು ।
ಮೇಣು ಹಳೆಬೀಡು ದೇವಳದಿ ಕಾಲಿಡುತಲ್ಲಿ
ಕಾಣುತಿಹ ಶಿಲ್ಪವನು ನೆಚ್ಚಿ ಹಾಡುವೆವು ।

ಆದರೆನಿತೋ ಬಿಸಿಲು ಮಳೆಗಾಳಿಗಳ ಬಾಧೆ-
ಗಾದರೂ ಹೆದರದಲೆ ಮೂಲೆಗೊಂದಿರುವ,
ಕೀಳುಚಿನ್ನದ ತೆರದಿ ಮುಸುಕು ಮರೆಯಾಗಿರುವ
ಸಾಲಭಂಜಿಕೆಗಳನು ಕಡಿತಗಳನು
ನೋಡ ಬಯಸುವರಾರು ? ಹಾಡಿ ಹೊಗಳುವರಾರು ?
ನಾಡಾಡಿಯಂತೆ ಕಣ್ಬಿಡುವುವಲ್ತೆ ?

ನೆಲೆವಪ್ಪಿ ನಿಂದಿಹನ ಬದುಕದಾರಿಗು ಬೇಡ !
ಕಲೆಯು ನೆಲೆವಪ್ಪಿರಲು ನಿರಪೇಕ್ಷೆ ನೋಡ !

'ಜಯಂತ' ಸುರತ್ಕಲ್ಲು

ತಾಯಿ-ಮಕ್ಕಳು

ತಾಯಿ ಭುವನೇಶ್ವರಿಯ ಪುಣ್ಯಗರ್ಭದಿನೊಗೆದು
ಬಳೆಬಳೆದು ಸೌಭಾಗ್ಯವೈಭವವನಾಂತು
ಹಸುರಟ್ಟು ಮುಖಕಮಲವರಳೆ ಚಂದನಗಂಧ-
ದೊಡಲಿಂದೆ ಮೆರೆದೆ ಬಹುಕಾಲ ಸೊಗಗೊಂಡು.

ವೀರಸುತರನುದಾರಚರಿತರನು ಕಲಿಗಳನು
ಶಿಲ್ಪಿಗಳ ಧರ್ಮಸಂಸ್ಥಾಪಕರ ವಿವಿಧ
ಕಲೆಯನೊಲಿಸಿದ ಮಕ್ಕಳನು ಗಂಡುಹೆಣ್ಗಳನು
ಪಡೆದು ಪೂಜೆಯಗೊಂಡೆನಮಿತಸಂಭ್ರಮದ.

ಬಂದ ನಿಂದವರೆಲ್ಲರುಪಚಾರನುಪಹಾರ-
ದಿಂದ ಮೆಯ್ದೂಗಿ ಚೆಲುವಿನೊಳಾಡಿ ಪಾಡಿ

ಕುಂದವೆನ್ನೆದೆಪೊವೆಯು ಸವಿದೆನ್ನ ಕಂದರೊಡ-
ನೊಂದಾಗಿ ಬಾಳಿದರು ಮನವೊಂದುಗೂಡಿ.

ಕಾಲಗತಿವಿಭ್ರಮದಿನೆನ್ನ ಮಕ್ಕಳ ಚಿತ್ತ
ವಿಭ್ರಮಣೆಗೊಂಡಿತೋ ವಿಕಲವಾಯ್ತೇನೊ?
ಹೆತ್ತ ತಾಯನು ಮುತ್ತಿ ಕರಚರಣಗಳನೊತ್ತಿ
ದಾಸ್ಯಪಂಕಕ್ಕೊಗೆಯೆ ಜಡತೆ ಬಿಡದೇನೊ?

ವತ್ಸರಗಳುರುಳಿದುವು; ಮೆಯ್ಮರೆದ ಮಕ್ಕಳನು
ಬಡಿದೆಬ್ಬಿಸಿದುದೊಂದಪೂರ್ವಸತ್ವಂ;
ಚೈತನ್ಯಗೊಳ್ಳುತೇಕೋಭಾವದಿಂದೆ ಬಂ-
ಧನಗಳೆದರೆನಗೆಲ್ಲಿ ಬಂತು ಸುಮಹತ್ವಂ?

ಬಸಿರೊಂದನುಳಿದಂಗವೆಲ್ಲ ಪರವಶವಾಗ-
ಲಾತ್ಮವಶವಪ್ಪಂದದೆಸಕ ಸಾಗೆ
ಸಂತೋಷವಾಯ್ತೊಮ್ಮೆ. ಹಾ! ಹಂತ! ಪರವಶತೆ
ಕವಿಯಿತೇ ಮಕ್ಕಳನು ಮತ್ತೆ ಹೀಗೆ!

ಅಲ್ಲಿ ಕೆಲವರ ತಂಡವಿಲ್ಲಿ ಕೆಲವರ ಗುಂಪು
ಪಂಗಡವದೊಂದಿಲ್ಲಿ ನಿವಹವಿನ್ನಲ್ಲಿ
ಮೂಡು ಪಡುವಲು ತೆಂಕು ಬಡಗು ಕೆಳಮೇಲೆಂದು
ಕಣ್ಣುಮೋರೆಯ ಬಾಗು ಕಾಂಬುದೆಲ್ಲೆಲ್ಲಿ.

"ನಾಂ ಹಿಂದೆ ತಾಂ ಹಿಂದೆ ಮುಂದೆನ್ನ ತಂದಿಕ್ಕು"
ಎಂಬುಲಿಹ ಕಿವಿಯ ಕೀಲೈಸುತಿಹುದು;
"ನಾಂ ಬೇರೆ ತಾಂ ಬೇರೆ; ಮೇಲುಕೀಳೆಂ"ಬ ಕೆಡು
ಕಲಹದಿಂದೆನ್ನೊಡಲು ನೋಯುತಿಹುದು.

ಒಳಗೊಳಗೆ ಹೊಗೆ ತುಂಬಿ, ಮಸಿ ತುಂಬಿ ಕಯ್ನೊಡಿ
ತುತ್ತಿಗುರೆ ಬಾಯ್ಬಿಡುವ ಧಗೆಯುಗುಳುತಿರುವ
ಕೆಂಡಗಳ ಕಂಡ ಕಣ್ಣಿಂದಿಳಿವ ನೀರ್ಪನಿಪ-
ಲಾರ್ಪುದೇನೆನ್ನೆದೆಯನುರಿಸುತಿರುವುರಿಯ.

ಇನ್ನೊಮ್ಮೆ ಕೇಳುವೆನು:- ಮಕ್ಕಳೇ, ನೀವೊಂದೆ
ಮನವಾಗಿ ಮೆಯ್ಯಾಗಿ ನಿಮ್ಮಬ್ಬೆಗಾಗಿ
ನಿಮಗಾಗಿ ಶಿವಸತ್ಯಸೌಂದರ್ಯಕಾಗಿ ಸೌ
ಶೀಲ್ಯದಿಂ ಯತಿಸುವಿರೆ ಸಂಸಿದ್ಧಿಗಾಗಿ ?

* * *

"ಕ್ಷಮಿಸು ಕನ್ನಡತಾಯೆ, ತನುವೊಂದೆ ಮನವೊಂದೆ
ಬೆಸೆದೆಮ್ಮ ಗೆಯ್ಮೆಯೀವೆವು ನಿನಗೆ ಕಾಣ್ಕೆ
ಸಚ್ಚರಿತರಾಗಿ ಸಫಲತೆಗೊಂಡು ನಿನ್ನ ಸಿರಿ
ಮೊಗವ ಕಾಂಬೆವು ಖಚಿತಸತ್ಯವಿದು ಪೂಣ್ಕೆ"

* * *

"ಒಕ್ಕೊರಲ ಗುಡುಗು ಶರದಭ್ರವಿಭ್ರಮವಾಗ-
ದಿರ್ಕೆ ಧಾರಾವರ್ಷವಕ್ಕೆ ಸುಖಫಲದಂ
ಕಾರ್ಯತತ್ಪರತೆಯಿಂದಕ್ಕೆ ಸಂಪತ್ಸಿದ್ಧಿ-"
ಯೆಂದು ತಾಯ್ ಹರಸಿದಳು "ಶುಭಮಂಗಲಂ"

ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ಮಂಗಳೂರು.

ನಾನು ಹೋದರೆ!

'ರೆ'ಗಳೆಷ್ಟೊ ಮನದಿ ಸುಳಿದು
ಸಾಗಿ ಹೋದುವೆಲ್ಲಾ ಕಳೆದು
ಕೊನೆಗೆ ನಿಂದುದೊಂದೇ ಉಳಿದು.
ನಾನು ಹೋದರೆ-
ಸಾಗಬೇಕೆ ಜಗವನುಳಿದು
ನಾನು ಹೋದರೆ! ॥ ೧ ॥

ನನ್ನ ತಾಯಿ ನನ್ನ ತಂದೆ
ಜನಿಸಿದವರು ಹಿಂದೆ ಮುಂದೆ

ಬಮುಕಿ ಬಾಳಿದೆಲ್ಲಾ ಹಿಂದೆ
ನಾನು ಹೋದರೆ-
ಉಳಿದು ಕಳೆವರೆಲ್ಲಾ ಅಂದೆ
ನಾನು ಹೋದರೆ! ॥ ೨ ॥

ನನ್ನ ನಾಡು ನನ್ನ ಬೀಡು
ಸುಖವನಿತ್ತ ಕಾಡು ಮೇಡು
ದೇವ ನೆಲಸಲಿತ್ತ ಗೂಡು
ನಾನು ಹೋದರೆ-
ಅಳಿವುದಲ್ತೆ ಜಗದ ಪಾಡು
ನಾನು ಹೋದರೆ? ॥ ೩ ॥

ನೀರನೆಂದು ಸುಖದಿ ಬೀಗಿ
ನೀರೆಯುವಳ ಮದುವೆಯಾಗಿ
ಅವಳೊಳೆನಗೆ ಮಕ್ಕಳಾಗಿ
ನಾನು ಹೋದರೆ-
ಸಾಗಬೇಕೆ ಅವರ ನೀಗಿ
ನಾನು ಹೋದರೆ? ॥ ೪ ॥

ಗೆಳೆಯರೊಡನೆ ಆಟವಾಡಿ
ಗೆಳತಿಯರೊಳು ಸರಸವಾಡಿ
ಎಳೆಯ ಬಳಗದೊಡನೆ ಆಡಿ
ನಾನು ಹೋದರೆ-
ಕಳೆವುದಲ್ತೆ ಜಗದ ಜೋಡಿ
ನಾನು ಹೋದರೆ? ॥ ೫ ॥

ಬಗ್ಗಿದವರ ಮೇಲಕೆತ್ತಿ
ಹಿಗ್ಗಿದವರ ತಲೆಯನೊತ್ತಿ
ಜಗವನೆಲ್ಲ ಹಿಗ್ಗಿ ಸುತ್ತಿ
ನಾನು ಹೋದರೆ-

ಸಗ್ಗವರಿಗು ಕಾಲಬುತ್ತಿ
ನಾನು ಹೋದರೆ! ॥ ೬ ॥

ಬುದ್ಧಿಯಿಂದ ಜ್ಞಾನಸಿಂಧು
ಪ್ರೇಮದಿಂದ ವಿಶ್ವಬಂಧು
ಜಗಕೆ ಪೂಜ್ಯನಾಗಿ ನಿಂದು
ನಾನು ಹೋದರೆ-
ಅಳುವುದಲ್ತೆ ಜಗವೆ ನೊಂದು
ನಾನು ಹೋದರೆ- ॥ ೭ ॥

ಭಾವವೊಂದು ಮನದಿ ಮೂಡಿ
ಕಾವ್ಯವಾಗಿ ಜಗವೆ ಹಾಡಿ
ಹಿಗ್ಗುತಿರಲು ಅದನು ನೋಡಿ
ನಾನು ಹೋದರೆ,
ಮಸಣದಿಂದ ಬರುವೆ ಹಾಡಿ-
ನಾನು ಹೋದರೆ! ॥ ೮ ॥

ಕೆಮ್ಮಿಂಜೆ ಸುಬ್ರಾಯ ಪಾಧ್ಯಾಯ, ಪುತ್ತೂರು.

ಮಾನವನ ಸಾಹಸ

ಮಾನವನ ಸಾಹಸಕೆ ಆದಿಯಿಲ್ಲ,
ಕೊನೆಯನಾರು ಬಲ್ಲ?
ಬಾಂದಳಕೆ ತಾ ಜಿಗಿದು,
ವೇಗ ಮಿತಿಯನು ಮುರಿದು.
ಮುಗಿಲ ತಾಣಕೆ ನೆಗೆದು,
ಗ್ರಹ ಪ್ರಪಂಚವ ಸರಿದು-
ನಭ ಶಿಖರವನ್ನೇರಿ,
ಲೋಕಮಂಡಲ ಮೀರಿ
ಮೆರೆವ, ನವ—

ಮಾನವನ ಸಾಹಸಕೆ ಆದಿಯಿಲ್ಲ,
ಕೊನೆಯನಾರು ಬಲ್ಲ?

ಭೂಗರ್ಭವನು ಬಿರಿಸಿ,
ಜಲತರಂಗವ ಕಡೆದು,
ಖನಿಜ ತೈಲಗಳರಸಿ,
ನೀರ್ಬಸಿರನೊಡೆದು—
ಕಡಲ ಕಟ್ಬಾಳದಲಿ,
ಜಗದಂತರಾಳದಲಿ
ಮೆರೆವ, ನವ—

ಮಾನವನ ಸಾಹಸಕೆ ಆದಿಯಿಲ್ಲ,
ಕೊನೆಯನಾರು ಬಲ್ಲ?

ಸಮಯವನು ಆವರಿಸಿ,
ಉನ್ನತಿಯ ಮಿಕ್ಕಿ;
ದೂರವನು ಸಂಚರಿಸಿ,
ಆಳವನು ಹೊಕ್ಕಿ;
ವೇಗವನು ಸಂಜಯಿಸಿ
ಭೂಮಿತಿಯ ಕ್ಷಯಿಸಿ-
ಮೆರೆವ, ನವ—

ಮಾನವನ ಸಾಹಸಕೆ ಆದಿಯಿಲ್ಲ,
ಕೊನೆಯನಾರು ಬಲ್ಲ?

ಜಗದೆಲ್ಲೆಗಳ ದಾಟಿ,
ಕಾಲವೇಗವ ಮೀಟಿ,
ಮುನ್ನಡೆವ ಮನುಕೋಟಿ! ಕೇಳು ನೀ ತಿಳುವ ತಿರುಳು.
'ತನ್ನತನ'ದಾ ಮರುಳು
'ಅಹಮಿಕೆ'ಯ ಹಿನ್ನೆರಳು
ನೀನಿದರ ಸೆರೆಯಾಳು!
ಜಗವ ಜಯಿಸುವೆ? ತಾಳು-

ತನ್ನಿಂದ ತಾ ಸೋಲ್ವ ಬಾಳು
ಬಾಳಲ್ಲ, ಬರಿಯ ಹಾಳು!
ಆದಿಯಿಲ್ಲದ ಮಾನವನ ಸಾಹಸಕ್ಕೆ
ಸ್ವಾರ್ಥವೇ ಮೃತ್ಯು, ಸಂಘರ್ಷವೆ ಧಕ್ಕೆ!

ಎಚ್. ಗಣೇಶ್, ಸುರತ್ಕಲ್.

ಗ್ರಾಮಗೀತೆ

— ೧ —

ಗ್ರಾಮ ಸೇವೆಯನೆಸಗಿ ಮೆರೆಯುವ ಭಾಗ್ಯವಿಂದಿಗೆ ಬಂದಿದೆ
ನೇಮದಿಂದಲೆ ಮಡಿವ ಯೋಗವನಿಂದು ಬಿಡುಗಡೆ ತಂದಿದೆ ॥
ಬಂದ ಭಾಗ್ಯವನಿಂದು ಕಳೆಯದೆ ಮುಂದೆ ಸಾಗುವ ಮುಂದಕೆ ।
ನಿಂದ ನೆಲೆಯಲಿ ನಲಿವನೊದಗಿಪ ತುಂಬು ಬದುಕಿನ ಭವ್ಯಕೆ ।

— ೨ —

ಎತ್ತು ಹಸುಗಳ ಹಯನದಿಂದಲಿ ಹಾಲುಮೊಸರನು ಮೆಲ್ಲುವ
ಉತ್ತು ಬಿತ್ತುವ ವೃತ್ತಿಯಿಂದಲಿ ಸಾಲ ಸೋಲವ ಗೆಲ್ಲುವ ।
ಗುಡಿಯ ನಿರ್ಮಿಸಿ ವಸ್ತ್ರವೊಡವೆಯ ರಚಿಸಿ ನಲಿವನು ಪಡೆಯುವ ॥
ಜಡನ ಝೂಡಿಸಿ ಸ್ವಾರ್ಥವಿಲ್ಲದ ಬದುಕ ಬಾಗಿಲ ತೆರೆಯುವ ।

— ೩ —

ಹೊಸತು ದಾರಿಯ ಕಡಿದು ನಿರ್ಮಲ ಮಾರ್ಗತೋರುತ ಸಾಗುವ
ಜ್ಞಾನ ಜ್ಯೋತಿಯ ಬೆಳಗಿ ಕತ್ತಲೆಯನ್ನು ತೊಲಗಿಸಿ ಬೆಳಗುವ ।
ನೇಹ ನಯದಿಂ ಪರರ ಹಿತದಿಂ ಭವ್ಯ ಜೀವನವೆಸಗುವ
ದೇಹವೆಂಬುದೆ ಕರ್ಮಸಾಧನ ಧರ್ಮಸಾಧನ ನಂಬುವ ॥

— ೪ —

ತೋಡು ತೊರೆಗಳ ಬಯಲು ಬನಗಳ ಸರಳಸೊಬಗಿಹುದಿಲ್ಲಿಯೆ ।
ನಾಡ ಜನಗಳ ಹಾಡು ಹಬ್ಬದ ಹೊಗರು ಮೆರೆವುದು ಇಲ್ಲಿಯೆ ॥

ಸೃಷ್ಟಿ ಮಾತೆಯ ಮಡಿಲ ಮಮತೆಯ ದಿವ್ಯದರ್ಶನವಿಲ್ಲಿಯೆ ।
ತುಷ್ಟಿವಡೆಯುತ ಭವದ ಸುಖದಲಿ ಮೆರೆವ ಭಾಗ್ಯವದಿಲ್ಲಿಯೆ ॥

— ೫ —

ಇಲ್ಲಿ ನಾಡಿನ ಮುಗುಳು ಜೀವನವರಳಿ ಸೌರಭ ಬೀರಲಿ,
ಇಲ್ಲಿ ಬಾಳಿನ ಸುಫಲವೆಲ್ಲರ ಕರವ ಸೇರುತ ತಣಿಸಲಿ
ಇಲ್ಲಿ ಭಾರತ ಭಾಗ್ಯ ಸಂಪದವೊರತೆ ಚಿಮ್ಮುತ ಹರಿಯಲಿ
ಇಲ್ಲಿ ಭಾರತ ಭವ್ಯಗೊಳ್ಳುತ ಶಾಂತಿಗೀತೆಯ ಸಾರಲಿ ॥

—ಪಿ. ಕೆ. ನಾರಾಯಣ, ಮಂಗಳೂರು.

ಲೊಚಗುಟ್ಟಿತು ಹಲ್ಲಿ.... (ನವ್ಯಗೀತೆ)

ಲೊಚಗುಟ್ಟಿತು ಹಲ್ಲಿ-
ಅಲ್ಲಿ—
ಸತ್ಯ- ಖಂಡಿತ- ನಿಜವಿರಲೇ ಬೇಕು
ಎನ್ನುವ ನಿರ್ಧಾರದ ಸೂಚನೆಯ ದನಿಯಲ್ಲಿ.
ಎಣಿಕೆಯೆಂತೋ ಅಂತು ಶಕುನ ಸಾರಿ
ಲೊಚಗುಟ್ಟಿತು ಹಲ್ಲಿ ಮೂರು ಬಾರಿ
ಟಿಕ್-ಟಾಕ್—ಟಿಕ್ ಟಾಕ್-ಟಿಕ್ ಟಾಕ್—
ಮೂರು ಬೆಳ್ಳಿಯ ಹಬ್ಬವನ್ನು ಮುಗಿಸಿ ಮರೆತ
ತೂಕಡಿಕೆಯ ತೂಗುಗಡಿಯಾರದ ನಡಿಗೆ
ಅದಕೆ ಒಂದೇ ಎಣಿಕೆ
ಟಿಕ್ ಟಾಕ್-ಟಿಕ್ ಟಾಕ್-
ನೆನಪು—ಯೋಚನೆಗಳು—ಮತ್ತೆ ಮತ್ತೆ........

* * *

ಪಡುಗಡಲಿನ ತೆರೆಗಳ ಮುಗಿಯದೇರಿಳಿತ
ಮಲೆನಾಡಿನ ಹಸಿದ ಹೆಬ್ಬುಲಿಯ ದಿನದ ಮೊರೆತ

ಬಣಗಾರನು ಬಿಟ್ಟ ನೆನಹಿನ ಸಿಡು ಸೂಲುಗಳಲ್ಲಿ
ಯೋಚನೆಯ ರಾಲಿಗಳ ತೀವ್ರ ಓಟ
ಅತ್ತಿತ್ತ-ಇತ್ತತ್ತ-
ನಗರ ಬೈತಲೆ ರಸ್ತೆ ಡಾಮರಿನ ಮೇಲೆ
ಬಣ್ಣ ಕಾರುಗಳ ವಕ್ರಹಾವಿನೋಟ
ಎಂಥೆಂಥ ನೋಟ!
ಕರಾವಳಿಯ ಕಡಲು ದಂಡೆಗೆ ತಾಗಿ ಮಲಗಿರುವ
ಹರದಾರಿ ಲೋಹದಾರಿಯ ಮೇಲೆ
ಕಾಣದೂರಿಂದ ಬರುತಿತ್ತು ಮೈಲುಗಾಡಿ
ಹೊಗೆಯುಗುಳಿಯುಗುಳಿ
ಖಟ್ ಖಟಾಲ್-ಖಟ್ ಖಟಾಲ್-ಖಟ್ ಖಟಾಲ್-
ತೆರೆ ತೆರೆಯ ನಡುನಡುವೆ ಬಿದ್ದೆದ್ದು
ಕಡಲಾಚೆಯೂರಿಂದ ಬಂದ ಬಾನುಲಿಯ ದನಿ
ಕಿವಿದೆರೆಸುತಿತ್ತು.
ಶತ ಶಾಖಾಗ್ರಗಳಲ್ಲಿ ಚಿಗುರಿ ಕೊನರಿದ
ಮುತ್ತದ ಮುಗುಳುಗಳ ಮೊತ್ತಕ್ಕೆ
ಪುಟಿದು ಹಾರುವ ಬೆಂಕಿ ಚೆಂಡು ಪುಟ್ಟಿಯೊಂದು
ಬಾಯಿಯಿಡುತಿತ್ತು.
ಕಲ್ಪನೆಯ ಕಾಡಿಡೀ ಕಂಪು ಬೀರುವ ಹೂಗಳು
ಕನಸಿನಾ ಬಾನೀಡೀ ಬೆರಳೂರಿಯೂ ಲೆಕ್ಕಿಸಲಾರದ
ಗಗನಚುಕ್ಕೆಗಳು
ಎಂಥೆಂಥ ನೋಟ!
ಧೀಂ....ತರಿಕಿಟ ತಕಧೀಂ....
ಹತ್ತು ಕಡೆಗಳಿಗೊಮ್ಮೆ ಕತ್ತು ಕೈ ಮೈ ನೀಡಿ
ಬಾಗಿತೂಗಿ ಬಳ್ಳಿಯಾದ ಗೆಜ್ಜೆ ಕಟ್ಟಿದ ಹೆಣ್ಣು
ಬಸವಳಿದು ಬವಳಿ ಹೇಗೋ ಕೊನೆಯ ತಾಳಕ್ಕೆ
ತೂಗಿ ನಿಂತಳು ಮತ್ತೆ
ಸುಳಿಗಾಳಿಗೆ ಸಿಕ್ಕಿ ಧೂಳೀಪಟವಾಗುವ ಮೊದಲೇ

ಪಾರ ಕಡಿಯುವ ಗಾಳಿಪಟವೊಂದು ಚಣ ಚಣಕೆ
ಇಳಿಯುತಿತ್ತು ಭೂಮಿಯ ಕಡೆಗೆ.
ಬಿರುಗಾಳಿಗೆ ಕಡಲಿಡೀ ಸುತ್ತಿ ಸುಳಿವ ಹಡಗು
ಕಡೆಗೊಮ್ಮೆ ದಡ ಕಂಡ ಕಪ್ತಾನನು ಲಂಗರುಹಾಕೆ
ಪ್ರಶ್ನಿಸಿತು—
ಯಾವುದು? ಯಾವ ಬಂದರು ಇಲ್ಲಿ?
ಲೊಚಗುಟ್ಟಿತು ಹಲ್ಲಿ
ಇರಬೇಕು ಸತ್ಯ ಖಂಡಿತ
ಮನಸಿನಲ್ಲೆಣಿಸಿದುದೇನೋ ಅವರಲ್ಲಿ ಒಂದು
ಇರಬೇಕು—
ಯಾವುದು....?
ಯಾರು ಎಲ್ಲೆಲ್ಲಿ ಸುತ್ತಿ ಬಂದರು?
ಯಾವುದು ಈ ಬಂದರು?
ನಿಜವಿರಲೇ ಬೇಕು. ಸತ್ಯ—ಖಂಡಿತ
ನಿರ್ಧಾರದ ಸೂಚನೆಯ ದನಿಯಲ್ಲಿ
ಎಣಿಕೆಯೆಂತೋ ಅಂತು ಶಕುನ ಸಾರಿ
ಲೊಚಗುಟ್ಟಿದುದು ಹಲ್ಲಿ ಮೂರು ಬಾರಿ
ಟಿಕ್ ಟಾಕ್—ಟಿಕ್ ಟಾಕ್—
ತೂಕಡಿಕೆಯ ತೂಗುಗಡಿಯಾರದ ನಡಿಗೆ
ಅದಕೆ ಒಂದೇ ಎಣಿಕೆ....ಟಿಕ್ ಟಾಕ್—ಟಿಕ್ ಟಾಕ್—

* * * *

ಯಾವುದು?
ಅದರಲ್ಲಿ ಯಾವುದು?
ಕಡಲಿಗೆ ಈಗ ತಾನೇ ಕೈಯಿಂದ ಬಿದ್ದ
ಜಲಬಿಂದು ಯಾವುದು? ಎಲ್ಲಿಹುದು?
ನಿನ್ನೆ ಬಾನಲಿ ಕಂಡ ಗರಿ ಮುಗಿಲ ಹೂ ಚೆಂಡು
ಬ್ಲಾನ ತಾರಕೆಗಳಲಿ....
ಕಿರಿದಾವುದಾವುದು?

ಕಾಡ ಕುಸುಮಗಳಲ್ಲಿ…….
ಹಿರಿದಾವುದಾವುದು ? ಯಾವುದು ?
ಟಿಕ್ ಟಾಕ್–ಟಿಕ್ ಟಾಕ್–ಟಿಕ್ ಟಾಕ್–
ಗಡಿಯಾರಕೊಂದೇ ಎಣಿಕೆ–ತೂಕಡಿಕೆ-
ಆನೆ ಕಾಲಿನ ನಡಿಗೆ….
ಕ್ಷಯ ರೋಗಿಯೆದೆಗುಂಡಿಗೆ
ಸತ್ತು ಸಾಯದೆ ಮತ್ತೂ ನಡೆಯುತಿತ್ತು….
ಗಳಿಗೆ ಗಳಿಗೆಯ ಹೊತ್ತು-ಅತ್ತು ಅತ್ತು
ಗಂಟೆ ಒಂಭತ್ತು.
ಟಿಕ್ ಟಾಕ್-ಟಿಕ್ ಟಾಕ್-

* * *

ಒಳಗೆ-
ಮೂರು ಕಾಲಿನ ಮೇಜಮೇಲೆ ಉರಿಯುತಿತ್ತು
ಗಾಜಿನ ದೀಪ
ಅಯ್ಯೋ ಪಾಪ !
ಗೋಡೆ ನಾಲ್ಕರ ನಡುವೆ ಸುತ್ತಿ ಸುರುಳಿಯ ಬಿಚ್ಚಿ
ಬಿರುಕು ಹಲಗೆಯ ಕಿಟಕಿಯೆಡೆಯಿಂದ
ಅಂಗಳದ ತಿಂಗಳಿಗೆ ಹಾಕುತಿತ್ತು ಹೊರ ಕಣ್ಣು
ಎಣ್ಣೆ ತೀರಿತೋ….ಏನೋ….
ಮಿಣುಕುತಿತ್ತು ಇನ್ನೂ….
ಮಡಿವಂತರರಮನೆಯ ಮಹಡಿಯಲಿ ಮರೆ ನಿಂತು
ಕಿರು ಕಿಟಕಿಯಲಿ ಹೊರಗೆ ಬೀದಿಯನು ನೋಡುವಂತಿತ್ತು
ಮದುವೆಗೆ ಕಾದುನಿಂತ ಪೇಟೆಯ ಹೆಣ್ಣು
ಹೊಸಲು ದಾಟದ ಹೆಣ್ಣು ಮಗಳು ನೆರೆಮನೆ ಹತ್ತಿ
ಪಡುಸಾಲೆಯಲಿ ಬಿಚ್ಚಿದಂತೆ ಸುದ್ದಿಯ ಸುರುಳಿ
ಅಂಗಳದ ತಿಂಗಳಿನ ಬೆಳ್ಳಿಬೆಳಕಿನ ಸರಳು
ಒಳಸುಳಿದು ಮಸುಕು ಬೆಳಕಿನ ಗಾಜದೀಪ ಮೇಜಿನ ಮೇಲೆ
ಕೈಯರಿ ಮಾತನಾಡಿಸುತಿತ್ತು.

ಮುತ್ತು ದುರಿದಂತೆ....
ಹಾಲು ಸುರಿದಂತೆ....
ಗದ್ಯ ಪದ್ಯಗಳೊಂದುಗೂಡಿದಂತೆ
ಗಾಜ ದೀಪದ ಕೂಡೆ ಮಾತಾಡುತಿತ್ತು
ಏನಕ್ಕಾ! ಹೊಸ ಸುದ್ದಿ
ಈ ದಿನದ ಬಿಸಿ ಸುದ್ದಿ
ಹಸುಗೆ ಸಕ್ಕರೆ ಬಂದಿಹುದೇನು ಮತ್ತೆ
ಚೀನಾ ಭಾರತ ಸುದ್ದಿ ಏನಾಯಿತಂತೆ?
ಕನ್ನಡಕ ಕೂಡುವುದೆ ಮರಳಿ ಕಾಸರಗೋಡು
ಹೊಸತು ಪಂಚಾಯತು ತಾಲೂಕು ಬೋರ್ಡು
ಏನಾಯಿತಂತೆ ಸಂಬಳದ ಕಂತೆ
ದೀಪಾವಳೀ ಹೊತ್ತು ನಿನಗೇನೇ ದುಃಖ?
ಸ್ನೇಹಕ್ಕೂ ಕೊರತೆಯೇ ಚಿಮಿಣಿಯಕ್ಕಾ!
ಬರುವುದಿಲ್ಲವೆ ಅರಳಿಕಟ್ಟೆ ಪರಿಷತ್ತು
ಕೂಡಲಿದೆ. ಬಾ ಹೋಂದು ಆಗುತಿದೆ ಹೊತ್ತು
ಮತ್ತು–ಮತ್ತು ಏನೇನೋ ಮಾತಾಡುತಿತ್ತು.
ಅಡಿಗೆ ಮನೆಯಿಂದ ಆಫೀಸು ಕಛೇರಿಯ ವರೆಗೆ
ಸುದ್ದಿಗಳ ಸುರುಳಿಗಳು–
ಸ್ವಾತಂತ್ರ್ಯದಲಿ ಬೆಳೆದ ಬೀದಿ ಬೆಳದಿಂಗಳಿನ
ಕೆಲಸವಿಲ್ಲದ ಆ ಹೆಣ್ಣು ಮಗಳು.
ಮನೆಯವರ ಕೈ ಹಿಡಿದು ಮನೆಯ ಬೆಳಗುವ
ತೊತ್ತು ಚಿಮಿಣಿಯರ ಪಾರತಂತ್ರ್ಯ
ಆ ಬೀದಿ ಹೆಣ್ಣಿಗೆ ಏನು ಗೊತ್ತು?
ಉರಿಸುವವನ ಕೈಯಿಂದ ಮುಕ್ತಿಯೆಂದೋ ಎಂದು
ಎಣ್ಣೆ ಬತ್ತುವ ಮೊದಲೆ ಬತ್ತಿ ಕರಟುವ ಮೊದಲೆ-
ನಂದುವುದಕೆಂದು–
ಬಾಯಾರಿಕಾಯುತಿತ್ತು. ಮೇಜಿನ ಗಾಜದೀಪ
ಅಯ್ಯೋ ಪಾಪ!

* * *

ಲೊಚಗುಟ್ಟಿತು ಹಲ್ಲಿ ಮೂರು ಬಾರಿ
ಎಣಿಕೆಯೆಂತೋ ಅಂತು ಸಾರಿ ಸಾರಿ
ಯಾವುದು ? ಅದಾವುದು ? ಎಲ್ಲಿಹುದು ? ಹೇಗಿಹುದು ?
ತೂಕಡಿಕೆಯ ತೂಗು ಗಡಿಯಾರದ
ಆನೆಕಾಲಿನ ನಡಿಗೆ-
ಒಂದೇ ಎಣಿಕೆ....
ಟಿಕ್ ಟಾಕ್–ಟಿಕ್ ಟಾಕ್-ಟಿಕ್ ಟಾಕ್
ಗಂಟೆ ಹನ್ನೆರಡು–
ನೆನಪು ಯೋಚನೆಗಳು-ಮತ್ತೆ-ಮತ್ತೆ....
ಹೆರೆ ಕಳೆದ ಹೆಬ್ಬಾವಿನಷ್ಟು ಹಗುರವಾಗಿತ್ತು
ಮನಸ್ಸು ತುಸು ತಾಸು ಮೊದಲು.
ಗಂಟೆ ಗಂಟೆಗೆ ಮರಳಿ–
ಮುದುಡಿಕೊಂಡಿತು ಚಿಪ್ಪಿನೊಳಗೆ ಆಮೆಯ ಕತ್ತು.
ಎಣ್ಣೆ ಬತ್ತಿದ ದೀಪ ! (ಅಯ್ಯೋ ! ಪಾಪ)
ಕತ್ತಲೆಯ ಮೊತ್ತದ ಕೂಡೆ ಕಾದಾಡುತಿತ್ತು.
ಹೋಗ ಬೇಡವೆ ಅದಕೆ
ಸೇರಿರಲು ಅರಳಿ ಕಟ್ಟೆಯ ಮೇಲೆ ದೀಪಗಳ ಪರಿಷತ್ತು
ದೀಪಾವಳಿಯ ಹೊತ್ತು
ಸತ್ಯ–ಖಂಡಿತ– ನಿಜವಿರಲೇ ಬೇಕು
ಎಣಿಕೆಯೆಂತೋ ಅಂತು ಶಕುನ ಸಾರಿ
ಲೊಚಗುಟ್ಟಿತು ಹಲ್ಲಿ....
ಅಲ್ಲಿ–

* * *

ಟಿ. ಜಿ. ಮುಡೂರು, ಪುಂಜಾಲಕಟ್ಟೆ.

೧೮೫೭ನ್ನು ನೆನೆದು

ಸಾವಿರದ ಎಂಟುನೂರ ಐವತ್ತ ಏಳು!
ಏನಾಯ್ತು ?
ಉರಿಯಿತೋ ಉರಿಯಿತು ಸ್ವಾತಂತ್ರ್ಯ
ಸಂಗ್ರಾಮ ಜ್ವಾಲಿ
ಹರಿಯಿತೋ ಹರಿಯಿತು ರಣರಂಗದಲಿ ರಕ್ತ ಧಮನಿ
ಗಂಡೆನವೆ ಹೆಣ್ಣೆನವೆ ತರುಣ-ವೃದ್ಧರು ಕೂಡಿ
ಶಸ್ತ್ರಪಾಣಿಗಳಾಗಿ ನುಗ್ಗಿದರು ಕೊಳುಗುಳಕೆ
ರಿಪುಗಳೆದೆ ಸೀಳಿದರು
ಕೊಚ್ಚಿದರು ಮುಚ್ಚಿದರು
ಪೆಣಗಳಿಂ ಕಣಗಳಂ
ಯಾರವರು?
ನಮ್ಮವರು, ನಮ್ಮ ಹಿರಿಯರು, ಪೂರ್ವಜರು
ಹಿಂದು-ಮುಸಲೀಮ ಬಾಂಧವರು,
ಇಂಗ್ಲಿಷರ ಹಸ್ತದಲಿ ನೊಂದ ನಾಡಿನ ಜನರು
ಭರತ ಮಾತೆಯ ಪರರ ಸೆರೆಯಿಂದ ಬಿಡಿಸಲ್ಕೆ
ಪೂಣ್ಕೆ ಹೊತ್ತವರವರು
ಮೂಲೆ ಮೂಲೆಯ ಜನರು ರೋಷ ಭೀಷಣರಾಗಿ
ದೀನು ದೀನೆನ್ನುತಲಿ ವಿಲಯ ನರ್ತನಗೈದ
ವೀರರವರು
ಹೆದರಿದರೆ ಇಂಗ್ಲಿಷರ ಗುಂಡಿನಾಘಾತಕ್ಕೆ!
ಫಿರಂಗಿನಾರ್ಭಟಕೆ!
ಇಲ್ಲ, ಭಯಮೇತರದು, ಭಯಭೀತಿ ತೊರೆದವರು
ಒಂದೆ ಗುರಿ, ಭಾರತದ ಸ್ವಾತಂತ್ರ್ಯ
ಕೆಚ್ಚೆದೆಯ ಕಟ್ಟಾಳುಗಳು ಅವರು
ವ್ಯಾಪಾರ ವ್ಯಾಜದಿಂ ತಕ್ಕಡಿಯ ತೂಗುತ್ತ
ಬಂದವರು ಬಿಳಿಯವರು

ಭಾರತೀಯರ ಸುಲಿದು ಮೋಸದಿಂದವಗಡಿಸಿ
ರಾಜ್ಯಕೋಶವ ಸೂರೆಗೊಂಡರಾ ಇಂಗ್ಲಿಷರು
ಮಾಡುತ ಗುಲಾಮರಂ ಹಿಂದು-ಮುಸ್ಲೀಮರನು
ಇದರಿಂದ ಕೆರಳಿದರು ವೀರ ಕೆಚ್ಚೆದೆಯವರು
ಪೇಷ್ವೆ ನಾನಾ ಸಾಹೇಬ್
ಧೀರ ತಾಂತ್ಯಾ ಟೋಪಿ
ಭಾರತಿಯ ವೀರ ಮಣಿ
ಝಾನ್ಸಿ ಲಕ್ಷ್ಮೀಬಾಯಿ
ಮೊಗಲ ಬಾದಶಹ ಬಹದೂರ ಷಾ ನೃಪನ
ಸುತ್ತಿದುದು ಬಳಸಿದುದು ನಮ್ಮ ಸೇನಾಪಡೆಯು
ರಾಣಿ ಲಕ್ಷ್ಮೀಬಾಯಿ ಕುದುರೆಯನ್ನೇರುತಲಿ
ಗಂಡುಡುಗೆಯಂ ಧರಿಸಿ
ಸಿಡುಗತ್ತಿ ಝಳಪಿಸುತ
ರಣರಂಗದಲಿ ತಾನೆ-ತಾನಾಗಿ
ಸಮರ ನೃತ್ಯವನಾಡಿ ಚೆಲ್ಲಿದಳು ಬಿಳಿಯರಂ
ಎದೆಯೊಡೆದು ಮಲಗಿದರು ನೆಲಮನ್ನು ಕಚ್ಚುತ್ತ
ಚೆಂಡಾಡಿದಳು ತಲೆಯ
ಧೀರ ತಾಂತ್ಯಾಟೋಪಿ ಕನಸಾಗೆ ನಡುಗಿದರು
ನಾನಸಾಹೇಬ ಭಯ ನಡುಗಿಸಿತು ಇಂಗ್ಲಿಷರ
ಆದೊಡೇಂ!
ಇದ್ದರಾಗಳು ನಮ್ಮ ವೀರಪಡೆ ನೆರೆಯಲ್ಲಿ
ದೇಶವಿದ್ರೋಹಿಗಳು ಒಳಸಂಚ ಹೂಡಿದರು
ಉಂಡ ಮನೆಗೆರಡನ್ನು ಬಗೆವರಾದ್ರೋಹಿಗಳು
ಭಾರತೀಯರ ಸರ್ವ ಗೂಢವುಂ ಹೊರಗೆಡಹಿ
ಶತ್ರು ಕೈ ಮಿಗಿಲಾಯ್ತು
ಹಿತರಾದರೊಬ್ಬೊಬ್ಬರೇ-ರಣದಿ
ರಾಣಿ ಲಕ್ಷ್ಮೀಬಾಯಿ ಶತ್ರುಘಾತದಿ ಮಡಿಯೆ

ಸೆರೆಯಾಗಿ ನಗುನಗುತ ಧೀರ ತಾಂತ್ಯಾಟೋಪಿ
ಮೃತ್ಯುವಪ್ಪಿದ
ಬಹದೂರ ಷಾ ನೃಪನು ಸೆರೆಯುವಾಸವನೊಲಿದ
ಅಜ್ಞಾತವಾದನಾ ನಾನ
ಏನಾದರೇನಂತೆ!
ಅವರ ಸ್ಫೂರ್ತಿಯು ಮತ್ತೆ ಅವರ ತೇಜವೆ ಮತ್ತೆ
ಮೂರ್ತಿಮತ್ತಾಗಿ ಸಂದೇಶ ಪಸರಿಸಿತು
ಅವರುಸಿರು ಅಳಿದುವೇ! ಆ ಘೋಷ ಮರೆಯಾಯ್ತೆ! ಇಲ್ಲ-
ಮಾಡುಗೊಳ್ಳುತಲಿಂದು ನೂರು ವರ್ಷದ ಮೇಲೆ
ಗಾಂಧೀ ಮಹಾತುಮರ ಆತ್ಮ ಶಕ್ತಿಯು ಬಲದಿ
ಪಾಶ್ಚಿಮಾತ್ಯರನಿಳಿಸಿ ಭಾರತಿಯು ಕಣ್ದೊರೆಸಿ
ಸ್ವಾತಂತ್ರ್ಯ ಧ್ವಜವೇರಿದುದು ಅದೆಕೊ
ಕೇಳಿ ಜೈ ಜಯಘೋಷವಾಗುತಿದೆ
ಭಾರತ ಚಕ್ರೇಶ್ವರೀ ಜೈ!!
ಎಂಬ ಜಯಘೋಷ ಮೊರೆಯುತಿದೆ.

॥ **ವಂದೇ ಮಾತರಂ** ॥

—ಎಮ್. ಎಸ್. ಅನಂತಪದ್ಮನಾಭರಾವ್, ಶಿವಮೊಗ್ಗ.

ಎತ್ತ ಸಾರ್ದುದು ಭಾರತಂ?

ಭಾರತ ಸ್ವಾತಂತ್ರ್ಯ ನಾಂದಿ ಸಂಗ್ರಾಮದೊಳ್
ಶ್ವೇತ ರಾಕ್ಷಸ ರೂಕ್ಷ ಬಂಧನ ದುರಂತದೊಳ್
ಎಂತಿತ್ತೊ ಕೌತುಕಂ ಆ ಅಮೃತ ದಿವಸದೊಳ್
'ಸ್ವರ್ಗ ಧುನಿ ಮರ್ತ್ಯದೊಳ್,' ಭಾವಿಸಿಲ್ಲೇನೋ? ॥ ೧ ॥
ಲೋಕಹಿತ ನಮ್ಮ ಮತ, ಕಾಯಕವೆ ಕೈಲಾಸ,
ದೀನ ದಲಿತ ಕ್ಷಿಪ್ರ ಕಲ್ಯಾಣ ಕಾರ್ಯ

ಸತ್ಯ ಸುಖ ಶಾಂತಿ ಸಮ ಭ್ರಾತೃ ಭಾವದ ತತ್ವ,
ಧ್ಯೇಯಮಿದು ಭಾಷಣಕೆ ಮೀಸಲಿಹುದೇನು? ॥ ೨

ಜಾತಿ ಮತ ಕುಲವರ್ಣ ಭೇದ ಭಾವನೆಗಳಂ
ವೇದಿಕಾ ಮಧ್ಯದೊಳ್ ಖಂಡಿಸುತ ಸಭೆಗಳೊಳ್
ಜಾತಿ ನೈಚ್ಯದ ವರ್ಗಕಿತ್ತ ಸೌಲಭ್ಯಗಳ
ವ್ಯಾಜದಿಂ ಪದವಿಯಂ ಪಡೆವ ಬಗೆಯೇನೊ? ॥ ೩

ಕೃಷಿಕ ಕಾರ್ಮಿಕ ಜನರ ಸ್ಥಿರ ಹಿತವ ಸಾಧಿಸುವ
ದಾರಿದ್ರ್ಯ ದುಃಖ ಪೀಡೆಗಳ ನಿರ್ಮೂಲಿಸುವ
ಸಹಕಾರ ತತ್ವದಿಂ ಸ್ವರ್ಗಮಂ ಧಿಕ್ಕರಿಪ
ಯೋಜನಾ ವಿವರಮದು ಶ್ರವಣಕಾಪ್ಯಾಯಮೇನ್? ॥ ೪

ಮಾನ್ಯರಿಂದುದ್ಘಾಟನೆಯ ಗೈಸಿ ಸಭೆಗಳೊಳ್
ದಿಟವಲ್ಲದಿಹ ವರದಿಯನ್ನೋದಿ ಸಮಿತಿಯೊಳ್
ಪ್ರಗತಿ ಪಥದಲ್ಲಿರುವ ನಾಡೆಂದು ಪತ್ರದೊಳ್
ಘೋಷಿಸಿದ ಮೇಲ್ಮೆಯಂ ಕಾಣಲದು ಸಾಧ್ಯಮೇನ್? ॥ ೫

ಜಡಿಸಿಡಿಲ ಬಿರುಮಳೆಯು ಕೆಸರು ನೀರೊಳ್ ನರಳಿ
ಎಲುಬು ಹಂದರವೊಡ್ಡಿ ಪ್ರೇತರೂಪವ ಮುಕ್ಕಿ
ರುಗ್ಣಶಯ್ಯೆಯ ನರಕದೊಳ್ ಮಿಂದುಗೈದ ಫಲ
ಕೃಷಿಕ ಸಂಘದ ವಾರ್ಷಿಕ ಮಹೋತ್ಸವಕೆ? ॥ ೬
ರಾತ್ರಿಂದಿವಂ ಯಂತ್ರ ಚಕ್ರದೊಳ್ ಹೆಣ ಹೊತ್ತು
ದಾರಿದ್ರ್ಯಶಾಪದಿಂ ಅರೆ ಹೊಟ್ಟೆಯೆಳೆಯುತಂ
ದುಡಿದ ಕಾರ್ಮಿಕರ ನೆತ್ತರ ತೆರಿಗೆಯಂ ಹೀರಿ
ಆರ್ಜಿಸಿದ ಧನಮೆಲ್ಲ ಶುಷ್ಕ 'ಸೆಮಿನಾರ್'ಗೇನ್? ॥ ೭

'ಸ್ವಾತಂತ್ರ್ಯ ಸುಖರಾಜ್ಯ' ಎಂದು ಉದ್ಘೋಷಿಸುತ
ಸ್ವಾತಂತ್ರ್ಯ ಸ್ವರ್ಗದಮೃತದ ಫಲವ ತೋರಿ
ಪಡೆದಿರ್ದ ಸ್ವಾತಂತ್ರ್ಯ ಸತ್ಫಲವನಾರಯ್ಯೆ
ಕುಪಥರಿಗೆ, ಧನಪತಿಗೆ, ಸಮಿತಿ ಸದಕೇನೋ? ॥ ೮

ಕಾಲೇಜು ಕೊಲನಿಗಳ, ಸೇತು ನವ ಮಾರ್ಗಗಳ
ವನ ಮಹೋತ್ಸವ ಸಪ್ತದಿನಗಳಾಚರಣೆಯು
ವನಿತಾ ವಿಹಾರಗಳ, ಸಂಸ್ಕೃತಿ ಸಮಾಜಗಳ
ಶಂಕುಸ್ಥಾಪನೆಯಲೆ ಸ್ವಾತಂತ್ರ್ಯ ಸವಿಯೆ? || ೯ ||

ಬರಿಸ ಇಪ್ಪತ್ತೊಂದು ಭೂಮಿ ಭಾರಕೆ ಸಂದ
'ಜ್ಞಾನಲವ ದುರ್ವಿದಗ್ಧ'ಗೆ ಮತವನಿತ್ತು
ಕುರುಡುವೋಟಿನ ಬಲದಿ ಜನ ಬೆಂಬಲಂ ಗಳಿಸೆ
ಬಂದುದೇನ್ ಭಾರತಕೆ ಭವ್ಯ ಸಂಪತ್ತು? || ೧೦ ||

ಆಗ್ನೇಯ ಅಗ್ನಿಕಣ ನಂಜು ನಾಲಗೆ ಚೀರಿ
ರಕ್ತ ಮಾಂಸವ ಹೀರೆ, ಮಂಜು ಬೆಟ್ಟವನೇರೆ
ದಳ ಪಂಚಮಂ ಪಂಚ ವಕ್ತ್ರೋರಗಂ ಸಿಡಿದು
ಫೂತ್ಕರಿಸೆಯಮೃತಫಲ ಸಿಗುವುದುಂಟೇನು? || ೧೧ ||

ಕಾಶ್ಮೀರ ಶೂಲವಿದು ಕೊರಳ ಪಾಶವ ಸೆಳೆಯೆ
ಪೋರ್ಚುಗೀಸರ ಶಿಲುಬೆ ಹೃದಯ ಶೂಲೆಯ ತೋರೆ
ಕಾದ ಕಾವಲಿಯಲ್ಲಿ ಬಂಧುಗಳ್ ಬೇಯುತಿರೆ
ಇಹುದೆ ಭವ್ಯಸ್ಥಾನ ವಿಶ್ವ ಸಂಸ್ಥೆಯೊಳು? || ೧೨ ||

ದೇಶಾಂತರದ ಕೋಟಿ ಕೋಟಿ ಸಾಲದ ಶೂಲ,
ಆಹಾರ ಧಾನ್ಯ ವಸ್ತು ಸಹಾಯದಾಪಾಶ
ವಿವಿಧ ಯಂತ್ರೋದ್ಯಮದ ಶ್ರೇಣಿ ನಾರಾಚದಾ-
ದಾಸ್ಯ ನೂತನ ಪಥದಿ ಇಹುದೆಮಗೆ ಮೋಕ್ಷ? || ೧೩ ||

ಮುಗಿದುದೈ ಈರೈದು ಯೋಜನೆಗಳಾಕಾರ್ಯ
ಆದುದೈ ಶತವಧಿಕ ನದಿಯ ಅಣೆಕಟ್ಟುಗಳ್-
'ಬರಿಗುಲ್ಲು ನಿದ್ದೆಗೇಡೆ'ಂಬ ತೆರದಿಂದೆಲ್ಲ
ಭಾರತದ ಜನಗಳಿಗೆ 'ಥಾರು' ಮರುಭೂಮಿಗೇನ್? || ೧೪ ||

ನರಹತ್ಯೆ, ಶಿಶುಹತ್ಯೆ, ಆತ್ಮಹತ್ಯೆಗಳಿಂದ
ಬಡವ ತಾ ಕರಗಿ ಸ್ತಂಭೀಭೂತನಾಗೆ

ಕೃತಕ ಸುರೆ, ಕಪಟ ಕೃತಿ, ಪಾಶವೀ ವೃತ್ತಿಯಿಂ
ಬದುಕಲಿಹುದೇ ಮುಂದೆ ನೆಮ್ಮದಿಯ ಬಾಳ್ವೆ ॥ ೧೫ ॥

ಏನು ಸ್ವತಂತ್ರವೋ ಏನ್ ರಾಮರಾಜ್ಯವೋ ?
ಶಾಂತಿ ಸುಖ ಜೀವನವ ಸಾಗಿಸಲು ಬಲ್ಲುದೇನ್ ?
ಇಲ್ಲದಿರೆ ದಾರಿದ್ರ್ಯ; ಇದ್ದರದು ಬಹುಸುಲಿಗೆ !
'ಮೃತ್ಯು ತೆರಿಗೆ'ಯ ಕೊಡದೆ ಸಾಯಲದು ಸಾಧ್ಯಮೇನ್?॥ ೧೬॥

— ಬಿ. ಪದ್ಮನಾಭ ಸೋಮಯಾಜಿ, ಸುರತ್ಕಲ್ಲು.

ಹುಚ್ಚು ಸನ್ಯಾಸಿ

ಕಾಡನುಳಿದೋಡಿ ಬಾ ಹುಚ್ಚು ಸನ್ಯಾಸೀ !
ನಾಡಿಗೊಲಿದೊಲಿದು ಬಾ ಏಕಾಂತವಾಸೀ !

೧ ಬನದ ಮೌನದೊಳೇನು ಶಾಂತಿ ತುಂಬಿಹುದೇ ?
ಗಿರಿಯ ಗಹ್ವರದಲ್ಲಿ ತತ್ವ ಚೆಲ್ಲಿಹುದೇ ?
ಸ್ನಾನ–ಧ್ಯಾನಗಳಲ್ಲಿ ಮುಕ್ತಿ ಮಲಗಿಹುದೇ ?
ಶ್ವಾಸ ಧಾರಣೆಯಲ್ಲಿ ದೇವನೊಲಿವಿಹನೇ ?

೨ ನಾಡ ಜನಜೀವನಕೆ ಬೆಚ್ಚಿ ಬೆದರುತ್ತ,
ಸಂಸಾರವೆಂದರದು ದುಃಖಾಬ್ಧಿಯೆನುತ,
ಬಾಳು–ಬದುಕನು ಬರಿಯ ಜಂಜಾಟವೆನುವೆ !
ಹೇಡಿತನದಲಿ ಕಾಡನೇಕೆ ಮರೆಹೊಗುವೆ ?

೩ ಲೋಕವೇ ದೇವನಿಗೆ ಸಾಕಾರ ರೂಪ
ಲೋಕವನ್ನುಳಿದೆಲ್ಲಿ ದೇವನಡಗಿರ್ಪ ?
ಕಾಡಿನಲಿ ದೈವ ಸಾಕ್ಷಾತ್ಕಾರ ಮಿಥ್ಯ
ಒಬ್ಬನಾತ್ಮೋದ್ಧಾರವದು ಬರಿಯ ಸ್ವಾರ್ಥ.

೪ ವಿಶ್ವ ಜೀವನದಲ್ಲಿ ಬೆರೆದೊಂದುಗೂಡಿ,
ಶಾಶ್ವತದ ಸತ್ಯವನು ಸೇವೆಯಲಿ ನೋಡಿ,

ಲೋಕಸೇವೆಯು ದೇವ ಸೇವೆಯೆಂದೆನಿಸು.
ಸರ್ವರುದ್ಧಾರದಲಿ ಶಾಂತಿಯುನ್ನರಸು.

೫ ನಿಸ್ವಾರ್ಥಸೇವೆಯಲಿ ತುಂಬು ಬಾಳುವೆಯು
ಬೆಳಕಾಗಿ ಬೆಳಗುವುದು ಅದೆ ದಿವ್ಯ ತಪವು.
ಪಶುತನದ ಸಂತ್ಯಾಗ ಮಾನವತೆಯುರಳು.
ದಿವ್ಯತೆಯುಸೇರುವುದು ಪೂರ್ಣತೆಯ ಹುರುಳು.

ಅಮ್ಮೆಂಬಳ ಶಂಕರನಾರಾಯಣ, ಕೋಟೆಕಾರು

ಪ್ರಾರ್ಥನೆ (ಪದ್ಮ ಪುರಾಣದಿಂದ)

"ತದ್ವೈ ದೇವಸ್ಯ ಸವಿತುರ್ವರೇಣ್ಯಂ ಭರ್ಗ ಉತ್ತಮಃ ।
ಸದಾ ಧೀಮಹಿ ತೇ ರೂಪಂ ಧಿಯೋ ಯೋ ನಃ ಪ್ರಭಾತಿ ಹಿ ॥"

"ಆವನೆಮ್ಮಯ ಬುದ್ಧಿಗಳನು ಬೆಳಗಿಸುವನೋ,
ಆ ಸವಿತೃ ದೇವನಾ ಪೂಜ್ಯ ಲೋಕೋತ್ತಮವು,
ಆ ನಿನ್ನ ರೂಪವನು ನಿರುತ ನೆನೆಯುವೆವು ॥ "

ವೆಂಕಟರಾಯಾಚಾರ್ಯ, ಸುರತ್ಕಲ್ಲು.

ರಾಧಾ-ಕೃಷ್ಣ

(ಒಂದು ಗದ್ಯ, ಪದ್ಯ, ನೃತ್ಯರೂಪಕ)

[ಹಿನ್ನೆಲೆಯಾಗಿ ಗದ್ಯ, ಪದ್ಯಗಳನ್ನು ಅಳವಡಿಸಿ ರಾಧಾ-ಕೃಷ್ಣರಾಗಿ ಇಬ್ಬರು ಬಾಲೆಯರು ನಾಟ್ಯವಾಡಲು ಈ ರೂಪಕವು ಅತ್ಯನುಕೂಲವಿದೆ. 1960ನೇ ಮೇ ತಿಂಗಳಲ್ಲಿ ಮಂಗಳೂರಿನ ಡೊನ್ ಬೊಸ್ಕೊ ಹೊಲಿನಲ್ಲಿ ಸ್ವಾಮಿ ಚಿನ್ಮಯಾನಂದಜಿಯವರ ವೇದಾಂತ ಕೊಲೆಜಿನ ಸಹಾಯಾರ್ಥ ವಿವಿಧ ವಿನೋದಾವಳಿ ಪ್ರದರ್ಶನವೊಂದು ನಡೆದಾಗ ಈ ರೂಪಕವು ಅಭಿನಯಿಸಲ್ಪಟ್ಟು ಪ್ರೇಕ್ಷಕರ ಮೆಚ್ಚಿಕೆಗೆ ಪಾತ್ರವಾಗಿತ್ತು. ಈ ರೂಪಕದಲ್ಲಿ ಬರುವ ಪದ್ಯಗಳನ್ನು ಸಂಗೀತ ವಾದನಗಳ ಸಮ್ಮೇಳದೊಂದಿಗೆ ರಾಗಯುಕ್ತವಾಗಿ ಹಾಡಿದರೆ ರೂಪಕಕ್ಕೆ ಇನ್ನಷ್ಟು ಕಳೆ ಬರುವುದು.]

[ರಚಯಿತರು: ಶ್ರೀ ಬಿ. ವಿ ಬಾಳಿಗಾ. ಮಂಗಳೂರು]

ಗೋಕುಲದಲ್ಲಿ ವಸಂತಾಗಮನವಾಗಿದೆ. ವಸಂತನು ಆಗಮಿಸುವುದೆಂದರೆ ಎಲ್ಲೆಲ್ಲೂ ಉತ್ಸಾಹ, ಆನಂದ ಮೂಡಿಯೇ ಮೂಡುವುದು. ಗೋಕುಲದ ಅತಿ ಚೆಲುವೆ ಗೋಪಿ ರಾಧೆ. ಗೋಪಾಲನ ಅತಿ ಮಮತೆಯವಳು ತಾನು ಎಂಬ ಅಭಿಮಾನ ಆಕೆಗೆ ಇದ್ದೇ ಇದೆ. ಏಕಾಕಿಯಾಗಿ ತನ್ನನ್ನು ಜಮುನೆಯ ಕಿನಾರೆಯಲ್ಲಿ ಇಂದು ಸಂಜೆ ಭೇಟಿಯಾಗಬೇಕೆಂದು ಕೃಷ್ಣನಿಗೆ ರಾಧೆಯ ಕರೆ ಹೋಗಿದೆ. ಪ್ರಿಯಕರನ ಸಮಾಗಮಕ್ಕಾಗಿ ಪ್ರಿಯೆಯು ಅತ್ಯಂತ ಚೆಲುವಾದುವನ್ನೇ ಆರಿಸಿ ಸಿಂಗರಿಸಿಕೊಳ್ಳುವುದು ಸಹಜ. ರಾಧೆಯು ಷೋಡಶ ಸಿಂಗಾರ ಸಾದರದಿಂದ ಸಾಗುತ್ತಿದೆ.

ನವನವೀನ ವಸನ ಧರಿಸಿ
ಝುಗಮುಗಿಸುವ ತೊಡಿಗೆ ಇರಿಸಿ
ಜಮುನಾ ತೀರವನು ಸೇರುವೆ
ಸುಮನಯನನ ಕಾಯುವೆ

ಉಡಿಗೆ ತೊಡಿಗೆಗಳ ವೈಯ್ಯಾರ ಬೀರಿ, ಆನನದ ಮುಂದೆ ನಿಂತು ತನ್ನ ರೂಪರಾಸಿಗೆ ಹಿರಿಹಿಗ್ಗುತ್ತಾಳೆ ರಾಧೆ. ದೀರ್ಘವಾದ ತನ್ನ ಕೇಶರಾಶಿಯನ್ನು ಸೊಂಪಾಗಿ ಬಾಚಿ, ಚೆಲುವಾದ ಹೂಗಳನ್ನು ಮುಡಿದು ಪ್ರೇಮಾಲಾಪ ಮಾಡುತ್ತ, ಪ್ರಿಯಕರನ ಪ್ರೇಮಾರಾಧನೆಗೆ ಪ್ರಾಗಳ

ಬುಟ್ಟಿಯೊಂದನ್ನು ಕೈಯಲ್ಲಿ ಹಿಡಿದು ಹಾಡುತ್ತ, ನಲಿಯುತ್ತ ನದಿ ತೀರದ ಕಡೆಗೆ ಹಂಸಗಮನದಿಂದ ಸಾಗುತ್ತಾಳೆ.

ಪೂ ಆರಿಸಿ, ಜಡೆ ಸೇರಿಸಿ
ನಡೆವೆನು ನಾನು ಬೇಗ
ಆನನದಿ ನಿಲುಕಿ–ಸೇಳ್ವೆ ಮೋಹರಾಗ
ನಂದಕುಮಾರ ನವನೀತ ಚೋರ
ಮನಮೋಹನ ಘನ ಶ್ಯಾಮ

ಜಮುನಾ ತೀರ. ಪ್ರಶಾಂತವಾಗಿ ಜಮುನೆಯು ಹರಿಯುತ್ತಿದ್ದಾಳೆ. ಪಶ್ಚಿಮ ದಿಗಂತದಲ್ಲಿ ಅಸ್ತಮಾನದ ಸಾಂಕೇತಿಕವಾಗಿ ದಿನಕರನು ಹೊಂಬಣ್ಣ ತಾಳಿದ್ದಾನೆ. ಕೃಷ್ಣನ ಆಗಮನವನ್ನು ಕಾದು ಕುಳಿತ ರಾಧೆ ಅವನ ಬರವನ್ನು ಕಾಣದೆ ಕಾತರಿಸುತ್ತಿದ್ದಾಳೆ. ಪ್ರಾಯಶಃ ಚಂದ್ರೋದಯದೊಡನೆ ತನ್ನ ಹೃದಯ ಚಂದ್ರನೂ ಮೂಡಿ ಬರುವನೆಂಬ ಕುಡಿಯಾಸೆಯೊಂದು ಆ ಕಾತರತೆಯಲ್ಲಿಯೂ ರಾಧೆಗೆ ಸಮಾಧಾನ ನೀಡುತ್ತಿದೆ. ಹೊತ್ತು ಹೋದಂತೆ ಮನದ ಕಾತರತೆ ಇನ್ನಷ್ಟು ಹೆಚ್ಚಿ, 'ಗೋವಿಂದಾ! ಗೋಪಾಲಾ! ರಾಧಾರಮಣಾ! ನೀ ಎಲ್ಲಿರುವೆ? ಭಾಷೆ ಕೊಟ್ಟು ಮೋಸ ಮಾಡುವುದು ನಿನಗೆ ತರವೇ?' ಎಂದು ಪ್ರಲಾಪಿಸುತ್ತ, ನದಿ ತಟದಲ್ಲಿ ಅಸ್ತವ್ಯಸ್ತವಾಗಿ ಅತ್ತಿಂದಿತ್ತ ತಿರುಗುತ್ತಾಳೆ.

ಎನ್‌ಮನದ ಹರಿಯಾಸೆ
ಕಮರಿತೇ ಮನದಾಸೆ
ಪ್ರಿಯೆ ಬರುವೆ ನಾನೆಂದು
ಈ ಮೋಸ ಏಕಿಂತು
ಮನಹರನೆ ಕಾತರಿಪೆ

ಅದೊಂದು ಸುಂದರ ಮುಸ್ಸಂಜೆಯಾಗಿತ್ತು. ಆಗಸವು ಶುಭ್ರವಾಗಿ, ಅಲ್ಲೊಂದು ಇಲ್ಲೊಂದು ಬಿಳಿ ಮೋಡಗಳು ಹಾಸಿಗೆಯಂತೆ ತೇಲುತ್ತಿದ್ದುವು. ರಾಧೆಯ ಕಾತರತೆ ಕಂಡು ಮನಕರಗಿಯೋ ಎಂಬಂತೆ ದಿನಪನು ಸಾಗರದ ತಳ ಸೇರಿದನು. ಮೇಯಲು ಹೋದ ಗೋವುಗಳ ಹಿಂಡು ಹಟ್ಟಿ ಸೇರಿತ್ತು; ಪಕ್ಷಿಗಳು ತಂತಮ್ಮ ಗೂಡುಗಳನ್ನು ಸೇರಿದುವು;

ದುಡಿಯಲು ಹೋದ ಮಂದಿ ದಿನಚರಿ ಮುಗಿಸಿ, ತಂತಮ್ಮ ಮನೆಗಳನ್ನು ಸೇರಿದರು. ನದಿಯ ತೀರದಲ್ಲಿ ನೀರವತೆ ಹರಡಿತು. ಸುಂಯ್ಯೆಂದು ಸುಳಿವ ಮಂದಮಾರುತನ ತರಂಗನಾದ, ಝುಮುಝುಮುವೆಂಬ ಪ್ರಶಾಂತವಾಗಿ ಸಾಗುವ ಜಮುನೆಯ ಅಲೆಗಳ ಅಲ್ಲಳಿ ಇಂಪುಗಳನ್ನು ಆಲಿಸುತ್ತ ಯೋಚನಾಮಗ್ನಳಾಗಿದ್ದಳು ರಾಧೆ. ಆಗಸದಲ್ಲಿ ಇಷ್ಟರಲ್ಲೇ ಚಂದ್ರನು ಮೂಡಿ, ತನ್ನ ಶೀತಲ ಚಂದ್ರಿಕೆಯಿಂದ ಚಕೋರಗಳನ್ನು ತಣಿಸುತ್ತಿದ್ದ. ಶಶಿಯ ಶೀತಲ ಕಿರಣಗಳೂ ತಣಿಸದಾದವು, ರಾಧೆಯ ಮನದ ಕಾತರತೆಯನ್ನು. ಆಕೆಯ ನೊಂದ ಮನಸ್ಸಿನಲ್ಲಿ ಕ್ರೋಧದ ಕಿಡಿಗಳು ಹಾರಿದುವು.

ಕಿಶೋರ ಇದು ತರವೇ ನಿರ್ದಯ
ವಿಷಾದ ನಿಜಕೂ ಅಗಧರ ಲಘುತರ
ಜಗಕೆ ಅಭಯವನು ನೀಡುವ ಪ್ರಭು ನೀ
ನಗದಿರುವುದೇ ಜನ ಹಗರಣವಿದ ಕಂಡು.

ಚಂದ್ರಮನೂ ಆಗಸದಲ್ಲಿ ಮೇಲೇರುತ್ತ ಹೋದನು. ಕಾಳರಾತ್ರಿಯ ನೀರವತೆಯೂ ಹೆಚ್ಚಿತು. ಶೂನ್ಯತೆಯು ರಾಧೆಯ ಮನಸ್ಸಿನಲ್ಲಿ ಭೀತಿ ಹುಟ್ಟಿಸದಿರಲಿಲ್ಲ. ಕ್ರೋಧದ ಸ್ಥಾನವನ್ನು ಪಶ್ಚಾತ್ತಾಪವು ಆಕ್ರಮಿಸಿತು. 'ಗೋಪಾಲನು ಗೋಪಿಯರೆಲ್ಲರ ಹೃದಯದ ಮೂರ್ತಿ. ಆತ ನನ್ನ ಅಧೀನನೆಂದು ನಾನು ಹೆಮ್ಮೆಪಟ್ಟುದು ಹುಚ್ಚಲ್ಲವೇ ?' ಮನಸ್ಸಿನಲ್ಲಿ ಪರಿತಪಿಸಿದಳು ರಾಧೆ. ಗಲ್ಲದ ಮೇಲಿಂದ ಕಂಬನಿ ಕೋಡಿಗಟ್ಟಿ ಹರಿಯಿತು. ಅಭಿಮಾನ ಸಂಪೂರ್ಣ ಕರಗಿತು. ಕೃಷ್ಣನು ಬರಬೇಕಾದ ದಾರಿಯನ್ನೇ ದಿಟ್ಟಿಸುತ್ತ ಪರಿತಪಿಸತೊಡಗಿದಳು.

ಪರಿಹರಿಸೊ ಪರಿತಾಪ
ಪರಮಾತ್ಮ ಪರಿಪೂರ್ಣ
ಅಭಿಮಾನಕ್ಕಿದು ಸಜೆಯೇ
ಅಭಿಸಾರ ಅಪಜಯವೇ

ಅದೇ ಸ್ಥಿತಿಯಲ್ಲಿ ರಾಧೆ ಎಷ್ಟು ಹೊತ್ತು ಇದ್ದಳೋ? ಫಕ್ಕನೆ ಕೃಷ್ಣನ ಕೋಮಲ ಕರಗಳ ಸ್ಪರ್ಶವಾದಂತಾಯಿತು ಆಕೆಗೆ. ಮುರಾರಿಯ ಮಂ

ಜುಳ ಮುರಲೀನಾದವು ಆಕೆಯ ಕರ್ಣಕುಹರಗಳಲ್ಲಿ ನಲಿದಂತಾಯಿತು. ಹಿಂದೆ ತಿರುಗಿ ನೋಡುತ್ತಾಳೆ. ಯಾರೂ ಇರುವುದಿಲ್ಲ. ಆದರೆ ಆ ಸ್ಪರ್ಶ ಸುಖ, ಸುಮಧುರ ವೇಣುನಾದ ನಿಂತಿಲ್ಲ. ನಾಲ್ದೆಸೆಗಳಿಗೂ ಆಕೆ ದೃಷ್ಟಿ ಹರಿಯಿಸಿದಾಗ ಕೃಷ್ಣನು ಗೋಪಿಯರ ಬಳಗದಿಂದೊಡಗೂಡಿ ಗಾಳಿಯಲ್ಲಿ ಹಾರಾಡುವ ದೃಶ್ಯ ಅವಳ ಹೃದಯ ಚಕ್ಷುಗಳಿಗೆ ಗೋಚರಿಸುತ್ತದೆ. ವಿಶ್ವವೇ ಕೃಷ್ಣಮಯವಾಗಿರುವುದನ್ನು ಕಂಡು ರಾಧೆ ಮೈಮರೆಯುತ್ತಾಳೆ. 'ಕೃಷ್ಣಾ, ಗೋಪಾಲಾ, ಮಾಧವಾ, ಏನು ದಿವ್ಯ ಮಹಿಮೆಯೋ ನಿನ್ನದು! ನೀನಿಲ್ಲದ ತಾವಿಲ್ಲ, ನಿನ್ನ ಕೃಪಾಕಟಾಕ್ಷ ಬೀಳದ ವಸ್ತುವಿಲ್ಲ ಎಂದ ಮೇಲೆ ನೀನು ನನ್ನವನು, ನಾನು ಹೇಳಿದಂತೆ ಕೇಳುವವನು ಎಂದು ನಾನು ಸ್ವಾರ್ಥಪರವಶಳಾಗಿ ಗರ್ವಪಟ್ಟುದು ತಪ್ಪಾಯ್ತು. ನನ್ನೀ ಹುಚ್ಚಿಗಾಗಿ ನನ್ನನ್ನು ಕ್ಷಮಿಸಲಾರೆಯಾ?' ಎಂದು ಪಶ್ಚಾತ್ತಾಪ ಪೂರ್ವಕ ಪ್ರಾರ್ಥಿಸುತ್ತಾಳೆ. ಆಗ ಆಕೆಗೆ ಕೃಷ್ಣನ ಸಾಕ್ಷಾತ್ಕಾರವಾಗುತ್ತದೆ.

ಭಾಸಮಾಗೆ ಕೃಷ್ಣಸ್ಪರ್ಶವು
ನಲವು ಒಲವು ಗೆಲವು
ಹೆಚ್ಚಿತು ಆ ಮುರಲೀ ನಾದದೆ
ಭ್ರಾಂತ ಚಿತ್ತದಿಂ ಜಾಗೃತಳಾಗಿ
ಭ್ರಮೆ ಪೋಗಿ ಪ್ರಿಯಕರನ ದಯದಿಂದ
ಸರ್ವವು ಕೃಷ್ಣಮಯ

ಅಮಿತಾನಂದದ ಆ ಸಮಾಧಿಯಿಂದ ರಾಧೆ ಎಚ್ಚೆತ್ತಾಗ ರಾತ್ರಿ ಕಳೆದು ನಸುಕು ಹರಿದಿತ್ತು. ಅವಳ ಪ್ರಿಯಕರ ಮುರಲೀ ಮನೋಹರನು ಅವಳ ಬಳಿಯಲ್ಲಿಯೇ ಇದ್ದ. ಸರಳ, ಮುಗ್ಧ, ನಿಷ್ಕಳಂಕ ಭಾವದ ಮುದ್ರೆಯಿಂದೊಡಗೂಡಿ ರಾಧೆಯ ಪಕ್ಕದಲ್ಲೇ ರಾಧೇ ಶ್ಯಾಮನು ಪವಡಿಸಿದ್ದ. ಮೃದುವಾಗಿ ಬೆನ್ನು ಚಪ್ಪರಿಸಿ ರಾಧೆ ಪ್ರಿಯಕರನನ್ನೆಬ್ಬಿಸಿದಳು. ಅವನ ಕೈಗಳಿಗೆ ತನ್ನ ಕೋಮಲ ಕರಗಳನ್ನು ಕೂಡಿಸಿ, ಗೆಜ್ಜೆಯಾಡಿಸುತ್ತ, ನಾಟ್ಯವಾಡತೊಡಗಿದಳು ರಾಧೆ. ಕಾಲುಗಳು ಕುಣಿಯುತ್ತಿದ್ದಾಗಲೇ ಈ ಸಂವಾದ ಅವರೊಳಗೆ ನಡೆಯಿತು.

'ವಂಚಕನಲ್ಲವೇ ನೀನು?' ಕೇಳಿದಳು ರಾಧೆ.

'ಹೌದು. ಹಾಗೆಂದು ತಿಳಿದವರಿಗೆ ಮಾತ್ರ ಅಲ್ಲ. ಅವರಿಗೆ ನಾನು ಸಹಜನು, ಸರಳನು'ಹೇಳಿದನು ಕೃಷ್ಣ.

'ಮತ್ತೆ ಸುಳ್ಳುಗಾರರನಲ್ಲವೇ ನೀನು?' ರಾಧೆಯು ಮತ್ತೊಂದು ಪ್ರಶ್ನೆ.

'ನನ್ನನ್ನು ಅರಸುವವರಲ್ಲಿ ನಾನು ಸುಳ್ಳುಗಾರನಲ್ಲ. ಅವರು ಈ ಸುಳ್ಳುಗಾರನನ್ನು ಕಂಡರೆಂದರೆ ಜಗದ ಸುಳ್ಳು ಮಾಯವಾಗುವುದು' ರಾಧೆಗೆ ಕೃಷ್ಣನ ಉತ್ತರ.

'ಮೋಸಗಾರನು ನೀನು' ರಾಧೆಯ ಬಿರುನುಡಿ.

'ಮೊದಲೇ ಮೋಸ ಹೊಂದಿದವರಿಗೆ ಮಾತ್ರ ನಾನು ಮೋಸಗಾರ' ಕೃಷ್ಣನ ಸರಳೋಕ್ತಿ.

'ಒಪ್ಪಿಕೊ ನೀನು ಕಳ್ಳನೆಂಬುದನ್ನು' ರಾಧೆಯ ವಾಗ್ಬಾಣ.

'ಕೇವಲ ಕಳ್ಳನಲ್ಲ, ವೇದಗಳೆನ್ನುವಂತೆ ಕಳ್ಳರ ಒಡೆಯ. ತಮ್ಮ ಆತ್ಮನ ಕುರಿತು ಯಾರು ಅಲಕ್ಷ್ಯದಿಂದಿರುವರೋ ಅವರನ್ನು ಮಾತ್ರ ನಾನು ಕದಿಯುತ್ತೇನೆ' ಕೃಷ್ಣನ ಮರುಬಾಣ.

'ಇತರರ ದುಃಖದಲ್ಲಿ ಸಂತಸಪಡುವ ಕ್ರೂರ ನೀನು.'

'ಪ್ರಾಪಂಚಿಕತೆಯಲ್ಲಿ ಮೈಮರೆತು ಆತ್ಮ ನಾಶ ಕೈಕೊಂಡವರಿಗೆ ಹಾಗೆ ತೋರುವೆ'

'ನೀತಿ ಬಾಹಿರನೂ ಜಾರನೂ ನೀನಾಗಿರುವಿ.'

'ಜಗವೆಲ್ಲ ನನ್ನ ಜಾರತನದ ಸಂತಾನ. ಜಗದ ಪ್ರತಿಯೊಂದು ಜೀವರಾಶಿಯೊಡನೆ ನಾನು ಅನುರಕ್ತನಿರುವೆ. ಆ ಸರಸಸಲ್ಲಾಪದ ವೈಪರೀತ್ಯವು ಪ್ರಾಪಂಚಿಕ ಮೋಹದಿಂದ ಜೀವಿಗಳನ್ನು ಮುಕ್ತ ಪಡಿಸಿ, ನನಗಾಗಿ ನನ್ನನ್ನು ಅವರು ಪ್ರೀತಿಸುವಂತೆ ಮಾಡುವುದು. ಆಗ ಪ್ರಿಯತಮೆ, ನಿನ್ನಂತೆ ಅವರೆಲ್ಲಾ ನನ್ನಲ್ಲಿ ಐಕ್ಯ ಹೊಂದುತ್ತಾರೆ.'

'ಗೋವಿಂದಾ, ಧನ್ಯಳಾದೆ! ನಿನ್ನನ್ನು ತಿಳಿದು ಕೃತಾರ್ಥಳಾದೆ!'

ಮನಸ್ಸಿನಲ್ಲಿ ಗರ್ವ, ಅಹಂಭಾವ ತುಂಬಿದಾಗ ಸಾರಿ ಕರೆದರೂ ಓ ಎನ್ನದ ಓಂಕಾರ ಸ್ವರೂಪಿ ಪರಮಾತ್ಮನು ಇದೀಗ ಗರ್ವ ಅಹಂಭಾವಗಳನ್ನು ಸಂಪೂರ್ಣ ತೊರೆದು ಪಶ್ಚಾತ್ತಾಪ ಪರಿಶುದ್ಧಳಾದ ತನ್ನ ಪ್ರಿಯ ಸಖಿ ರಾಧೆಯ ಬಳಿ ಮಂಜುಳ ಮುರಲೀನಾದ ಗೈಯುತ್ತ ನಲಿಯುತ್ತಿದ್ದ.

ಮನಸ್ಸು ಮಮಕಾರದಿಂದ ತುಂಬಿದಾಗ ಮಮತೆಯಿಂದ ಕರೆದರೂ ಮುಕುಂದ ಓ ಎನ್ನಲಾರ. ಅವನ ನೈಜ ಸ್ವರೂಪವನ್ನರಿಯದವರಿಗೆ ಆತ ಸುಳ್ಳುಗಾರ, ಮೋಸಗಾರ, ಕ್ರೂರ, ನೀತಿಬಾಹಿರ, ಏಕೆ, ಜಾರನಂತೆಯೂ ಭಾಸವಾಗುತ್ತಾನೆ. ಮಾಯೆ, ಮಮಕಾರ, ಮೋಹ, ಮದ, ಮತ್ಸರ ಇವು ದೂರವಾಗಿ ಮನಸ್ಸು ಪರಿಶುದ್ಧವಾಯಿತೆಂದರೆ ಆಗಲೇ ಮಾಧವನ ಸಾಕ್ಷಾತ್ಕಾರವಾಗುವುದು. ಈ ಮಹಾ ತತ್ವವನ್ನರಿತು ಕೃತಾರ್ಥಳಾದಳು ರಾಧೆ.

ಮನೋಹರ ಮುರಲೀ ಶ್ಯಾಮ
ವಿನುತ ವಿಶ್ವಂಭರ ಕೃಷ್ಣ ಕನ್ಹಯ್ಯಾ
ಶಿರದಿ ಮುಕುಟ ಕರದೊಳು ವರ ಬಾನ್ಸುರಿ
ಕೊರಳಲಿ ಸರ ವೈಜಯಂತಿಯ ವೈಖರಿ
ಶ್ರೀ.... ...ರೀ........

— ಜೈ ರಾಧೇ ಕೃಷ್ಣ —

ಹೂವು ಕಲೆಯಲ್ಲಿ, ಬಾಳಿನಲ್ಲಿ

ಶಿವರಾಮ ಕಾರಂತ, ಪುತ್ತೂರು.

ನಿಸರ್ಗದ ಸಾವಿರ ಸೃಷ್ಟಿಗಳಲ್ಲಿ, ಸಸ್ಯವರ್ಗವೂ ಒಂದು; ಸಸ್ಯಗಳ ಬಾಳಿನಲ್ಲಿ ಹೂವು ಅತ್ಯಪೂರ್ವ ಸನ್ನಿವೇಶ. ಪ್ರಕೃತಿ ತನ್ನ ಉದ್ದೇಶವೊಂದನ್ನು ಸಾಧಿಸಿಕೊಳ್ಳಲು ಗಿಡ, ಬಳ್ಳಿ, ಮರಗಳಿಗೆ ಹೂಗಳನ್ನು ಕೊಡುತ್ತಿದೆ. ಹತ್ತು ಬಗೆಗಳಿಂದ ಗಿಡಗಳು ತಮ್ಮ ಸಂತಾನವನ್ನು ಉಳಿಸಿಕೊಳ್ಳಬಲ್ಲುವಾದರೂ, ಆ ಸಂತಾನ ಶ್ರೀಯಲ್ಲಿ ವೈವಿಧ್ಯ, ಬೆಡಗು, ಉಪಯುಕ್ತತೆಗಳು ಹೆಚ್ಚಲು ಹೂವುಗಳು ಪ್ರಧಾನ ಸಾಧನಗಳಾಗಿವೆ. ಹೂವುಗಳಲ್ಲಿ ಗಂಡು–ಹೆಣ್ಣು ಸೃಷ್ಟಿಗೊಂಡಿವೆ. ಸಸ್ಯಗಳಲ್ಲಿ ಗಂಡು ಹೆಣ್ಣಿನ ಮಾನಸಿಕ ವಿಲಾಸಗಳು ನಮಗೆ ಕಾಣಿಸವಾದರೂ– ಅವುಗಳ ಪಾತ್ರ ಅಂತಹುದು–ಬೀಜೋತ್ಪತ್ತಿಗೆ ಹೂವು ಬೇಕೇ ಬೇಕು. ಆ ಗಂಡು ಹೆಣ್ಣುಗಳ ಸತ್ವಸಾರವನ್ನು ಮೇಳಯಿಸಿ ಹೊಸ ಜೀವನವನ್ನು ನಿರ್ಮಿಸಲು ಅವುಗಳ

ಪರಾಗ ಮೇಳಗೊಳ್ಳಬೇಕು. ಹಾಗೆ ಮೇಳಗೊಳಿಸುವ ಶಕ್ತಿಯೂ ಜಡವಸ್ತು ವಾದಂಥ ಗಾಳಿಯಾಗಿರಬಹುದು. ಅದರ ಬದಲು ಜೀವ ಜಗತ್ತಿನ ಕೀಟ, ಪತಂಗಗಳೂ ಆಗಬಹುದು. ಈ ಎರಡನೆಯದು ವಿಕಾಸದಲ್ಲಿನ ಮುಂದಿನ ಹೆಜ್ಜೆ, ಈ ಹೆಜ್ಜೆಯಲ್ಲಿ ಪುಷ್ಪದಾಂಪತ್ಯಕ್ಕೆ ದೂತರಾಗುವ ಕೆಲಸ ಜೀವಕೋಂಡಿಗೆ. ಸಾವಿರಾರು ಬಗೆಯ ಕೀಟಗಳು ಅದಕ್ಕೆ ನೆರವಾಗುತ್ತವೆ. ಅಂಥವುಗಳಿಂದ ತಮ್ಮ ಕೆಲಸ ಮಾಡಿಸಿಕೊಳ್ಳುವುದಕ್ಕೆ—ಹೂಗಳಿಗೆ ಸಾವಿರಾರು ಆಕಾರಗಳು, ನೂರಾರು ಬಣ್ಣಗಳು, ನೂರಾರು ಗಂಧಗಳು ! ಸಾಲದುದಕ್ಕೆ 'ಮಧು'ವಿನಂತಹ ಲಂಚಕೊಟ್ಟ ಹೂವುಗಳು ತಮ್ಮ ಕೆಲಸವನ್ನು ಸಾಧಿಸುತ್ತವೆ. ಪರಾಗ ವಿನಿಮಯ ಮಾಡುವ ಕೀಟಗಳಿಗೆ ಈ ಆಟದಲ್ಲಿ ಸಾಕಷ್ಟು ಆನಂದವಿದೆ, ಮನೋವಿಲಾಸವಿದೆ.

ಇಂಥವನ್ನೆಲ್ಲ ಕಂಡ ಮಾನವನ ಕಣ್ಣುಗಳು ಪುಷ್ಪಗಳಿಗೆ ಮರುಳಾಗಿ ತನ್ನದೇ ಆದ ಭಾವವಿಕಾರಗಳಿಗೆ ಗುರಿಯಾದರೆ ಆಶ್ಚರ್ಯವೇ ?

ಕೀಟಗಳು, ಪತಂಗಗಳು ಮಧುವಿನ ಆಸೆಯಿಂದ ಹೂವುಗಳ ಮದುವೆಯ ಪೌರೋಹಿತ್ಯ ನಡೆಸುತ್ತವೆ. ಆದರೆ ಮನುಷ್ಯನ ನಂಟುತನದಲ್ಲಿ ಅಂತಹ ಪರೋಪಕಾರ ಮಾತ್ರ ಕಾಣುವುದಿಲ್ಲ. ಅವನು ಹೂವಿಗಾಗಿ ಇಲ್ಲ! ಹೂವು ಅವನಿಗಾಗಿ ಇದೆ— ಎಂಬಂತೆ ವರ್ತಿಸುತ್ತಾನೆ ! ಇದೊಂದು ಸ್ವಾರ್ಥ, ನಿಜ. ಆದರೆ ಅದರಿಂದ ಹೂವುಗಳಿಗೂ ಪ್ರಯೋಜನವಾಗಿದ್ದೀತು. ಪ್ರಕೃತಿಯಲ್ಲಿ ಸಸ್ಯ ವೈವಿಧ್ಯ ಹೆಚ್ಚಿ ಅದರ ಸೊಬಗು ಬೆಳೆಯುವುದಕ್ಕೂ ಸಹಾಯವಾಗಿದೆ. ಸಜಾತೀಯ ಸಸ್ಯಗಳ ಆಕಸ್ಮಿಕ ಪರಾಗ ಮಿಶ್ರಣದಿಂದ ಅಸಂಖ್ಯ ಹೊಸ ಸಸ್ಯಜಾತಿ ಹುಟ್ಟಿದಂತೆ, ಮನುಷ್ಯ ತನ್ನ ವೈಜ್ಞಾನಿಕ ಬುದ್ಧಿಶಕ್ತಿಯಿಂದ ಇನ್ನೂ ಅಸಂಖ್ಯ ಹೊಸ ಸೃಷ್ಟಿಗಳಿಗೆ ಕಾರಣವಾಗಿದ್ದಾನೆ. ಈ ಬಗೆಯಿಂದ ಆತ ಸಸ್ಯ ಸಂಪತ್ತಿಗೆ ಮರುಕಾಣಿಕೆಯನ್ನು ತೆತ್ತಿದ್ದಾನೆ ಎಂದರೆ ತಪ್ಪಾಗಲಾರದು.

ಹೂವು ಮುಂದೆ ಬೀಜಕ್ಕೆ ಕಾರಣವಾಗುತ್ತವೆ. ಆ ಬೀಜದಿಂದ ತನಗೆ ಬೇಕಾದ ಕಾಳು, ಹಣ್ಣುಗಳನ್ನು ದೊರಕಿಸಬಹುದೆಂದು ಆಶಿಸಿ- ಅರಣ್ಯದಲ್ಲಿ ತನ್ನಂತೆ ಹುಟ್ಟಿ ಸಾಯುತ್ತಿದ್ದ; ಗಿಡಗಳನ್ನು ಮಾನವ ತಂದು ತನ್ನ ತೋಟ, ಹೊಲಗಳಲ್ಲಿ ಬೆಳೆಯಿಸಿದ; ನೀರಿಲ್ಲವಾಗ ಅವಕ್ಕೆ ನೀರನ್ನೆರೆದು ಪೋಷಿಸಿದ. ಇದೊಂದು ಪ್ರಯೋಜನದ ದೃಷ್ಟಿ.

ಇನ್ನೊಂದು ದೃಷ್ಟಿ ಕೇವಲ ಸೌಂದರ್ಯೋಪಾಸನೆಯ ದೃಷ್ಟಿ ಅವ
ನದು. ಹೂಗಳ ಚೆಲುವಿಗೇನೆ ಪತಂಗಗಳಂತೆ ಅವನೂ ಮರುಳಾದ.
ಅವುಗಳ ಬಣ್ಣ, ಆಕಾರ, ಕೋಮಲಕಾಯ, ಕಂಪುಗಳಿಗೆ ಆತನ ಮನಸ್ಸು
ಮರುಳಾಯಿತು. ಅವುಗಳ ಬದುಕು ಬರಿಯ ಒಂದೆರಡು ದಿನಗಳ ಲೀಲೆ
ಯೆಂದು ತಿಳಿದರೂ ಅವನು ಭಾವಪರವಶನಾದ. ಅವುಗಳ ಬಾಳು ಕ್ಷಣಿಕ
ವಾದುದು, ಮಾನವನ ಬಾಳು ಕೂಡ ಈ ವಿಶ್ವಲೀಲೆಯಲ್ಲಿ ಕ್ಷಣಿಕವಾ
ದುದೇ. ಒಂದು ವಸ್ತು ಕ್ಷಣಿಕವೆಂಬುದರಿಂದ, ಅದರ ಬಾಳಿಗೆ ಅರ್ಥವಿ
ಲ್ಲವಾದೀತೇ? ಹೂವಿಗಿಂತ ಬಂಡೆಯೆಂದು ದೀರ್ಘಕಾಲ ಬದುಕುತ್ತದೆ.
ಆ ಕಾರಣದಿಂದಲೇ 'ಬಂಡೆ'ಯೆಂಬುದರ ಯೋಗ್ಯತೆ ಹೆಚ್ಚುತ್ತದೆಯೆ?
ಎಂದೂ ಇಲ್ಲ. ಬಾಳು ಸುಂದರವಾಗಿದ್ದರೆ ಕ್ಷಣಿಕವಾದರೂ ಅದರ ಚೆಲು
ವಿಗೆ ಕೊರತೆಯಿಲ್ಲ. ಅದರಿಂದಲೇ ಹೂವು ಮನುಷ್ಯನ ಪಾಲಿಗೆ ಭಾವ
ವನ್ನು ಪ್ರಚೋದಿಸಬಲ್ಲ ಅಮೂಲ್ಯ ವಸ್ತುವಾಯಿತು. ಆದಿ ಮಾನವ
ಕುಲದ ಹೆಣ್ಣುಗಂಡುಗಳೆಲ್ಲವೂ ಹೂವಿಗಾಗಿ ಹಂಬಲಿಸಿದುವು.

ಅಂಥ ಹೂವುಗಳನ್ನು ಗಿಡದಲ್ಲಿಯೇ ಕಂಡು ಅವನ್ನಲ್ಲಿಯೇ ಬಿಟ್ಟು
ಬರಲು ಮನುಷ್ಯನ ಮನಸ್ಸು ಒಪ್ಪಲಿಲ್ಲ. ಅವನ್ನು ಮುಟ್ಟುವ ಮನ
ಸ್ಸಾಯಿತು, ಮೂಸುವ ಮನಸ್ಸಾಯಿತು, ಮುದ್ದಾಡುವ ಮನಸ್ಸಾಯಿತು.
ಅದರ ಚೆಲುವನ್ನು ತನ್ನ ಚೆಲುವಿಗೆ ಸೇರಿಸಿ ಮೆರೆಯುವ ಮನಸ್ಸೂ
ಆಯಿತು. ಹೆಣ್ಣು ಹೂವನ್ನು ಮುಡಿಯಲ್ಲಿ ತೊಟ್ಟಿತು, ಕೊರಳಲ್ಲಿ
ಮಾಲೆಯಾಗಿ ಧರಿಸಿತು, ಕಿವಿಗೆ ಅಲಂಕಾರವಾಗಿ ಮಾಡಿಕೊಂಡಿತು.
ಗಂಡೂ ಹಾಗೆ ಮಾಡಿತು. ಇಂದಿನ ಗಂಡಸು ಈ ವಿಷಯದಲ್ಲಿ ತುಸು ಅರ
ಸಿಕನಾಗಿ ಕಾಣಿಸಿದರೂ ಅವನ್ನು ಆಭರಣಕ್ಕಾಗಿ ಉಪಯೋಗಿಸುವುದರ
ಲ್ಲಷ್ಟೆ ಆತ ಅರಸಿಕ. ಆದರೂ ಒಮ್ಮೊಮ್ಮೆ ಹೂವನ್ನು ತನ್ನ ಅಂಗಿಯ
ತೂತಿಗೆ ಸಿಕ್ಕಿಸಿಕೊಂಡು, ತನ್ನ ಮಮತೆಯನ್ನು ಪ್ರಕಟಿಸುತ್ತಾನೆ.

ಈಜಿಪ್ತಿನ ಪುರಾತನ ಸರೋವರ ಗುಡಿ ಗೋಪುರಗಳಲ್ಲಿ ಹಿಂದಣ
ಮಾನವರ ಪುಷ್ಪಪ್ರಿಯತೆ ಕಾಣಿಸುತ್ತದೆ. ಅಲ್ಲಿನ ಜವುಗು ನೆಲದಲ್ಲಿ
ಹುಟ್ಟುವ ನೈದಿಲೆಗಳನ್ನು ಪುರಾತನ ಈಜಿಪ್ತಿನ ಚಿತ್ರಕಾರರು ಬಹುವಾಗಿ
ಚಿತ್ರಿಸಿದ್ದಾರೆ. ನೈದಿಲೆ ಅವರ ಮನಸ್ಸಿನಲ್ಲಿ ಬಹು ಹೆಚ್ಚಿನ ಮನ್ನಣೆ ಪಡೆ
ದಿತ್ತು. ಚೀನಿಯರ ಪುರಾತನ ಸಮಾಧಿಗಳಲ್ಲಿ ತಾವರೆಯ ಬೀಜಗಳನ್ನು

ವೃತರ ಕಾಣಿಕೆಗೆ ಸೇರಿಸಿದ್ದರು. ವಿಜ್ಞಾನಿ ಅಂಥ ಬೀಜಗಳನ್ನು ನೆಟ್ಟು ಮೂರು ಸಾವಿರ ವರ್ಷಗಳ ಬಳಿಕ ಹೂವನ್ನು ಗಳಿಸಿದ್ದಾನೆ.

ಭಾರತೀಯರಾದ ನಮಗೆ ಕೆಸರಲ್ಲಿ ಹುಟ್ಟಿದ ಕಮಲ ಉತ್ತಮ ಗುಣಕ್ಕೆ ಸಂಕೇತವಾಗಿದೆ. ಇಲ್ಲಿಗೆ ನಾವು ಇನ್ನೊಂದು ಹೆಜ್ಜೆ ಮುಂದಿಟ್ಟಾಯಿತು. ಹೂವನ್ನು ಹೂವಿಗಾಗಿ ಮೆಚ್ಚುವಂತೆ ಅದರ ನೆನಪಿಂದ ಇತರ ಸುಂದರ ವಸ್ತುಗಳನ್ನು ನೆನೆದು ಹಿಗ್ಗುವುದು, ಇದು ಕವಿಯ ಕ್ಷೇತ್ರ. ಲೋಕದ ಎಲ್ಲಾ ದೇಶದ ಕವಿಗಳೂ ಹೂವಿಗಾಗಿ ತಮ್ಮ ಹೃದಯವನ್ನು ತೆರೆದಿರಿಸಿದರು. ತಾವರೆಯೊಂದೇ ಅಲ್ಲ-ಸಾವಿರ ಬಗೆಯ ಹೂವುಗಳು, ಅವುಗಳ ಬಣ್ಣಗಳು ಅವರಿಗೆ ಮೆಚ್ಚಿಕೆ. ಕೋಮಲಭಾವ, ಕೋಮಲ ಹೃದಯಗಳನ್ನು ನೆನೆಯುವಾಗಲೆಲ್ಲ ಅವರಿಗೆ ಹೂವುಗಳ ನೆನಪು ಬರುತ್ತದೆ!

ಅದರಿಂದಲೇ ನಮಗೆ ಪ್ರಿಯರಾದವರು ದೇವತೆಗಳಿರಲಿ, ಪ್ರಿಯತಮೆಯರಿರಲಿ—ಅವರ ಮುಖವು ಅರವಿಂದ ಸದೃಶವಾಯಿತು. ಕಣ್ಣು ಕಮಲದಳಾಕಾರವನ್ನು ಪಡೆಯಿತು. ಮೂಗು ತಿಲಪುಷ್ಪ ಸದೃಶವಾಯಿತು. ತುಂಬ ನಗೆ ಮಲ್ಲಿಗೆಯ ವೃಷ್ಟಿಯಾಯಿತು. ಒಂದೊಂದು ನಾಡಿನವರೂ—ತಂತಮಗೆ ಪ್ರಿಯವಾದ ಪುಷ್ಪಗಳಿಂದ ತಮ್ಮ ಪ್ರೇಯಸಿಯರನ್ನು ಒಲಿಸಿದರು, ಆರಾಧಿಸಿದರು, ಅವುಗಳ ಉಪಮೆಕೊಟ್ಟು ಪ್ರಶಂಸಿಸಿದರು. ಡೈಸಿ, ಪ್ರಿಮರೋಸ್, ಲಿಲ್ಲಿ, ಟ್ಯೂಲಿಪ್‌ಗಳಂಥವು ಪಾಶ್ಚಾತ್ಯರಿಗೆ ಪ್ರಿಯವಾದರೆ, ನಮಗೆ ಮಲ್ಲಿಗೆ, ಮಾಧವಿ, ಕಮಲ, ಜಾಜಿ, ಸಂಪಿಗೆ ಮೊದಲಾದ ಹಲವಾರು ಪುಷ್ಪಗಳು ಮೆಚ್ಚಿಕೆಯಾದುವು. ಪಾರಸಿಕರು ಗುಲಾಬಿಗಾಗಿ ಹಿಗ್ಗಿದರು, ಹವಾಯಿಯುವರು ದಾಸವಾಳವನ್ನು ಮುಡಿಗೇರಿಸಿದರು, ಚೀನಿಯರೂ ಜಪಾನಿಯರೂ ಸೇವಂತಿಗೆ, ಚೆರ್ರಿ ಹೂವುಗಳಿಗಾಗಿ ಮರುಳಾದರು.

ಈ ಮರುಳು-ಪುಷ್ಪಗಳನ್ನು ಬೆಳೆಯಿಸುವುದರಲ್ಲಿ, ಆಯುವುದರಲ್ಲಿ, ಮಾಲೆಗಾಗಿ ಹೆಣೆಯುವುದರಲ್ಲಿ, ಗೊಂಚಲಾಗಿ ಅಲಂಕರಿಸುವುದರಲ್ಲಿ ಪ್ರಕಟಗೊಂಡಿತು. ಅದೇ ಒಂದು ಕಲೆಯಾಯಿತು. ಇದು ಹೂವು ನಮ್ಮ ಕೈಗೆ ಬಂದಾಗ.

ಕೈಗೆ ಬಾರದ ಹೂವುಗಳಿಗಾಗಿ—ಮಹಮ್ಮದ ಪರ್ವತದ ಸನಿಯ

ಹೋದಂತೆ-ಅವನು ಹೋಗತೊಡಗಿದ. ಚೆರ್ರಿ ಹೂವುಗಳಾಗುವಾಗ ಜಪಾನಿಯರು ಗಿಡಮರಗಳ ಬಳಿಗೇನೆ ಹೋಗುತ್ತಾರೆ. ಯುರೋಪಿನವರು ಹಾಲೆಂಡಿನ ಟ್ಯೂಲಿಪ್ ಹೂವುಗಳ ಹೊಲಗಳ ವಿಸ್ತಾರ ಕಾಣಲು ಅಲ್ಲಿಗೆ ಯಾತ್ರೆ ಬೆಳೆಸುತ್ತಾರೆ. ಹಿಮದಿಂದ, ಜಲಾಭಾವದಿಂದ ಭೂಮಿ ಬರಡು ಬೀಳುವಲ್ಲಿ, ಒಂದೊಂದು ಮಳೆಬಿದ್ದು, ಅನುಕೂಲ ಹವೆಯೊದಗಿ ತೆಂಪರೆ ಆಗ ಮರುಭೂಮಿಗಳೂ ನಂದನವನವಾಗುತ್ತವೆ. ಅಂಥ ಮರುಭೂಮಿಯ ಪುಷ್ಪ ಉದ್ಯಾನಗಳಲ್ಲಿ ನೂರಾರು ಚದರ ಮೈಲು ವಿಸ್ತಾರಕ್ಕೆ ಹಾಸಿದ ಪುಷ್ಪ ಸಮುದಾಯಗಳನ್ನು ಕಾಣಲು ಪಾಶ್ಚಾತ್ಯರು-ಸ್ವಿಜರ್ಲೆಂಡ, ನಿವೆಡ, ರಾಕೀ ಮೊದಲಾದ ಪರ್ವತಗಳಿಗೆ, ಮರುಭೂಮಿಗಳಿಗೆ ಯಾತ್ರೆ ಹೋಗುತ್ತಾರೆ!

ಆಗ ಬಾನಿನ ತಾರೆಗಳೆಲ್ಲ ತಮ್ಮ ಬೆಡಗನ್ನು ಪುಷ್ಪರೂಪದಿಂದ ಭೂಮಿಗೆ ದಾನಮಾಡುತ್ತವೆ! ಜಗತ್ತಿಗೆ ಜಗತ್ತೇ ಆನಂದಗೊಳ್ಳುತ್ತದೆ. ನಿಸರ್ಗವು ಪುಷ್ಪಸಮೃದ್ಧಿಯಿಂದ ಮೆರೆಯುವಾಗ ಮನುಷ್ಯನ ಮನಸ್ಸು ಬರಡಾಗಲುಂಟೇ?

ಮನುಷ್ಯ ಕೇವಲ ತನ್ನ ಪ್ರಣಯವಿಲಾಸಕ್ಕಾಗಿ ಹೂವನ್ನು ಆಯುತ್ತಾನೆ. ಪ್ರೇಯಸಿಗೆ ಕಾಣಿಕೆಯಾಗಿ ಒಪ್ಪಿಸುತ್ತಾನೆ! ಇನಿಯಳು ಪುಷ್ಪಾಲಂಕೃತಳಾದುದನ್ನು ಕಂಡು ಸಂತಸ ತಾಳುತ್ತಾನೆ! ಎಂದರೆ ಒಂದು ಪಕ್ಷಪಾತ ದೃಷ್ಟಿಯಾದೀತು. ಅಂತಹ ಅಪೇಕ್ಷೆಯಿಲ್ಲದೆಯೂ ಆತ ಹೂವನ್ನು ದೇವತೆಗಳಿಗೆ ಒಪ್ಪಿಸುತ್ತಾನೆ. ನಮ್ಮ ವಿವಿಧ ದೇವರುಗಳ ಪ್ರತಿಮೆಗಳ ಪೂಜೆಗೆ ನಮಗೆ ಮಲಿನವಾಗದ ಹಚ್ಚ ಹೊಸ ಹೂವುಗಳೇ ಬೇಕು. ಅವರಲ್ಲಿಯೂ ದೇವರ ಮನಸ್ಸಿನ ಇಂಗಿತ ಬಲ್ಲವರಂತೆ- ಇಂಥ ದೇವರಿಗೆ ಇಂಥ ಹೂವು ಮೆಚ್ಚಿಗೆಯೆನ್ನುತ್ತೇವೆ. ಹೂಮಾಲೆಗಳಿಂದ, ಬಿಡುಹೂಗಳಿಂದ ದೇವರಾಧನೆಯನ್ನು ಮಾಡುತ್ತೇವೆ,

ಪುಷ್ಪದಿಂದ, ಫಲದಿಂದ-ಅವೆರಡೂ ಇಲ್ಲದಲ್ಲಿ ಬರಿಯ ದಳದಿಂದಾದರೂ ದೇವರ ಸೇವೆ ಮಾಡುತ್ತೇವೆ. ಭಾರತೀಯರಲ್ಲಿ, ದೇವರ ಪೂಜೆಗೆ ಹೂವಿಲ್ಲದಿರುವುಧೆಂದರೆ ಕಡು ದಾರಿದ್ರ್ಯದ ಲಕ್ಷಣವೇ ಸರಿ. ಕೊನೆಗೆ ನಮ್ಮ ಮನೆಯ ಹೂವು ಇಲ್ಲದೆ ಹೋದರೆ, ನೆರೆಮನೆಯವರು ಏಳುವ

ಮೊದಲೇ, ಅವರ ಚಿತ್ತಲಿಗೆ ಸುಗ್ಗಿ, ಕದ್ದಾದರೂ ಕೆಲವು ಹೂವುಗಳನ್ನು ತಂದು ದೇವರ ತಲೆಯ ಮೇಲಕ್ಕೆ ಏರಿಸುತ್ತೇವೆ.

ಕಳ್ಳ ಮಾಲು ದೇವರಲ್ಲಿ ಸಿಕ್ಕಿದುದಾದರೆ, ಆತನಿಗಲ್ಲವೆ ಅಪರಾಧದ ಹೊರೆ!

ಸುಖ ಜೀವನಕ್ಕೆ ಸಂಕೇತ ಹೂವಿನ ಹಾಸಿಗೆ! ಅಷ್ಟು ಹಿತ ಅದನ್ನು ನೆನೆದರೆ! ಒಬ್ಬಳು ಜಾನಪದ ಕವಯಿತ್ರಿ- ತನ್ನ ಮಗುವು ಜಿವತುದಾದರೆ ಅದನ್ನು ಒರೆಸಲು ಬಟ್ಟೆಯನ್ನು ಬಳಸದೆ ಚಂಡುಮಲ್ಲಿಗೆಯಿಂದ ಒರಸು ವೆನೆಂದಿದ್ದಾಳೆ. ಆ ಕೆಲಸಕ್ಕೆ ಅದು ಬರಲಿ ಬಾರದಿರಲಿ, ಮನಸ್ಸು ಅವಳ ಶಿಶುವಿಗೆ ತಕ್ಕ ವಸ್ತ್ರವನ್ನು ಹೂವಿನಿಂದಲೇ ಕಲ್ಪಿಸಿದೆ.

ಅನೇಕ ಬಾರಿ ನಾನು—ಬಕುಳ, ದೂಪ, ಪಾರಿಜಾತ ವೃಕ್ಷಗಳ ಬಳಿಗೆ ಹೋಗಿ, ರಾತ್ರಿ ಉದುರಿ ಬಿದ್ದ ಹೂವಿನ ವಿಶಾಲ ಹಾಸುಗೆಯನ್ನು ಕಂಡು ಮರುಳಾಗಿದ್ದೇನೆ! ಸಾಲದುದಕ್ಕೆ ಅಲ್ಲಿ ಕಂಪು ಬೀರುವ ಗಾಳಿ, ಜೇನಿಂದ ಮತ್ತವಾದ ನೊಣಗಳ ಝೇಂಕಾರ ಸೇರಿದ್ದುಂಟು. ಆ ಪುಷ್ಪಾಚ್ಛಾದಿತ ಶಯ್ಯೆಯಲ್ಲಿ, ಮಂದಮಾರುತ ಚವರಿ ಬೀಸುತ್ತಿರುವ, ಜೇನ್ನೊಣ ಗಾನವಾಡುತ್ತಿರುವ ಪ್ರಸಂಗದಲ್ಲಿ ಮನಸ್ಸು—ಹೂವಿನ ಹಾಸಿಗೆ ಯಲ್ಲಿ ಪವಡಿಸಲು ಹಂಬಲಿಸದಿದ್ದೀತೇ? ಅದೇನೆ ಸುಖ ಸ್ವರ್ಗ. ಮನಸ್ಸಿನಲ್ಲಿ ಲಲಿತ ಭಾವಗಳ ತರಂಗಗಳನ್ನು ಎಬ್ಬಿಸ ಬಲ್ಲ ಹೂವುಗಳ ಸ್ಮರಣೆಯೇ ಆ ಸ್ವರ್ಗಕ್ಕೆ ಸೋಪಾನ!

ನಿದ್ದೆ- ಒಂದು ವಿಚಾರ

(ಲೇಖಕರು: 'ವಿಜಯ' ಸುರತ್ಕಲ್ಲು.)

ಅದೊಮ್ಮೆ ಭಾಗಮಂಡಲಕ್ಕೆಂದು ಹೊರಟವನು ರಾತ್ರಿಯನ್ನು ಮಂಗಳೂರಿನ ಬಸ್ ಆಫೀಸಿನಲ್ಲಿ ಕಳೆಯಬೇಕಾಗಿ ಬಂತು. ಅಲ್ಲಿ ಪಟ್ಟಣಿಗರ ಹುಟ್ಟು ಗೆಳೆಯರಾದ ನುಸಿಗಳ ಸಾಮಗಾನವೊಂದೆಡೆ, ತಗಣೆಗಳ ತ್ರಿಗುಣಾತ್ಮಕ ಕಾಟವಿನ್ನೊಂದೆಡೆ. ಇವುಗಳ ಮಧ್ಯೆ ನನಗೆ ನಿದ್ರೆಯ ಸುಳಿವೇ ತೋರಲಿಲ್ಲ. ಮನಸ್ಸು ಹಲವಾರು ಯೋಚನೆಗಳಿಗೆ ಸಿಲುಕಿ

ವ್ಯಗ್ರವಾಗಿತ್ತು. ಬರುಬರುತ್ತಾ ನಿದ್ರಾ ಯೋಚನೆಯಲ್ಲಿದ್ದ ಮನಸ್ಸಿಗೆ ನಿದ್ರೆಯ ಯೋಚನೆಯೇ ಹೆಚ್ಚಾಗ ತೊಡಗಿತು. ಆಗ ತಟ್ಟನೆ ಮಿದುಳಿಗೊಂದು ಹೊಳೆದಂತಾಯಿತು. ಅಂದರೆ, ಹಿಂದೆ ವಿದ್ಯಾರ್ಥಿ ದಶೆಯಲ್ಲಿ ಆ ಸಾಧು ಸ್ವಭಾವದ ಸಂಸ್ಕೃತ ಪಂಡಿತರು ಕಲಿಸಿಕೊಟ್ಟ 'ಶ್ರೀ ರಾಮೋದಂತ'ದಲ್ಲಿನ 'ನಿರ್ದೇವತ್ವೇಚ್ಛಯಾ ನಿದ್ರಾಂ ಕುಂಭಕರ್ಣೋऽವೃಣೀತ ಚ' ಎಂಬೊಂದು ಶ್ಲೋಕಾರ್ಧವು ನೆನಪಿಗೆ ಬಂತು. ಕುಂಭಕರ್ಣನಿಗೂ ನಿದ್ರೆಗೂ ಅಸ್ಖಲಿತ ಸಂಬಂಧವೆಂಬುದು ಆಬಾಲವೃದ್ಧರೂ ಅರಿತ ವಿಷಯ. ಆದರೆ ಆ ಕುಂಭಕರ್ಣನು ಬುದ್ಧಿಪುರಸ್ಸರವಾಗಿ ನಿದ್ರೆಯ ವರವನ್ನು ಕೇಳಿರಲಿಲ್ಲ. ಹಿಂದೆ ರಾವಣ, ಕುಂಭಕರ್ಣ ವಿಭೀಷಣರು ಉಗ್ರ ತಪಸ್ಸನ್ನೆಸಗಿದರು. ಕುಂಭಕರ್ಣನು ಮಾತ್ರ ಬ್ರಹ್ಮನಿಂದ ವರಗಳನ್ನು ಪಡೆಯುವ ಸಮಯ 'ನಿರ್ದೇವತ್ವ'ವನ್ನು ಇಚ್ಛಿಸಿದನಂತೆ. ಅದನ್ನರಿತ ಸರಸ್ವತಿಯು —ಅದೇ ಬ್ರಹ್ಮನ ರಾಣಿಯು— ಅವನ ನಾಲಗೆಯಲ್ಲಿ ನೆಲೆನಿಂತು, ಆ ಮಾತನ್ನು ಬದಲಿಸಿ, 'ನಿದ್ರಾಂ' ಎಂಬ ವರವನ್ನು ಕೇಳುವಂತೆ ಮಾಡಿದಳಂತೆ. ಅದಕ್ಕೆ ಬ್ರಹ್ಮನು 'ತಥಾಸ್ತು' ಎಂದನಂತೆ. ಹೀಗಾಗಿ, ಕುಂಭಕರ್ಣನು ನಿದ್ರೆಯನ್ನು ಮಾಡುತ್ತಿರಬೇಕಾಯಿತು. ಈ ನಿದ್ರೆಗೂ 'ನಿರ್ದೇವತ್ವ'ಕ್ಕೂ ಸಂಬಂಧವಿದ್ದಿರಬಹುದೇ ಎಂದು ಮಿದುಳಿನಲ್ಲಿ ಆಗಾಗ ಸುಳಿಯುತ್ತಿತ್ತು. ಈ ನಿದ್ರೆ ಬಾರದ ರಾತ್ರಿಯಂತೂ ತುಸ ಈ ಮೀಮಾಂಸೆಗೆ ತೊಡಗಿದೆ.

ನಿದ್ರೆಯಲ್ಲಿಯೂ ಒಂದು ದೈವಿಕತೆ-ನಿರ್ಝರತೆ ಇದೆಯೆಂದರೆ ತಪ್ಪಾಗದು. ಮಾನವ ಜಗತ್ತಿನ ಸೊತ್ತಾದ ನಿದ್ರೆಯಿಂದಾಗುವ ಸುಖವು ಅಮರ ಸುಖಕ್ಕೂ ಮಿಗಿಲಾಗಿಲ್ಲವೇ? ನಿದ್ರೆಯಿಂದಲೇ ಸ್ವಪ್ನರಾಜ್ಯದ ನವ್ಯಭವ್ಯ ಪರಿಚಯವು ನಮಗಾಗುವುದು. ಅಯಾಚಿತ ನಿದ್ರೆಯ ಸವಿಯನ್ನು ಉಂಡವನೇ ಬಲ್ಲನು. ಕವಿಗಾಯಕರೂ, ಕಥಾ ಕಾದಂಬರಿಕಾರರೂ ನಿದ್ರೆಯ ಗುಣಗಾನವನ್ನು ಸುರುಚಿರ ಸುಂದರವಾಗಿ ಮಾಡಿರುವರು. ಅಲ್ಲದೆ ಮನುಷ್ಯರಲ್ಲಿ ಸಮಾನತೆಯನ್ನುಂಟುಮಾಡುವಲ್ಲಿ ನಿದ್ರೆಗೇನೇ ಅಗ್ರಸ್ಥಾನವು ಸಲ್ಲಬೇಕು. ನಿದ್ರಾ ರಾಜ್ಯದಲ್ಲಿ ಆಳು- ಅರಸು, ಬಡವ-ಬಲ್ಲಿದ, ಆಸ್ತಿಕ-ನಾಸ್ತಿಕ, ಕರಿಯ-ಬಿಳಿಯ, ಉದ್ದ-ಗಿಡ್ಡ, ತೋರ-ಸಪುರ ಎಂಬ ಯಾವ ಭೇದಗಳೂ ಇಲ್ಲ. ಸೋವಿಯೆಟ್ ರಾಜ್ಯ ಪದ್ಧತಿಯ

ಮೂಲ ತತ್ವವು ನಿದ್ರೆಯಿಂದಲೇ ಪ್ರೇರಿತವಾಗಿರಲಿಕ್ಕಿಲ್ಲವಷ್ಟೆ? ವಿಚಾರಿಸಿದಲ್ಲಿ ಜನನ ಮರಣಗಳೆರಡೂ ನಿದ್ರಾಂತರ್ಗತವಾಗಿವೆಯೆನ್ನಬೇಕು. ಇಂಥ ನಿದ್ರೆಯ ವಿಷಯ ಇನ್ನೂ ಸ್ವಲ್ಪ ಹೆಚ್ಚು ಪರ್ಯಾಲೋಚಿಸಲು ಮನಸ್ಸು ತವಕಗೊಂಡಿತು.

ಪ್ರಾಣಿಗಳಿಗೆಲ್ಲಾ ಸುಖ ಸಾಮ್ರಾಜ್ಯವನ್ನು ಒದಗಿಸುವ ನಿದ್ರೆಯು ಆರೋಗ್ಯ ವೃಷ್ಟಿಯಿಂದಲೂ ಮಹತ್ವವುಳ್ಳದಾಗಿದೆ. ನಿದ್ರಾ–ವಿಶ್ರಾಂತಿಗಳೇ ದುಡಿದ ದೇಹದ ಬೆಳವಣಿಗೆಗೂ ಪೋಷಣೆಗೂ ಸಹಾಯಕವಾಗಿವೆ ಸುಖನಿದ್ರೆಯನ್ನು ಮಾಡಿ ಎಚ್ಚೆತ್ತವನ ಕಾಂತಿ ಉತ್ಸಾಹ ಆನಂದಗಳೇ ಇದಕ್ಕೆ ಸಾಕ್ಷಿಗಳಾಗಿವೆ. ನಿದ್ರೆಗೂ ನಿಶೆಗೂ ನಿತ್ಯ ಬಾಂಧವ್ಯ, ರಾತ್ರಿಯ ಪ್ರಶಾಂತ ವಾತಾವರಣವೇ ನಿದ್ರೆಗೆ ತಕ್ಕ ಸನ್ನಿವೇಶ, ಈ ಮಾತು ಎಂದೆಂದಿಗೂ ಸತ್ಯವಾಗಿದೆ. ಆರೋಗ್ಯ ಸೂತ್ರಕಾರರು ಸಾಮಾನ್ಯರ ಅನುಸರಣೆಗಾಗಿ ಈ ಕುರಿತು ಬೇಕಾದಷ್ಟು–ಬೇಡವಾದಷ್ಟು ಸಹ– ನಿಯಮಾವಳಿಯನ್ನು ಪ್ರಕಟಿಸುತ್ತಿರುವರು. ಅವನ್ನು ಓದಿಕೊಳ್ಳಲು ಕುತೂಹಲಿಗಳಾದವರು ಹುಡುಕಿ ಓದಿಕೊಳ್ಳಬಹುದು.

ನಿದ್ರೆಯು ಅವಸ್ಥಾತ್ರಯಗಳಲ್ಲೊಂದು ಸ್ಥಾನವನ್ನು ಹೊಂದಿದೆ. ಜಾಗ್ರತರಾಗಿದ್ದಾಗ ಸುಖವನ್ನು ಹೊಂದಬಹುದು. ಕೆಲವರಿಗೆ ಸ್ವಪ್ನ ಸುಖವೇ ಬೇಕಾದುದು. ನಿದ್ರಾ ಸುಖದ ವಿಚಾರ ಜಾಗ್ರತ್ ಸ್ವಪ್ನಗಳಂತಲ್ಲ. ನಿದ್ರಾ ಮೀಮಾಂಸೆ ಬರೆದು ತಿಳಿಯುವಂತಲ್ಲ. ಅದರ ಸುಖ ಅನುಭವೈಕವೇದ್ಯವೆಂದಷ್ಟೆ ಹೇಳಿದರೆ ಸಾಕು. ನಿದ್ರೆಯಲ್ಲಾದರೋ ಎಷ್ಟೋ ವಿಧಗಳಿವೆ. ಕೆಲವನ್ನು ಹೀಗೆ ಉದಾಹರಿಸಬಹುದು.

೧ ಯೋಗ ನಿದ್ರೆ: ತಪೋನಿಧಿಗಳಾದ ಯೋಗಿವರ್ಯರ ಹಕ್ಕಿನದಾದ ಈ ಯೋಗ ನಿದ್ರೆಯ ವಿಷಯ ಮಹಾಗ್ರಂಥಕಾರರು ಪುರಾಣಗಳಲ್ಲಿ ವರ್ಣಿಸಿದುದನ್ನೇ ಕೇಳಿ ತಿಳಿಯಬೇಕಲ್ಲದೆ ಬೇರೆ ಗತಿ ಇಲ್ಲ. ಯೋಗ ನಿದ್ರೆಯಿಂದೆದ್ದ ಆದಿನಾರಾಯಣನ ಲೀಲೆಗಳೇ ನಮ್ಮ ಶ್ರುತಿ ಸ್ಮೃತಿ ಇತಿಹಾಸಗಳಲ್ಲೆಲ್ಲಾ ತುಂಬಿರುವಾಗ ಇದರ ಮಹಿಮೆ ಊಹಾತೀತವೆಂದರೂ ಸಲುವುದು. ಲೇಖಕ ಮಹಾಶಯರೊಬ್ಬರು ಬೆಕ್ಕಿನ ನಿದ್ರೆಯನ್ನು ಯೋಗ ನಿದ್ರೆಗೆ ಸಮತುಲ್ಯವೆಂದು ಸೂಚಿಸಿರುತ್ತಾರಾದುದರಿಂದ ಸಾಮಾನ್ಯರಿಗೆಲ್ಲಾ ಅದೇ ಒಂದು ಸುಲಭ ದೃಷ್ಟಾಂತವಾಗಿರಲಿ. ಅಸಾಮಾನ್ಯರು

ಸಾಧಕರಾಗಿ ಯೋಗ ನಿದ್ರೆಯನ್ನು ಅಭ್ಯಾಸಿಸಿದರೆ ತಮಗೆ ತಾವೇ ಅವರ ವಿಚಾರ ತಿಳಿಯಬಹುದೆನ್ನಿಸುತ್ತದೆ.

೨ ಗೊರಕೆಯ ನಿದ್ದೆ: ನಿದ್ರೆಯಲ್ಲೂ ತಮ್ಮ ಉಸಿರಾಟದ ಪ್ರಚಂಡ ಪ್ರದರ್ಶನವನ್ನು ಮಾಡಿ, ಗೊರಕೆಯ ಶಬ್ದದಿಂದ ಮನೆಮಂದಿಯನ್ನೆಲ್ಲಾ ಎಚ್ಚರದಿಂದಿರಿಸುವವರೂ ಕೆಲವರಿದ್ದಾರೆ. ನಿದ್ರಿಸುವವರಿಗೆ ಈ ಗೊರಕೆ ಕೇಳಿ ಬರುವುದಿಲ್ಲ. ಆದರೆ, ಹಾಗೆ ನಿದ್ರೆ ಮಾಡದವರಿಗೆಲ್ಲಾ ಇದರ ಕುರುಹುಗಳ ಅರಿವಿದೆ. ಪಾಶ್ಚಾತ್ಯ ದೇಶಗಳಲ್ಲಿ ಕ್ಷಣಕ್ಕೊಂದೆಂಬಂತೆ ಆಗುತ್ತಿರುವ ದಾಂಪತ್ಯ ವಿಚ್ಛೇದಗಳನ್ನು ಹೆಚ್ಚಿಸುವರೆ ನಿದ್ರೆಯ ಗೊರಕೆಯೂ ಒಂದು ಕಾರಣವಾಗಿದೆ. ಆದುದರಿಂದ ಅಲ್ಲಿನ ನ್ಯಾಯಸ್ಥಾನಗಳಲ್ಲಿ ಇದರ ಗುಣಹಾನಿಗಳ ಕುರಿತು ತುಂಬಾ ಆಧಾರಗಳಿರಬೇಕು. ಭಾರತೀಯರು ಮಾತ್ರ ಗೊರಕೆ ನಿದ್ದೆಯೆಂದರೆ ಸುಖವೆಂದೇ ತಿಳಿದರೇನಡ್ಡಿಯಿಲ್ಲ.

೩ ಕಳ್ಳ ನಿದ್ದೆ: ಬೇರೆಯವರಿಗೆ ನಿದ್ದೆ ಬಂದವರಂತೆ ಕಾಣಿಸಿ ತಮ್ಮ ಸಂಕಲ್ಪವನ್ನೀಡೇರಿಸಲು ಸಮಯವನ್ನು ಹೊಂಚು ಹಾಕುತ್ತಿರುವ ಸ್ವಭಾವದ ಜನರಿಗೆ ಈ ಕಳ್ಳ ನಿದ್ದೆಯೇ ಜೀವನಾಧಾರವಾಗಿದೆ. ಈ ಬಗ್ಗೆ ಹೆಚ್ಚಿನ ವಿವರಣೆ ಗೊತ್ತಿದ್ದವರಿಗೆ ಬೇಡ, ಗೊತ್ತಿಲ್ಲದವರಿಗೆ ಅನವಶ್ಯಕ.

೪ ಸುಖ ನಿದ್ದೆ: ಇದು ಜೀವಿಗಳ ಸ್ವಾಸ್ಥ್ಯದ ಮುಖ್ಯ ಲಕ್ಷಣವಾಗಿದೆ. ದೇಹ ಮನಸ್ಸುಗಳಿಂದ ಚೆನ್ನಾಗಿ ದುಡಿದವರಿಗೆಲ್ಲಾ ಸುಲಭಸಾಧ್ಯವಾದ ಈ ನಿದ್ರೆಯೇ ಮಾನವರೆಲ್ಲರಿಗೂ ಪುನರಪಿ ಅಮಿತೋಲ್ಲಾಸವನ್ನು ಕರುಣಿಸುವಂಥಾದ್ದು. ಇದಕ್ಕಾಗಿ ಹಾತೊರೆಯುವವರೆಷ್ಟು? ಹೀಗೆ ನಿದ್ರಿಸಿ ಸುಖಪಡೆಯುವವರೆಷ್ಟು? ನಿದ್ರಾನಂದವನ್ನು ಹೊಂದುವ ಭ್ರಮೆಯಲ್ಲಿರುವವರು ಅದಕ್ಕಾಗಿ ಎಷ್ಟೋ ಪ್ರಯತ್ನಿಸುತ್ತಿರುವರು. ಧನಿಕರಲ್ಲಂತೂ ಕೆಲವರು ತಮಗೆ ನಿದ್ರೆ ಸರಿಯಾಗಿ ಬರುವಂತೆ ಮಾಡುವುದನ್ನೇ ತಮ್ಮ ವಿಲಾಸದ ಒಂದು ಅಂಗವೆಂದು ಭಾವಿಸುವವರಿದ್ದಾರೆ. ದ್ರಾವಕಗಳನ್ನು ಕುಡಿದು, ಗುಳಿಗೆಗಳನ್ನು ನುಂಗಿ ನಿದ್ರೆ ಬರಲೆಂದು ಹಾರೈಸುವವರು ಕೆಲವರು; ಗಾಯನ ನರ್ತನಗಳಿಂದ ಮನಸ್ಸು ಹರ್ಷಿತವಾಗಿ ನಿದ್ರೆಗೆಡೆಯಾಗಲೆಂದು ಕೆಲವರು; ಕಥಾ ಕಾವ್ಯಗಳನ್ನೋದಿ ಅಲ್ಲೇ ನಿದ್ರಾ

ಮಗ್ನರಾಗುವಂತಾಗಲೆಂದು ಬೇರೆ ಕೆಲವರು; ವ್ಯಾಯಾಮ ಸಾಧನೆಗಳಿಂದ ನಿದ್ರೆಗೆ ಅನುಕೂಲವಾಗಲೆಂದು ಮತ್ತೆ ಕೆಲವರು;-ಹೀಗೆ ವಿವಿಧ ಪ್ರಯತ್ನಗಳು ನಡೆಯುತ್ತಿಲ್ಲವೇ? ಆದರೆ, ಇವೆಲ್ಲ ಸಾಹಸ-ಪ್ರಯತ್ನಗಳು ಅನೇಕ ವೇಳೆ ನಿಷ್ಫಲವಾಗುವುದುಂಟು. ನಿದ್ರೆಯ ಸವಿಯನ್ನುಣ್ಣಲಿಕ್ಕೂ ತಕ್ಕದಾದ ಮನೋಧರ್ಮವಿರಬೇಕು. ಮೇಲೆ ಹೇಳಿದ–ಹೇಳದ–ವಿಧಾನಗಳೆಲ್ಲಾ ಬಲಾತ್ಕಾರದಿಂದ ನಿದ್ದೆಯನ್ನು ವಶಗೊಳಿಸಲು ಯತ್ನಿಸುವುದರಿಂದ ಅವು ಯಾವ ಕೆಲಸಕ್ಕೂ- ಫಲಕ್ಕೂ ಬಾರವು. ಜಗತ್ತಿನಲ್ಲಿ ಏಕಮೇವಾದ್ವಿತೀಯವಾಗಿ ಮೆರೆಯುವ ಹಿಮಾಲಯದ ಕಡೆಗೆ ನಿರಂತರ ಸಾಧನ– ಭಕ್ತಿಭಾವ-ಯೋಗ ನಿಷ್ಠೆಗಳನ್ನು ಇಟ್ಟುಕೊಂಡರೇನೇ ಆ ಪರ್ವತಾವಳಿಯನ್ನು ಏರಲು ಸಾಧ್ಯವೆಂದು ತಜ್ಞರ ಅಭಿಮತವಿದೆ. ಹಾಗೆಯೇ ನಿದ್ರಾಯಾಚಕನು ನಿದ್ರಾದೇವಿಯನ್ನು ಭಯಭಕ್ತಿಗಳಿಂದ ಗೌರವಿಸುವ ಮನೋಭಾವದವನಿರಬೇಕು, ಆಗ ಮಾತ್ರ ಅವನಿಗೆ ಜಯವು ಸಿದ್ಧ!

ನಿದ್ರೆಯ ವಿಷಯದಲ್ಲಿಯೂ- ಇತರ ವಿಷಯಗಳಂತೆ ಮಿತಿ ಇರಬೇಕು. ಮಿತವಾದ ನಿದ್ರೆಯು ದೇಹಕ್ಕೂ ಮನಸ್ಸಿಗೂ ಹಿತಾವಹವಾಗಿದೆ. ನಿದ್ರೆ ಮಾಡುವ ಉತ್ತಮ ಹೊತ್ತು ಯಾವುದೆಂಬುದರಲ್ಲಿ ಭಿನ್ನಾಭಿಪ್ರಾಯಗಳಿವೆ. ಅರ್ಧ ರಾತ್ರಿಯೊಳಗಿನ ನಿದ್ರೆ ಹೆಚ್ಚು ಅಗತ್ಯವೆಂದು ಕೆಲವರೂ, ಬೆಳಗಿನ ಜಾವದ ನಿದ್ದೆ ಮೇಲೆಂದು ಇನ್ನು ಕೆಲವರೂ ವಾದಿಸುವರು. ನಡು ರಾತ್ರಿಯ ಮೊದಲೇ ಪ್ರಾರಂಭವಾಗಿ ಬೆಳಗಿನ ಜಾವದವರೆಗೂ ಒಂದೇ ಸವನೆ ಹಬ್ಬಿದ ನಿದ್ರೆಯೇ ಸರ್ವೋತ್ಕೃಷ್ಟವೆಂದು ನನ್ನ ಎಣಿಕೆ.

ಒಟ್ಟಾರೆ ಜೀವನದ ಆದ್ಯಂತ ವಿಸ್ತೃತವೂ ಸುಖೈಕ ಕೇಂದ್ರವೂ ಆದ ನಿದ್ರಾದೇವಿಯನ್ನು 'ಜಗದ್ಧಾತ್ರಿ' ಎಂದು ಪೂಜಿಸಿದರೆ ತಪ್ಪೆ?-ಎಂದು ನಾನು ವಿವೇಚಿಸಿ ನಿರ್ಣಯಕ್ಕೆ ಬರುವಷ್ಟರಲ್ಲಿಯೇ ಮುಂಜಾವದ ತಂಗಾಳಿಯ ಸೊಂಪಿಗೆ ನನಗೆ ಮೆಲ್ಲಗೆ ಜೊಂಪು ಹತ್ತಿತ್ತು. ಅಲ್ಲೇ-ಬಸ್ಸ್ ಕೂಗುವನಕ ಒರಗಿ ಸುಖವಾಗಿ ನಿದ್ರಿಸಿದೆನು.

ಈ ನಿದ್ರಾ ದೇವಿಯ ಚರಿತೆಯಾಗಲೀ–ಪುರಾಣವಾಗಲೀ ಇದ್ದರೆ

ಅವನ್ನೊಮ್ಮೆಯಾದರೂ ಓದಿಕೊಳ್ಳಬೇಕೆಂದೂ, ಆ ಮೇರೆಗೆ ಸುಖ ಸಿಪ್ರಿ ಯೊದಗಿಸಬಹುದೆಂದೂ ನನ್ನ ಹಾರ್ದಿಕ ಆಕಾಂಕ್ಷೆ !

"ಯಾದೇವೀ ಸರ್ವಭೂತೇಸು ನಿದ್ರಾರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ"

ಮಾಂಗಲ್ಯ ಯೋಗ

ಎಚ್. ವಾಸುದೇವರಾವ್, **ಸುರತ್ಕಲ್ಲು**

೧. ಪೂರು ದಿನದಿಂದ ಅಂಚೆಮನೆಗೆ ಅಲೆಯುತಿದ್ದ ರಾಮಣ್ಣ ಮಾಸ್ತರರಿಗೆ ಅಂದು ಲಕೋಟೆಯೊಂದು ಸಿಕ್ಕಿತು. ಈ ಮೊದಲು ಬಂದ ಪತ್ರಗಳು ಅವರಲ್ಲಿ ನೋವು ಹುಟ್ಟಿಸಿವೆಯಲ್ಲದೆ, ಸಂತೋಷವನ್ನಿತ್ತಿಲ್ಲ. ಆದುದರಿಂದ ಅವರು ನಡುಗುವ ಕೈಗಳಿಂದ ಅದನ್ನು ಹಿಡಿದು, ಏನೋ ಯೋಚನೆಯಿಂದ ಮನೆಕಡೆಗೆ ಹೊರಟರು.

ಮಾಸ್ತರರ ಹಿರೇ ಮಗಳು ಸುಶೀಲೆ ಸ್ನಾನ ಮುಗಿಸಿದ ಒದ್ದೆ ಬಟ್ಟೆಯಲ್ಲೇ ತುಳಸಿಗೆ ನೀರೆರೆದು, ಸುತ್ತು ಬರುತ್ತಿದ್ದಳು. ತಂದೆಯ ಕೈಯಲ್ಲಿ ಒಂದು ಕಾಗದವನ್ನು ಕಂಡು ಅವಳ ಮನದಲ್ಲಿ ಸಂತಸದ ಭಾವ ಸುಳಿಯಿತು; ಅದರಿಂದ ಅವಳ ಹೆಜ್ಜೆ ನಿಧಾನವಾಯಿತು. ಆದರೆ, ತಂದೆಯ ಮೌನ, ಒಡೆಯದ ಲಕೋಟೆ, ಇವನ್ನೆಲ್ಲಾ ಕಂಡ ಆಕೆ ಬೇಗನೆ ತನ್ನ ಕರ್ತವ್ಯವನ್ನು ಮುಗಿಸಿ, ಒಳಗೆ ಹೋದಳು.

ಪಡಸಾಲೆಯ ನೆಲವನ್ನು ಒರಸುತ್ತಿದ್ದ ಸೀತಮ್ಮ ಜಗಲಿಯಲ್ಲಿ 'ಉಸ್ಸೆ'ಂದು ಕುಳಿತ ಪತಿಯನ್ನು ಕಂಡು ಹೊರಬಂದಳು. ಮಾಸ್ತರರ ಬಳಿ ಕಂಬಕ್ಕೊರಗಿ ನಿಂತು, ಕಿರಿದು ದನಿಯಲ್ಲಿ 'ಏನಂತೆ?' ಎಂದಳು. ಆಗ ಮಾಸ್ತರರು 'ಹ್ಞಾ ! ಪತ್ರ ಓದಿಲ್ಲ' ವೆನ್ನುತ್ತಾ, ಪಿಸುಗುಟ್ಟುತ್ತಾ, ಅದನ್ನು ಬಿಚ್ಚಿ ಓದಿದರು. ಅವರ ಕಣ್ಣುಗಳಿಂದ ಒಂದು ಹನಿ ಕಣ್ಣೀರು ಆ ಕಾಗದದ ಮೇಲೆ ಬಿತ್ತು. ಅದರ ಅರ್ಥ ಆಕೆಗೆ ತಿಳಿಯದೆ, ನೆಟ್ಟನೋಟದಿಂದ ಪತಿಯ ಕಡೆಗೆ ನೋಡಿದಳು. "ಬೇಸರು ಕಚ್ಚೆರಿದನು, ಸುಶೀಲಳ

ಭಾಗ್ಯದ ಬಾಗಿಲು ತೆರೆಯಿತು !" ಎಂದಾಗ ಸೀತಮ್ಮನಲ್ಲಿ ಸಂತೋಷ ಮೂಡಿತು. ದೇವರಿಗೆ ತುಪ್ಪದ ದೀಪ ಹಚ್ಚಿಸಿ, ಮಗಳಿಂದ ನಮಸ್ಕಾರ ಮಾಡಿಸಲು ಆಕೆ ಒಳಗೆ ನಡೆದಳು.

೨. ಜಗಲಿಯಲ್ಲಿ ಕುಳಿತ ರಾಮಣ್ಣ ಮಾಸ್ತರರ ಕಣ್ಣಿಗೆ ಒಳಗೆ ಕಟ್ಟಿಟ್ಟ ಪತ್ರಗಳ ಕಟ್ಟು ಕಾಣುತಿತ್ತು. ನಾಲ್ಕಾರು ವರ್ಷಗಳಿಂದ ಅವರು ತನ್ನ ಮಕ್ಕಳ ಮದುವೆಗೆ ಅದೆಷ್ಟೋ ಪ್ರಯತ್ನಿಸಿದ್ದರು. 'ಪ್ರಯತ್ನ ಒತ್ತಟ್ಟು ! ಫಲ ಒತ್ತಟ್ಟು !' ಇಪ್ಪತ್ತರ ಮೆಟ್ಟಲು ದಾಟಿದ ಸುಶೀಲ, ಹದಿನೆಂಟರಲ್ಲಿ ಕಾಲಿಟ್ಟಿದ ಕಮಲ, ಒಂದೆರಡು ತಿಂಗಳ ಹಿಂದೆ ಪ್ರಾಯಕ್ಕೆ ಬಂದ ವಿಮಲ, ಹೀಗೆ ಒಬ್ಬಳ ಹಿಂದೆ ಒಬ್ಬಳು ಬಳೆದು, ಅವರ ಮೂವರು ಮಕ್ಕಳು ಮದುವೆಗೆ ತಯಾರಾಗಿದ್ದರು. 'ಕನ್ಯಾ ಪಿತೃತ್ವಂ ಖಲು ನಾಮ ಕಷ್ಟಂ!' ಅವರಲ್ಲಿಗೆ ಸಾಮಾಜಿಕ ಸಂಪ್ರದಾಯದಂತೆ ವಧು ಪರೀಕ್ಷೆಗೆ ಕೆಲವರು ಬಂದಿದ್ದರು. ಅವರು ಬರೆದ ಆ ಪತ್ರಗಳು ಮಾಸ್ತರರ ನೆನಪಿಗೆ ಬಂದವು:

ಒಬ್ಬ ವರನು ಸುಶೀಲಳನ್ನು ಕಂಡು ಒಪ್ಪಿದ್ದನು. ಆದರೆ, ತನ್ನ ತಂದೆಯ ಅತ್ಯಾಸೆಯಿಂದಾಗಿ ಆಕೆಯ ಕೈ ಹಿಡಿಯಲಾರೆನೆಂದು ಕಳವಳ ಪಟ್ಟಿದ್ದನು. 'ಅಯ್ದು ಸಾವಿರ ರೂಪಾಯಿಗಳ ಬಂಗಾರಬೇಕೆ'ಂದು ಅವನ ತಂದೆಯೆಣಿಕೆಯಾಗಿತ್ತು !

ಇನ್ನೊಬ್ಬ ಮಹಾಶಯನು "ಎಂ. ಎ. ಪಾಸು ಮಾಡುವಷ್ಟು ತನಗೆ ಹಣವಿತ್ತರೆ ಅಡ್ಡಿಯಿಲ್ಲ"ವೆಂದು ಬರೆದಿದ್ದನು. ಮತ್ತೊಬ್ಬನು ಸ್ಥೂಲಕಾಯದವನೂ ಪ್ರಾಯ ನಲುವತ್ತಕ್ಕೆ ಸಮೀಪಿಸಿದವನೂ ಆಗಿದ್ದರೂ, 'ಸೀಚು' ಮೈಯವಳಾದ ಸುಶೀಲಳು ತನಗೆ ತಕ್ಕವಳಲ್ಲವೆಂದು ಸೂಚಿಸಿದ್ದನು.

'ಈ ಜೀವನವೇ ಸಾಕು!' ಎಂಬಷ್ಟು ವ್ಯಥೆಯುಂಟಾದ ಪತ್ರವೊಂದು ಮಾಸ್ತರರ ನೆನಪಿಗೆ ಎದ್ದು ಬಂದಿತು: "ನಿಮ್ಮ ಮಗಳು ನನ್ನನ್ನು ಮದುವೆಯಾಗಲು ಯೋಗ್ಯಳೇ ಅಲ್ಲ. ಆಕೆ ನನ್ನ ರೂಪಕ್ಕೆ, ವಿದ್ಯೆಗೆ ಸರಿಯಲ್ಲ. ನೀವು ಮಾಸ್ತರರಾಗಿದ್ದೂ, ನಿಮ್ಮ ಮಗಳಿಗೆ ಕನಿಷ್ಠ ಪಕ್ಷ 'ಮ್ಯಾಟ್ರಿಕ್' ತನಕವಾದರೂ ಏಕೆ ಓದಿಸಿಲ್ಲ? ಅದು ಹೋಗಲಿ, ನಾಜೂಕಾಗಿ ಸೀರೆಯುಡುವ, ಕಾಡಿಗೆ-ಬೊಟ್ಟು ಇಡುವ, ತಲೆ ಬಾಚುವ, ತುರುಬು ಕಟ್ಟುವ, ಹೂ ಮುಡಿಯುವ, ಕ್ರಮವನ್ನಾದರೂ ಆಕೆಗೆ ಕಲಿಸಿರಬೇಡವೇ ? ಸರಿಯಾಗಿ ಕಾಫಿಕೊಡುವ ರೀತಿಯನ್ನಾದರೂ ಆಕೆಗೆ ತಿಳಿವಿರ

ಬೇಡವೇ ? ಅದು ಹೆಣ್ಣಲ್ಲ! ಹೆಣ್ಣು ರೂಪದ ಬೊಂಬೆ! ನೀವೆಲ್ಲಾ ಸಂಸ್ಕೃತಿ ಹೀನರು!" ಎಂದೆಲ್ಲಾ ಬರೆದಿತ್ತು.

ಮಗುದೊಮ್ಮೆ ಬಂದವನೊಬ್ಬನು 'ಕಲಾ ಪ್ರಪಂಚ'ವನ್ನೇ ಆಕೆಯಲ್ಲಿ ಅರಸ ಬಂದಿದ್ದನು: "ನೃತ್ಯಬಲ್ಲವಳೇ ತನಗೆ ಜತೆಗಾತಿಯಾಗಬೇಕು. ಅಥವಾ ತಾನು ನೃತ್ಯ ಮಾಡುವಾಗ ಆಕೆ ಹಿನ್ನೆಲೆಯಲ್ಲಿ ಗಾಯಕಿಯಾಗಿದ್ದು, ತನ್ನಲ್ಲಿ ಕಲಾಸ್ಫೂರ್ತಿಯನ್ನು ಹುಟ್ಟಿಸಬಲ್ಲವಳಾಗಬೇಕೆ"ಂದು ಗೀಚಿದ್ದನು. ಅದೊಬ್ಬನು 'ಆಕೆ ಹಳೆಯ ಸಂಪ್ರದಾಯದವಳಾದುದರಿಂದ ಒಲ್ಲೆ'ನೆಂದು ಸೂಚಿಸಿದ್ದನು. ಮಂಗಳೂರ ಕಡೆಯವನೊಬ್ಬನು ಆಕೆಯ ಗುಣಗಳನ್ನೆಲ್ಲಾ ಹೊಗಳಿ, 'ನಸುಕಪ್ಪು ಬಣ್ಣದ ಪೆಸಿಯಿಂದ' ಒಪ್ಪಲಾರೆನೆಂದಿದ್ದನು.

ಮಾಸ್ತರರ ಇಡಿಯ ಜೀವಮಾನದಲ್ಲೇ ಪೂರೈಸಲಾಗದ ವರನ 'ಬೇಕು'ಗಳ ಪಟ್ಟಿಯೊಂದು ಬರೆದು ಬಂದಿತ್ತು: 'ತನಗೆ ಚಿಕ್ಕಾಸೂ ವರದಕ್ಷಿಣೆ ಬೇಡ. ತನ್ನ ತಂಗಿಯ ಮದುವೆ, ತಮ್ಮಂದಿರಿಬ್ಬರ ರಕ್ಷಣೆಯ ಭಾರವನ್ನು ಮಾಸ್ತರರು ವಹಿಸಬೇಕೆಂದು.' ಹೀಗೆಲ್ಲಾ ಬರೆದು ಬಂದ ಪತ್ರಗಳನ್ನು ನೆನೆಸುತ್ತಾ, ಕೈಯಲ್ಲಿದ್ದ ಕವರನ್ನು ಕಣ್ಣುಗಳಿಗೆ ಒತ್ತಿಕೊಂಡು ಮಾಸ್ತರರು ಎದ್ದು ಮನೆಯೊಳಗೆ ಹೋದರು.

೩. ಇತ್ತ ದೇವರ ಕೋಣೆಯಲ್ಲಿ ತಾಯಿಯ ಸಡಗರವನ್ನು ಕಂಡು ಸುಶೀಲಳು ತಾಯ ಬಳಿ ಬರುತ್ತಿದ್ದಳು. ಸೀತಮ್ಮ ಮಗಳನ್ನು ಕಣ್ತುಂಬ ಕಂಡು, ದೇವರಿಗೆ ನಮಸ್ಕರಿಸಲು ಹೇಳಿದಳು. ಆಕೆ ದೇವರಿಗೆ ನಮಸ್ಕರಿಸಿ, ತಾಯಿಯನ್ನು ಪ್ರಶ್ನಾರೂಪದಲ್ಲಿ ನೋಡಿದಳು. 'ದೇವರು ನಿನಗೆ ಕೈಗೂಡಿಸಿದನು. ನಿನ್ನ ಭಕ್ತಿಯ ಫಲ ಕೈಸೇರಿತು !' ಎಂದು ತಾಯಿ ಮಗಳಿಗೆ ಹೇಳುವಾಗ ಅವಳ ಕಣ್ಣುಗಳಲ್ಲಿ ಆನಂದ ಬಾಷ್ಪ ಹನಿಯುತ್ತಿತ್ತು. ತಂದೆಯ ಕೈಯಲ್ಲಿ ಅದೊಂದು ಪತ್ರವನ್ನು ಕಂಡಿದ್ದ ಆಕೆ, ತಾಯಿಯ ಮಾತಿನ ಅರ್ಥವನ್ನು ಊಹಿಸಿದಳು. ಹಾಗೆ ತಾಯಿಗೆ ನಮಸ್ಕರಿಸಿದಳು, ಒಳಗೆ ಬಂದ ತಂದೆಗೂ ಮಣಿದಳು. * * * ಹದಿನೈದು ದಿನಗಳ ಬಳಿಕ ಸುಂದರ-ಸುಶೀಲರ ಮದುವೆ ನಡೆಯಿತು. ಪತಿಯೊಂದಿಗೆ ಹೊರಟು ನಿಂತ ಸುಶೀಲ ತಂಗಿಯರನ್ನು ತನ್ನೊತ್ತಿಗೆ ಕರೆದು, 'ಮಾಂಗಲ್ಯ ಸೂತ್ರಯೋಗ ಬೇಗನೆ ಒದಗುವಂತೆ ತುಳಸಿಯ ಸೇವೆಮಾಡಿರೇ'ದು

ಹೇಳಿದಳು. ಅವರು 'ಹೂಂ'ಗುಟ್ಟಿದರು. ಆಕೆ ಪತಿಯೊಡನೆ ಸುಖ ಜೀವನಕ್ಕಾಗಿ ಸಾಗಿದಳು !

"ವರ ಬೇಕು"

[WANTED BRIDEGROOM]

ಕೆ. ಆರ್. ಉಡುಪ, ಮಡಿಕೇರಿ.

"ರೂಪವತಿಯೂ, ವಿದ್ಯಾವತಿಯೂ, ಸಂಗೀತಜ್ಞಳೂ ಆದ ವೈಶ್ಯ ಜಾತಿಯ ಯುವತಿಯೋರ್ವಳಿಗೆ ವಕೀಲ್ ಅಥವಾ ಡಾಕ್ಟರ್ ಕಸುಬಿನ ಸಜಾತೀಯ ಅನುರೂಪ ವರ ಬೇಕಾಗಿದೆ. ಸಾಗರ ಸನ್ನಿಧಿಯಲ್ಲಿ (Sea View) ಸುಂದರ ಸ್ವಂತ ಮಹಡಿಮನೆ ಯುವತಿಗಿದೆ ಪತ್ರ ವ್ಯವಹಾರ ರಹಸ್ಯವಾಗಿ."

ಬೆಳಗೆದ್ದು ಪೇಪರ್ ತೆರೆದು ಮೇಲಿನ ಜಾಹೀರಾತನ್ನು ನೋಡಿದೊಡನೆಯೇ ಹಾಸಿಗೆಯಿಂದ ಹಾರಿ ಬಿದ್ದೆನು. ವಕಾಲತು ಪರೀಕ್ಷೆ ಪಾಸಾಗಿ ತಿಂಗಳಾರಾದರೂ ಆರು ಕಾಸೂ ಸಂಪಾದನೆ ಈವರೆಗಾಗಿಲ್ಲ. ಬೀದಿ ಬದಿಯ ಮಾಳಿಗೆಯಲ್ಲಿ **M. R. Rao, Advocate, Mangalore**— ಎಂದು ಮೊದಲಾಗಿ ಇಂಗ್ಲಿಷ್, ಹಿಂದಿ, ಕನ್ನಡ- ಈ ಮೂರು ಭಾಷೆಯಲ್ಲೂ ಬೋರ್ಡು ಬರೆಸಿ ತೂಗಹಾಕಿ ಹೊಸಮಾಲೆ ಹಾಕಿಸಿದ್ದೆ. ಆದರೆ ಈ ವರೆಗೆ ಈ ಮೂರು ಭಾಷೆ ಬಲ್ಲವರಲ್ಲಿ ಒಬ್ಬನಿಗೂ ನನ್ನ ಹತ್ತಿರ ಬರುವ ಧೈರ್ಯ ಸಾಕಾಗದೆ– ಬೋರ್ಡಿನ ಬೆಲೆಯೂ ಈ ವರೆಗೆ ಕೊಡಲಾಗಲಿಲ್ಲ. ರಾತ್ರಿ ಇಡೀ ನಿದ್ದೆಬಾರದೆ, ಹಾಗೆ ಬೆಳಗಿನ ತಂಗಾಳಿಗೆ ಹಾಯಾಗಿ ಜೊಂಪು ಹಿಡಿದು ಬಿದ್ದಿದ್ದೆ. ಬಾಗಿಲೆಡೆಯಿಂದ ಒಳತುರುಕಿ ಬಿದ್ದ ಪೇಪರಿನ ಸದ್ದು ಕೇಳಿ ಎಚ್ಚೆತ್ತಾಗ, ಆ ಪೇಪರ್, ಮೇಲಿನ ಶುಭಸಂದೇಶ ತಂದಿದೆ. ಪರಮಾತ್ಮಾ—ನೀನೇ ದೊಡ್ಡವ ಎಂದು ಮನಸಾ ವಂದಿಸಿದೆ.

ರೂಪವತಿಯಾದ್ದರಿಂದ ಮನಮೋಹಕ ರಂಭೆಯಾಗಿರಬೇಕು!

ವಿದ್ಯಾವತಿ-ನಿಜವಾಗಿಯೂ ಈಕೆ ನನ್ನ ಮುಂದಿನ ಗಜಗಂಭೀರ ಕೇಸುಗಳ ವಿಚಾರದಲ್ಲಿ 'ಕಾರ್ಯೇಷು ಮಂತ್ರೀ' ಅವಶ್ಯ ಆದಾಳು. ಸಾಲದ್ದಕ್ಕೆ ಸಂಗೀತಜ್ಞಳು ಬೇಸರವಾಗಿ ಮನೆಸೇರಿದಾಗ-ಆ ಕೋಕಿಲಗಾನ! ಕರ್ಣರಸಾಯನ! ಯಾರು ತಾನೇ ಕೇಳಿ ಸ್ವರ್ಗಸೀಮೆಯ ಸುಖವನ್ನನುಭವಿಸದವರು? ಜಾತಿಯೂ ನಮ್ಮದೇ. ಅದರಲ್ಲೂ ಮನೆಮಾರು ತರುವವಳು! ಮನೆಮಾರಲು ಬರುವವಳಲ್ಲ. ಹಾಗಾಗಿ ತಂದೆಯವರ ಕಣ್ಣೂ ತಣ್ಣಗಾಗಬಹುದು. ಇನ್ನು ಬೇಕಾದವರು—'ವಕೀಲ್ ಅಥವಾ ಡಾಕ್ಟರ್.' ಮೊದಲಿರುವುದು ವಕೀಲರ ಹೆಸರು. ಅಂದರೆ ವಕೀಲರು ಸಿಗದಿದ್ದರೆ ತಾನೇ ಡಾಕ್ಟರರ ಪ್ರಶ್ನೆ ಏಳುವುದು. ಆಗಲಿ! ಈ ಸುಮುಕೋಮಲೆಯಾದರೂ ಈ **Noble legal profession**ನಿನ ಮಹತ್ವ ಕಂಡವಳಲ್ಲ. 'ಅನುರೂಪ'—ನನ್ನ ರೂಪಕ್ಕೇನು ಕಡಿಮೆಯಾಗಿದೆ? ಕನ್ನಡಿ ತೆಗೆದು ನೋಡಿದೆ. ಮೊದಲೇ ಅಂದವಾಗಿದ್ದ ಮುಖ ಈಗ ಈ ವರ್ತಮಾನದಿಂದ ಇನ್ನಷ್ಟು ಕಂಗೊಳಿಸುತ್ತಿದೆ.

ಸ್ವಂತ ಮನೆ- ಅದರಲ್ಲಿಯೂ ಮಹಡಿಮನೆ—ಯುವತಿಗಿದ್ದ ಕಾರಣ ಈ ಬಾಡಿಗೆಯ ತಾಪತ್ರಯವಿಲ್ಲ. ಹೋಟೇಲನ್ನದ ಕಷ್ಟವಿಲ್ಲ. ಅದು ಕೂಡಾ ಸಾಗರ ಸನ್ನಿಧಿಯಲ್ಲಿ. ಸತಿಯ ಸನ್ನಿಧಿಯಲ್ಲಿ, ಸಂಧ್ಯಾಕಾಲದ ಸಾಗರದಲೆಗಳನ್ನು ದಾಟಿ ಬರುವ ತಂಗಾಳಿಯನ್ನು ಸೇವಿಸುತ್ತ ಆ ಆನಂದವನ್ನನುಭವಿಸುವುದೆಂದರೆ—ಆಹ! ಇನ್ನೇನು ಬೇಕು? ಸ್ವರ್ಗಕ್ಕೆ ಮೂರೇ ಬೆರಳು ಬಾಕಿ. ಈ ರೀತಿಯ ಜೀವನದ ಉನ್ನತಮಟ್ಟವನ್ನೇರಿಕೊಂಡರೆ—ರೂಪವತಿ, ಧನವತಿ, 'ಗುಣವತಿ' ಸತಿಯ ಪ್ರಭಾವದಿಂದ 'ಪ್ರಾಕ್ಟೀಸೂ' ಕಾಲಬುಡಕ್ಕೆ ಬಾರದೆ ಹೋದೀತೇ?

ಎದ್ದವನೇ ಮುಖ ತೊಳೆದು ಅವಸರವಸರವಾಗಿ ಕಾಫಿ ಕುಡಿದು. ಕಾಗದ ತೆಗೆದು ನನ್ನ ಕುಲ, ಗೋತ್ರ, ರೂಪ, ಯೋಗ್ಯತೆ, ಸಾಮರ್ಥ್ಯ ಉತ್ಸಾಹ, ಉದಾರಬುದ್ಧಿ-ಇವೆಲ್ಲವೂ ಒಡೆದು ಕಾಣುವಂತೆ ಅತಿ ಸುಂದರವಾದ ಬರಹದಲ್ಲಿ ವಿಸ್ತಾರವಾಗಿ ಬರೆದೆ. ಹೊಸತಾಗಿ ತೆಗೆಸಿದ **'Style'**ನಲ್ಲಿರುವ ಫೋಟೋವೊಂದನ್ನು ಜೋಡಿಸಿದೆ. ಸುಂದರ ಸುನೀಲ ಕವರೊಂದನ್ನು ತಂದು ತುಂಬಿಸಿ 'ಶುಭಸ್ಯಶೀಘ್ರಂ' ಎಂದು ಸ್ವತಃ ಅಮೃತಹಸ್ತದಿಂದ **Post-Box** ನಲ್ಲಿ ಕುಲದೇವರನ್ನು ಸ್ಮರಿಸಿ ಹಾಕಿ ಬಂದೆ. ಉಳಿದೆ

ರಡು ದಿನಗಳಲ್ಲಂತು ನನ್ನ ಭಾವೀ ಜೀವನದ ಸುಂದರ ಗಾಳಿಗೋಪುರ ವನ್ನು ಕಟ್ಟುವುದೇ ಕೆಲಸವಾಯಿತು.

ಮೂರನೆಯ ದಿನ ಸಾಯಂಕಾಲ ಬಂತೇ ಬಂತು-ಉತ್ತರ. ಬಿಡಿಸಿ ನೋಡಿ ಬಹಳ ಸಂತೋಷವಾಯಿತು. ದೊಡ್ಡ ದೊಡ್ಡ ಅಕ್ಷರಗಳು! ವ್ಯಾಕರಣ ನಿಯಮಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡದೆ ಲಿಪಿ ಸುಧಾರಣೆ ಧಾರಾಳವಾಗಿ ಮಾಡಿದಂತಹ ಬರಹ! ರೇಖಾಶಾಸ್ತ್ರ, ಲಿಪಿಶಾಸ್ತ್ರ ಬಲ್ಲ ನನ್ನ ಗೆಳೆಯನೊಬ್ಬನ ಪ್ರಕಾರ-ವಿಶಾಲಹೃದಯಳೂ, ಪ್ರಗತಿಶೀಲಳೂ ಇರಬೇಕೆಂದು ತಿಳಿದು ಪರಮಾನಂದವಾಯಿತು. ಪತ್ರದ ಪ್ರಕಾರ ಮರು ದಿನ ಬೆಳಿಗ್ಗೆ ಎಂಟು ಗಂಟೆಗೆ ಗಾಂಧೀ ಪಾರ್ಕಿನ ಪಶ್ಚಿಮ ಬದಿಯ ನಾಲ್ಕ ನೆಯ ಬೆಂಚಿನಲ್ಲಿ ಪ್ರಥಮ ದರ್ಶನಕ್ಕಾಗಿ, ತಾನು ಎಳೇ ವಯಸ್ಸಿನ ಸಖಿ ಯೋರ್ವಳೊಡನೆ, ನೀಲ ಸೀರೆಯನ್ನುಟ್ಟು- ಪುಸ್ತಕ ಒಂದನ್ನು ಹಿಡ ಕೊಂಡು-ಬಂದು ಇರುವುದಾಗಿ ಬರೆಯಲಾಗಿತ್ತು.

ಎಂತಹ ಉದಾರ ಸೂಕ್ಷ್ಮಬುದ್ಧಿ! ತನ್ನ ಮನೆಗೆ ಬರಹೇಳಿದರೆ ಘನಸ್ತಿಕೆಯನ್ನು ತೋರಿಸಿದಂತಾಗಬಹುದು. ನನ್ನಲ್ಲಿಗೆ ಬಂದರೆ ತನ್ನ ಅಲ್ಪತನದ ಅರಿವಾಗಬಹುದು. ಆದ್ದರಿಂದ ಮಧ್ಯ ದಾರಿಯಲ್ಲಿ 'ಮೀಟ್' ಮಾಡುವ ಈ ಏರ್ಪಾಡು. ಒಬ್ಬಳೇ ಬಂದರೆ ಲಜ್ಜಾರಹಿತಳೆಂದಾಗ ಬಹುದೆಂದು-ಸಖೀಸಮೇತ. ಆ ಸಖಿ ಶಕುಂತಲೆಯೊಡನಿದ್ದ ಸಾಕ್ಷಾತ್ ಪ್ರಿಯಂವದೆಯೇ ಇರಬಹುದು. ಅಥವಾ ದಮಯಂತಿಯೊಡನಿದ್ದ -ಆ ಸಖಿ .... ಹೆಸರೇ ನೆನಪಾಗುವುದಿಲ್ಲ ಈ ಸಂದರ್ಭದಲ್ಲಿ ಅದರ ಲ್ಲಿಯೂ ಎಳೆ ವಯಸ್ಸಿನ ಸಖಿ. ನಮ್ಮ ಸಂದರ್ಭೋಚಿತ ಸರಸ ಸಂಲಾಪ ವಿರಸವಾಗಬಾರದೆಂದು ಎಳೆಯ ಬಾಲಕಿಯನ್ನು ಕರೆತರುವುದಿ ರಬೇಕು. ಸಖಿ ಇಳಿವಯಸ್ಸಿನವಳಾದರೆ-ಇವೆಲ್ಲ ಆಭಾಸವಾಗಬಹುದು. ಇನ್ನು, ಬರುವುದು ನೀಲ ಸೀರೆಯನ್ನುಟ್ಟುಕೊಂಡು. ಆಹ! ನೀಲಸಾಗರ ಸನ್ನಿಧಿಗೊಪ್ಪುವ ನೀಲ ಸೀರೆಯ ಸೀರೆ! ಅದರ ಮೇಲೆ-ಪುಸ್ತಕಹಸ್ತಳು- ಎಂತಹ ಶುಭ ಲಕ್ಷಣ! ನಿಜವಾಗಿಯೂ ಈ ತರದ ಮೇಧಾಶಕ್ತಿಯ ಯುವತಿಯು ಎಂದೂ ಎಲ್ಲಿಯೂ ಸಿಗಲಾರಳು.

ಒಂದೊಂದೇ ಸುಂದರವಾದ ಯೋಚನೆಗಳು; ಸುದೀರ್ಘವಾದ ಯೋಚನೆಗಳು-ಮನಸ್ಸಿನಲ್ಲಿ ಅಲೆಯಲೆಯಾಗಿ ಎದ್ದು ಮಾಯವಾಗಲಾ

ರಂಜಿಸಿದುವು. ಆಕೆಯ ಮನೋಹರವಾದ ಮಹರ್ಷಿಮನೆ! ನಯನಾಭಿರಾಮವಾದ ವದನಾರವಿಂದ! ಅಲ್ಲಿಂದಲೇ ಕಾಣುವ ಸಾಗರದ ನೀಲ ಜಲದ ಅಲೆಗಳು! ಮೇಲಿನ ನೀಲಾಕಾಶ! ಕೆಂಪಾಗಿ ಕಂಗೊಳಿಸುವ ಸೂರ್ಯಾಸ್ತಮಯ! ಮುಂದೆ ಚಂದ್ರ ತಾರೆಗಳು! ತಂಪಾದ ಗಾಳಿ! ಹತ್ತಿರವೇ ಚಂದಿರವದನೆ- ಎಣಿಸುತ್ತಾ ಎಣಿಸುತ್ತಾ ಸಾಗಿದ ಸಮಯ ತಿಳಿಯಲೇ ಇಲ್ಲ,

ಬೆಳಗ್ಗೆದ್ದೊಡನೆಯೇ ನನ್ನ ಕಾರ್ಯ ಜಯವಾಗಲಿ; ಮುಂದಿನ ಜೀವನ ಸುಖಮಯವಾಗಿ ಆ ಸುರಸುಂದರಿಯ ಸನ್ನಿಧಿಯಲ್ಲಿ ಸಾಗಲಿ-ಎಂದು, ಎಂದಿಗೂ ವಂದಿಸದ ದೇವರನ್ನೆಲ್ಲ ಅಂದು ವಂದಿಸಿದೆ. ಹೇಗಾದರೂ ಒಮ್ಮೆಗಾಕೆ ಕೈಸೇರಿದರೆ ಸಾಕೆಂದು ಕಾತರನಾದೆ. ಅಂತು ಸರ್ವಾಲಂಕಾರಭೂಷಿತನಾಗಿ ೭-೪೫ಕ್ಕೇನೇ ಗಾಂಧೀಪಾರ್ಕಿನ ಪಶ್ಚಿಮದ ನಾಲ್ಕನೆಯ ಬೆಂಚಿನತ್ತ ಕತ್ತುದ್ದ ಮಾಡಿಕೊಂಡು ಸಾಗಿದೆ. First impression-Best impression–ಆಗಬೇಕೆಂದು ಸಕಲ ಸಾಹಸವೆಸಗಿದ್ದೆ. ದೈವವಶಾತ್ ಮೊದಲಾರೂ ಬಂದು ಆ ಸೀಟಿನಲ್ಲಿ ಕೂತಿದ್ದಿಲ್ಲ. ಇದೀಗ ಪ್ರಪ್ರಥಮ ಶುಭ ಸೂಚನೆ. ಸೀಟನ್ನು ಕರವಸ್ತ್ರದಿಂದ ಒರಸಿ ನಿರ್ಮಲಮಾಡಿ ಕೂತುಕೊಂಡೆ. ಅಲ್ಲಿಯೇ ಮಲಗಿದ್ದ ನಾಯಿಯನ್ನು ಶಿವಪೂಜೆಯ ಮಧ್ಯದ ಕರಡೀಪ್ರವೇಶವಾಗಬಾರದೆಂದು ಓಡಿಸಿಬಿಟ್ಟೆ.

ಅತ್ತಿತ್ತ ನೋಡುತ್ತಿದ್ದಂತೆಯೇ ಹಿಂದಿನಿಂದ ಯಾರೋ ಬಂದು ಕಿಲಕಿಲನೆ ನಗಾಡಿದಂತಾಯಿತು. ತಿರುಗಿ ನೋಡುತ್ತೇನೆ! ಕಣ್ಣು ಕತ್ತಲು ಬರುವಂತಾಯಿತು ಗುಜ್ಜುಗೊರಲಿನ, ಉರಿಮುಸುಡಿನ, ದೊಡ್ಡ ಹೊಟ್ಟೆಯ, ದಂತ ವಕ್ರೆಯನ್ನು ಕಂಡೊಡನೆಯೇ ಉಸಿರುಕಟ್ಟಿಬರುವಂತಾಯಿತು. ಗಂಟೆ ನೋಡಿದೆ. ಸರಿ—ಎಂಟು! ಮೇಲೆ ಕೆಳಗೆ ನೋಡುತ್ತೇನೆ-ಅದೇ ನೀಲ ಸೀರೆ. ಕೈಯಲ್ಲಿ ಪುಸ್ತಕವಿದೆ. ಹೌದು—1942ರ ಹಳೆಯ ಟೆಲಿಫೋನ್ ಗೈಡ್. ಯಾರದೋ II hand shop ನಲ್ಲಿ ಪಡೆದಿರಬೇಕು. ಮೂಗಂತು ಉಬ್ಬಿ ಅರಳಿ, ಮೇಲಕ್ಕೆದ್ದು ನನ್ನನ್ನು ನುಂಗಲಿರುವುದೋ ಎಂಬಂತಿತ್ತು. ಮುಖದ ಮೇಲಿನ ಕಜ್ಜಿ ಕಲೆಗಳು ಸಾಮಾನ್ಯ ಒಂದುವರೆ ಇಂಚಿನ Powder Plaster(ಪೌಡರ್ ಬಳಿತ) ನಿಂದಲೂ ಹೂತುಹೋಗದೆ ತಲೆ ಎತ್ತುತಿದ್ದವು. ಲಿಪಿಶಾಸ್ತ್ರಜ್ಞನೆಂದಂತೆ ಹೃದಯ

ನೇನೂ ಘಾರಾಸ ಪಿರಾಳವಾಗಿಯೇ ಇತ್ತು. ವಯಸ್ಸು ಯಾವ ಕೆಲೆಂಡರ್ ಪ್ರಕಾರ ಲೆಕ್ಕ ಹಾಕಿದರೂ ೧೫ಕ್ಕೆ ಕಡಿಮೆಯಾಗಲು ಸಾಧ್ಯವೇ ಇಲ್ಲ. ಇನ್ನು ಒಡಸಿದ್ದ ಪ್ರಿಯಂವದೆಯಂತು ಜನ್ನು ಬಗ್ಗದ ಏಕಾಕ್ಷಿ ಯಾಗಿ ಷಷ್ಟ್ಯಬ್ದಶಾಂತಿಗೆ ತಯಾರಾದವಳಂತಿದ್ದಳು. ಅಂತು ೬೦ರ ವಳಿಗಿಂತ ಎಳೆಯವಳೇ ಇರಬೇಕು.

ಅಂತು ಪರಿಸ್ಥಿತಿ ನೋಡಿದೊಡನೆಯೇ ನನ್ನ ಕಣ್ಣು ಮೇಲಕೆಳಗಾ ಯಿತು. 'ನೀವೆ ತಾನೇ M. R. ರಾಯರು— ವಕೀಲರು. ನಾನೇ ತಮಗೆ ಕಾಗದ ಬರೆದವಳು. ಬಸ್ಸಿ ಹೋಗುವ ಹತ್ತಿರವೇ ಇದೇ ಮನೆ. ಅಲ್ಲೇ ಮಾತಾಡುವ,' ಎಂದು ರಾಗದಿಂದ ಮಾತಾಡತೊಡಗಿದಳು. ನಾನು ಮಂಕನಾಗಿ ಏನೂ ತೋಚದವನಂತೆ ಆಕೆಯ ಜನ್ನು ಹಿಡಿದೆ. ಸ್ವಲ್ಪ ಮುಂದೆ ಹೋದೊಡನೆಯೇ ಪ್ರಿಯಸಖಿ–ಪ್ರಿಯಂವದೆಯು ಮಾರ್ಗದ ಬದಿಯ ತಿಂಡಿಯ ಬುಟ್ಟಿಯತ್ತ ಕೈ ತೋರಿಸಿ ಕಣ್ಸನ್ನೆ ಮಾಡಿದಳು. ಸರಿ, ಇಬ್ಬರೂ ಸೇರಿ ಆ ಬಡಪಾಯಿಯ ಅರ್ಧ ಅಂಗಡಿಯನ್ನೇ ಮುಗಿಸಿಬಿಟ್ಟರು. ಎಲ್ಲ ಮುಗಿಸಿ ನನ್ನತ್ತ ನೋಡಿದಾಗ ಕಣ್ಣುಮುಚ್ಚಿ ಜೇಬಿನಲ್ಲಿ ಕೊನೆಯ ದಾಗಿ ಉಳಿದಿದ್ದ ಎರಡು ರೂಪಾಯಿ ನೋಟನ್ನು ಕೊಟ್ಟುಬಿಟ್ಟೆ.

ನಾವು ಹೋದ ರಸ್ತೆ ಕಿರಿದಾಗುತ್ತಾ ಓಣಿಯಾಗಲಾರಂಭಿಸಿತು. ಅತ್ತ ಇತ್ತ ವಾಸನೆ ಏಳಲಾರಂಭಿಸಿತು. ಮುಂದಿರುವ ಕಾಂತಾಮಣಿಯರನ್ನು ಅನುಸರಿಸುವ ನನ್ನನ್ನು ಕಿಟಿಕಿಗಳಲ್ಲಿ ಕಾದುಕೊಂಡಿದ್ದ ಹಲವು ಹೆಣ್ಣುಗಣ್ಣು ಗಳು 'ಮಿಣ-ಮಿಣನೆ' ನೋಡಿ ನಗಲಾರಂಭಿಸಿದುವು. ಅಂತು ಯಮನ ನ್ನನುಸರಿಸಿದ ಸಾವಿತ್ರಿಯಂತೇ-ಹಿಂಬಾಲಿಸಿದೆ. ಕೊಟ್ಟಕೊನೆಗೆ ಹೇಗೋ ನುಸುಳಿ ನಾಲ್ಕಾರು ಮೆಟ್ಟಿಲುಗಳುಳ್ಳ ಏಣಿಯೊಂದನ್ನು ಅವರಿಬ್ಬರು ಏರಲಾರಂಭಿಸಿದರು. ಮೂಗಿಗೆ ಕೈಹಿಡಕೊಂಡು, ಕಣ್ಣನ್ನರ್ಧ ಮುಚ್ಚಿ ಕೊಂಡು 'ನಡೆಮುಂದೆ–ನಡೆಮುಂದೆ'--ಎನ್ನುತ್ತಾ ಹತ್ತಿದೆ. ಏಣಿ 'ಲಟ ಲಟ' ಹೇಳುತ್ತಿತ್ತು; ಹಾಗೆಯೇ ಅವರೊಡನೆ ಸಾಗಿ ಕೋಣೆಯೊಂದನ್ನು ಹೊಕ್ಕು ನೋಡಿದೆ.

ಗೋಡೆಯ ತುದಿಯಲ್ಲಿರುವ ಏಕಮಾತ್ರ ಕಿರುಕಿಟಕಿಯಿಂದ ಕಣ್ಣ ಕಾಕರು ಬಿಟ್ಟು, ಗಾಳಿ ಬೆಳಕುಗಳೂ ಬಾರದಂತಿತ್ತು. ಗೋಡೆಯಲ್ಲಿ ಅರ್ಧ ಹರಿದ ಹಳೆಯ ಕಾಲದ ಶಾಂತಾ ಆಪ್ಟೆಯ ಚಿತ್ರ ಒಂದಿತ್ತು. ಕೆಳ

ಗಡೆ ಮತ್ತೊಂದು ಹೆಣ್ಚಿತ್ರ ತೂಗಹಾಕಿತ್ತು. ಅತ್ತ ಇತ್ತ ನೋಡಿದೆ. ಇದೇ ಸಾಗರ ಸನ್ನಿಧಿಯ ಸುಂದರ ಮಹಡೀ ಮನೆ! ಉದ್ದಾದ ಮಂಚದ ಹಾಸಿಗೆಯ ಮೇಲೆ ಹರಕು ಹೊಲಿಗೆಯ ಬಟ್ಟೆ ಹಾಸಿದೆ. ಆಸನವನ್ನಲಂಕರಿಸಲು ನನ್ನನ್ನಾಕೆ ರಾಗದಿಂದ ಕೇಳಿಕೊಂಡಳು. ನಾನಾಗ 'ನಿಮ್ಮ ಸನ್ನಿಧಿಯ ಸಾಗರವೆಲ್ಲಿದೆ?' ಎಂದೆ. ಜಾರಿದ ಸೆರಗನ್ನು ಸರಿಪಡಿಸಿಕೊಂಡು ಆಕೆ ಆ ಅರೆಕತ್ತಲು ಕೋಣೆಯಿಂದ ಮತ್ತೊಂದು ಕಿರುಕೋಣೆಗೆ ನನ್ನನ್ನೊಯ್ದಳು. ಮೂಗು ಕೊರೆಯುವ ಆ 'ಸುಗಂಧಾಮೋದ'ದಿಂದ ಅದು ಆ ಸುರಸುಂದರಿಯರ ಸ್ನಾನಾಗಾರವಿರಬೇಕೆಂದೂಹಿಸಿದೆ. ಗೋಡೆಯ ಡೆಯ ಬಿರುಕಿನಿಂದ 'ನೋಡಿರಲ್ಲಿ ದೂರದಲ್ಲಿ'-ಎಂದು ಕೈನೀಡಿ ತೋರಿಸಿದಳು ಆ ನೀರೆ, ಸೀರೆಯನ್ನು ಸರಿಮಾಡುತ್ತ. ನೋಡಿದಾಗ ದೂರದಲ್ಲಿ-ಅಂಗೈಯಗಲ ಏನೋ ಒಂದು ನೀಲವಸ್ತು ತೋರಿದಂತಾಯಿತು. ಈ ಕಮನೀಯ ಕಾಮಿನಿಯ ನನ್ನ ಕಲ್ಪನೆಯೂ ಆ ರೀತಿಯದೇ—ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡೆ.

ಅಷ್ಟರಲ್ಲೇ ಹತ್ತಿರ ಬರಲಾರಂಭಿಸಿದ ಆ ಕಾಮನರಗಿಣಿಯನ್ನು ಬಲವಾಗಿ ನೂಕಿ ಬಿಟ್ಟು ಒಂದೇ ಸವನೆ ಮೆಟ್ಟಲು ಹಾರಿ, ಓಡಲಾರಂಭಿದವನು ನನ್ನ ಕೋಣೆಯ ಮಂಚದ ಮೇಲೆ ಬಂದು ಬಿದ್ದವನೇ ಮರುಶ್ವಾಸಬಿಟ್ಟು ಹಿಂತಿರುಗಿ ನೋಡಿದೆ.

ಜೇಬಿಗೆ ಕೈಹಾಕಿ ನೋಡಿದೆ. ಇದ್ದ ಎರಡು ರೂಪಾಯಿ ಕಳೆದು ಹೋಯಿತು. 'ವರಬೇಕು' ಜಾಹೀರಾತಿನ ತುಂಡು ಮುದುಡಿ ಹೋಗಿದೆ. ಬಿಡಿಸಿನೋಡಿ-'ವೈಶ್ಯಜಾತಿಯ ಯುವತಿ' ಎಂಬುದಾಗಿ 'ವೇಶ್ಯಾ' ಶಬ್ದದ ಬದಲಾಗಿ ಮುದ್ರಣ ದೋಷದಿಂದಾದುದೇ ಎಂದು ಪರಾಂಬರಿಸಿದೆ.

ಅಥವಾ 'ವೇಶ್ಯಾ-ವೈಶ್ಯ'—ಶಬ್ದ ಹಾಗೂ ಅರ್ಥದಲ್ಲಿ ಸ್ವಲ್ಪ ಮಾತ್ರ ವ್ಯತ್ಯಾಸ ತಾನೇ- ಎಂದು ಯೋಚಿಸಿಕೊಂಡು ದೇವರಿಗೆ ಪಾರುಮಾಡಿದಕ್ಕೆ ಧನ್ಯವಾದವನ್ನರ್ಪಿಸಿದೆ.

ಪರಿವರ್ತನೆ

ಟಿ. ಚಂದ್ರರಾಜ ಶೆಟ್ಟಿ, ಸಿದ್ಧಕಟ್ಟೆ.

(ಬೆಳಿಗ್ಗೆ ಬೇಗನೆ ಏಳುವುದು ನನ್ನ ದಿನಚರಿಗಳಲ್ಲಿ ಮೊದಲನೆಯದಾದರೆ, ಎದ್ದೊಡನೆ ಮೇಜಿಯ ಮೇಲಿರುವ ಕಡ್ಡಿ ಪೆಟ್ಟಿಗೆಯನ್ನೊರೆದು ಸಿಗರೇಟನ್ನು ಹಚ್ಚಿ ಸೇದುವುದು ಎರಡನೆಯದ್ದು.) ಲೋಕದಲ್ಲಿ ಕೆಲವರು ಜೀವಿಸುವುದಕ್ಕಾಗಿ ತಿನ್ನುವವರಿದ್ದರೆ, ಹಲವರು ತಿನ್ನುವುದಕ್ಕಾಗಿ ಜೀವಿಸುತ್ತಿದ್ದಾರಂತೆ. ನಾನಾವ ಸಾಲಿಗೆ ಸೇರಿದವನೆಂಬುದು ನನಗರಿಯದಿದ್ದರೂ, ನಾನು ಚಾ ಕುಡಿಯುವುದಕ್ಕಾಗಿಯೇ ಬೇಗನೆ ಹಾಸಿಗೆಯಿಂದೇಳುತ್ತಿದ್ದೇನೆ ಎಂಬ ಮಾತು ಮಾತ್ರ ಸತ್ಯ.

ನಾನು ದಿನಕ್ಕೆರಡೇ ಹೊತ್ತು ಊಟಮಾಡುವುದಾದರೂ, ಕಡಿಮೆಯೆಂದರೆ ಹತ್ತಾರು ಸಲವಾದರೂ ಚಾ ಕುಡಿಯಲೇ ಬೇಕು. ಇತರರಂತೆ ನಾನು ಹಲವು ತರದ ದುರಭ್ಯಾಸಗಳಿಗೆ ಬಲಿಬೀಳದಿದ್ದರೂ, ದಿನಕ್ಕೆ ಹತ್ತು ಪೆಕೇಟು ಸಿಗರೇಟುಗಳನ್ನಾದರೂ ಸುಡದಿದ್ದರೆ ನನ್ನ ಮನಸ್ಸು ನೆಮ್ಮದಿಯಾಗಿರಲಾರದು. ಕಷ್ಟ ಪಟ್ಟು ಬೆವರು ಸುರಿಸಿ ದಿನವಿಡೀ ಗೇಯುವ ಪ್ರಮೇಯವಿಲ್ಲದೆ, ಹಿರಿಯರು ಗಳಿಸಿಟ್ಟ ಆಸ್ತಿಯು ಸಾಕಷ್ಟಿರುವಾಗ, ಸುಖಪಡದಿರುವವನು ಮಾನವನೇನು? ಐಶ್ವರ್ಯವಂತನು ಪುಣ್ಯವಂತನು; ಅವನೇ ಭಾಗ್ಯವಂತನು. ಭಾಗ್ಯಹೀನನಾದವನು ಬಡವನಾಗಿಯೋ, ನಿರ್ಗತಿಕನಾದ ಭಿಕ್ಷುಕನಾಗಿಯೋ ಹುಟ್ಟುತ್ತಾನೆಂಬುದೇ ನನ್ನಭಿಮತ.

ಮೈ ಮುರಿದು ಕೆಲಸ ಮಾಡಲು ಬಗ್ಗದೆ ಸೋಮಾರಿಗಳಾಗಿ ಬೇಡಿ ಜೀವಿಸುವ ಭಿಕ್ಷುಕರನ್ನು ಕಂಡರೆ ನನಗಾಗದು. ಅವರು ನನ್ನ ಮನೆಯತ್ತ ಸುಳಿಯದಂತೆ ಗೇಟಿನ ಬಾಗಿಲಿನಲ್ಲಿ ಹುಲಿಯಂತಿರುವ ನಾಯಿಯೊಂದನ್ನು ಕಟ್ಟಿ ಹಾಕಿಸಿದ್ದೆ. ಬೇಡುತ್ತಿರುವ ಭಿಕ್ಷುಕರ ಸಮಾಜವಿರುವುದು ಸುಧಾರಿತ ಸ್ವತಂತ್ರ ಭಾರತಕ್ಕೊಂದು ಅಳಿಸಲಾರದ ಕಳಂಕವೆಂಬ ಅಭಿಪ್ರಾಯವು ನನ್ನಲ್ಲಿ ಬೇರೂರಿತ್ತು.

ಎಂದಿನಂತೆ ನಿನ್ನೆಯೂ ಬಲುಬೇಗ ಎದ್ದಿದ್ದೆ. ಸಿಗರೇಟು ಸೇದಿ

ಮುಖ ತೊಳೆದು, ಸಿಗರೇಟೊಂದನ್ನು ಸೇದುತ್ತಾ ಕಾಫಿ ಹೊಟೆಲಿನತ್ತ ಧಾವಿಸಿದೆ. ಮಾರ್ಗದ ಬದಿಯಲ್ಲಿದ್ದ ಮನೆಯೊಂದರಿಂದ ವಿದ್ಯಾರ್ಥಿಯೊಬ್ಬನು ಗಟ್ಟಿಯಾಗಿ ಉರುಹಾಕುತ್ತಿದ್ದ ಪದ್ಯದ ಚರಣವೊಂದು ನನ್ನ ಕರ್ಣ ಪಟಲವನ್ನು ಬಡಿದು ನನ್ನ ವಿಚಾರ ಸರಣಿಯನ್ನು ಹೊಡೆದೆಬ್ಬಿಸಿತು:

ಲಕ್ಷಗಳ ಚೆಲ್ಲುವರು ನಾಯಿಗಳಿಗಾಗಿ ।
ಭಿಕ್ಷುಕರಿಗೀಯಲಾರರು ಮುಷ್ಟಿ ರಾಗಿ ॥
ಹದಿನಾರಿಯುಬ್ಬವಿಹುದಕ್ಷಗಳ ಲಾಯ ।
ಕೂಳಿಲ್ಲವವರಿಗಿಲ್ಲವವರ ಸಹಾಯ ॥

ಹುಡುಗನು ಹಾಡುತ್ತಿರುವಾಗ ನನ್ನ ವೇಗವನ್ನು ನಿಧಾನಿಸಿ, ಅದರ ಚರಣವೊಂದನ್ನು ಸಂಪೂರ್ಣವಾಗಿ ಆಲಿಸಿದೆ. ಈ ಪದ್ಯವನ್ನು ನನಗಾಗಿ ಯಾರಾದರೂ ರಚಿಸಿ ಹಾಡಿರಬಹುದೇ? ಎಂಬುದೇ ಮೊದಲನೆಯದಾಗಿ ನನಗೆ ಹೊಳೆದ ವಿಚಾರ. ಸ್ವಲ್ಪ ನಿಧಾನಿಸಿ ಕೇಳುತ್ತ ಹೋದಂತೆ ನನ್ನನ್ನು ಗೇಲಿಮಾಡಲು ಕಟ್ಟಿದ ಕವನವಲ್ಲೆಂದು ತಿಳಿಯಿತು. 'ರವಿ ಕಾಣದುದನ್ನು ಕವಿ ಕಾಣುವ'ನೆಂಬ ಮಾತು ಸುಳ್ಳಲ್ಲ. ಐಶ್ವರ್ಯವಂತರ ದುಂದು ವ್ಯಯವನ್ನು ಕಂಡು ಹೇಸಿದ ಕವಿಯೊಬ್ಬನ ಅತಿಶಯೋಕ್ತಿ ಇದಾಗಿರಬೇಕೆಂದು ವಿಚಾರಿಸುತ್ತ ಮುನ್ನಡೆದಂತೆ 'ತಾಜಮಹಲು' ಸಿಕ್ಕಿತು. ಅಲ್ಲಿ ಕುರ್ಚಿಯೊಂದರಲ್ಲಿ ಕೂತುಕೊಂಡು ಚಾ ಕುಡಿಯುತ್ತಿರುವಾಗಲೂ 'ಲಕ್ಷಗಳ ಚೆಲ್ಲುವರು ನಾಯಿಗಳಿಗಾಗಿ' ಎಂಬ ಪಲ್ಲವಿಯು ನನ್ನ ಕರ್ಣಗಳಲ್ಲಿ ಪ್ರತಿಧ್ವನಿಯಾಗುತ್ತಿರುವಂತೆ ಭಾಸವಾಗುತ್ತಿತ್ತು. ಚಾ ಕುಡಿದು ಹೊರಗೆ ಬಂದು ನನ್ನ ಜೇಬಿನಿಂದ ಹಣವನ್ನು ತೆಗೆದು ಎಣಿಸುತ್ತಿರುವಾಗ, ಮೇಜಿನ ಬಳಿಯಲ್ಲಿ ಅರೆ ಬತ್ತಲೆಯಾದ ಹುಡುಗನೊಬ್ಬನು ಹೊಟೆಲಿನ ಮೆನೇಜರನೊಡನೆ ಇಡ್ಲಿಗಾಗಿ ಬೇಡುತ್ತಿದ್ದನು

ಹುಟ್ಟಿದಂದಿನಿಂದ ಎಣ್ಣೆಗಾಣದ ತಲೆಕೂದಲಿನ ಮೇಲೆ ಮುಚ್ಚಿಕೊಂಡಿದ್ದ ಕೆಂಪಾದ ಧೂಳಿನಿಂದಾಗಿ ಅವನ ಕೂದಲು ನಸುಕೆಂಪು ಬಣ್ಣವನ್ನು ತಾಳಿತ್ತು. ಉಟ್ಟ ಚಿಂದಿ ಲಂಗೋಟಿಯು ಅವನ ಮೈಮೇಲಿನ ಸರ್ವಸ್ವವಾಗಿತ್ತು. ಹೊಟೆಲಿನೊಡೆಯನು ಕೈಯಲ್ಲಿದ್ದ ಬೆತ್ತವನ್ನು ತೋರಿಸುತ್ತ, ಹುಡುಗನನ್ನು ದೂರಹೋಗುವಂತೆ ಗದರಿಸುತ್ತಿದ್ದನು.

ಹುಡುಗನು ಕೂಡಲೇ ಒಂದಾಣೆಯ ಬಿಲ್ಲೆಯೊಂದನ್ನು ಮೇಜಿನ ಮೇಲಿಟ್ಟು ಒಂದು ಇಡ್ಲಿಯನ್ನು ಕೊಡಬೇಕಾಗಿ ಪುನಃ ಬೇಡಿಕೊಂಡನು.

ಹಣವನ್ನು ಕಂಡೊಡನೆ ಯಜಮಾನನ ಮುಖವು ಅರಳಿತು. ಅವನು ಮಾಣಿಯನ್ನು ಕರೆದು, ಹುಡುಗನಿಗೆ ಒಂದು ಇಡ್ಲಿಯನ್ನು ಕೊಡುವಂತೆ ಆಜ್ಞಾಪಿಸಿದನು. ಮಾಣಿಯು ಕೊಟ್ಟ ಇಡ್ಲಿಯನ್ನು ಹಿಡಿದುಕೊಂಡು ಸಂತೋಷದಿಂದ ಕುಣಿಯುತ್ತ ಹುಡುಗನು ಮಾರ್ಗದ ಬದಿಯಲ್ಲಿ ಒರಗಿಕೊಂಡಿದ್ದ ತನ್ನ ತಂದೆಯ ಬಳಿಗೆ ಓಡಿದನು.

ಅವನ ತಂದೆಯೊಬ್ಬ ಕುರುಡ ಭಿಕ್ಷುಕನಾಗಿದ್ದನು. ಅವನು ದಾರಿಯ ಬದಿಯಲ್ಲಿ ಒರಗಿಕೊಂಡು, ತನ್ನ ನಿಸ್ಸಹಾಯಕತೆಯನ್ನು ದಾರಿಗರಿಗೆ ಪ್ರದರ್ಶಿಸುತ್ತ, ದಾರಿಗರಿಗೆ ಕರುಣೆಯು ಹುಟ್ಟುವಂತೆ ತನ್ನ ಹೊಟ್ಟೆಯ ಮೇಲೆ ಬಡಿದುಕೊಳ್ಳುತ್ತ ವಿಕಾರವಾಗಿ ಕಿರಿಚಿಕೊಳ್ಳುತ್ತಿದ್ದನು.

ನಾನು ಹೊಟೆಲಿನ ಹೊರಗೆ ನಿಂತುಕೊಂಡು ಸಿಗರೇಟನ್ನು ಸೇದುತ್ತಾ ಹುಡುಗನು ಓಡಿ ಹೋದ ಕಡೆಗೆ ದೃಷ್ಟಿಯನ್ನು ಹೊರಳಿಸಿದೆನು. ದಾರಿಯಲ್ಲಿ ಬರುವಾಗ ನನ್ನ ಕಿವಿಯ ಮೇಲೆ ಬಿದ್ದ ಪದ್ಯವು ನನ್ನಲ್ಲಿ ಅಪೂರ್ವವಾದೊಂದು ಮಾರ್ಪಾಟನ್ನು ನನಗರಿವಿಲ್ಲವಂತೆಯೇ ಮಾಡಿದ ಹಾಗಿತ್ತು.

ಇಡ್ಲಿಯನ್ನು ಪಡಕೊಂಡ ಹುಡುಗನು ತನ್ನ ತಂದೆಯ ಬಳಿ ಹೋಗಿ, ಮೊಣಕಾಲೂರಿ ಕೂತುಕೊಂಡು ಅದನ್ನು ಎರಡು ತುಂಡುಗಳನ್ನಾಗಿ ಮಾಡಿ, ಅದರಲ್ಲಿ ಒಂದು ತುಂಡನ್ನು ತನ್ನ ತಂದೆಯ ಬಾಯಿಗಿಟ್ಟು, ಉಳಿದುದೊಂದು ತುಂಡನ್ನು ತಾನು ತಿಂದನು. ಪಾಪ! ಆ ಬಡಪಾಯಿಗಳಿಗೆ ಸಂಜೆಯ ವರೆಗೆ ಬಹುಶಃ ಅದೇ ಇಡ್ಲಿಯ ಚೂರಿನಿಂದಲೇ ಪ್ರಾಣಧಾರಣೆಯಾಗಬೇಕಾಗಿ ಬರಬಹುದಲ್ಲವೇ ?

ಆ ತಂದೆ ಮಕ್ಕಳ ಅಸಹಾಯಕ ಸ್ಥಿತಿಯನ್ನೂ, ಕಷ್ಟ ಜೀವನ, ಅಲ್ಪ ತುಷ್ಟಿ ಮೊದಲಾದ ಉದಾತ್ತ ಗುಣಗಳನ್ನೂ ಕಂಡು ನನ್ನ ಮನಸ್ಸು ಯಾವುದೋ ಒಂದು ಅವ್ಯಕ್ತ ಚಿಂತೆಯಿಂದೊಡಗೂಡಿತು. ಬಡ ಬಗ್ಗರ ದೀನ ಸ್ಥಿತಿಗಾಗಿ ಕರಗದ ನನ್ನ ಹೃದಯವು ಮರುಕಗೊಳ್ಳುವಂತಾಯಿತು. ನಾನು ದಾರಿಯಲ್ಲಿ ಬರುವಾಗ ಕೇಳಿದ ಪದ್ಯವು ನನ್ನ ಹೃದಯ ಪರಿವರ್ತನೆಯನ್ನು ಅರ್ಧಮರ್ಧವಾಗಿ ಮಾಡಿದ್ದರೆ, ಈ ಭಿಕ್ಷುಕ ಬಾಲಕನು ಸಂಪೂರ್ಣವಾಗಿ ನನ್ನ ಹೃದಯದ ಮಾರ್ಪಾಟಕ್ಕೆ ಕಾರಣನಾದನು.

"ಧನಿಕರು ಲಕ್ಷಗಟ್ಟಲೆ ಹಣವನ್ನು ತಮ್ಮಲ್ಲಿದ್ದ ನಾಯಿ ಬೆಕ್ಕುಗಳಿಗಾಗಿ ಖರ್ಚು ಮಾಡಲು ಹಿಂದೆ ಮುಂದೆ ನೋಡುವುದಿಲ್ಲವಾದರೂ ಮಾನವರಾದ ದೀನ ದಲಿತರಿಗಾಗಿ ಒಂದು ಬಿಡಿ ಕಾಸನ್ನಾದರೂ ವ್ಯಯಿಸಲು ಮುಂದೆ ಬರುವುದಿಲ್ಲ."

ನನ್ನ ವಿಚಾರ ಸರಣಿಯು ಮುಂದೊತ್ತುತ್ತ, ನಾನು ಮಾಡುತ್ತಿರುವ ಅನಾವ್ಯಯಗಳ ಕಡೆಗೆ ಹರಿಯಿತು. ನಾನು ದಿನ ಒಂದಕ್ಕೆ ಹೊಟೆಲಿಗೆ ಮತ್ತು ಸಿಗರೇಟಿಗಾಗಿ ಖರ್ಚು ಮಾಡುತ್ತಿರುವ ಹಣವು ಹೊಟ್ಟೆಗಿಲ್ಲದ ಇಂಥಾ ಹತ್ತು ಬಡ ಸಂಸಾರಗಳ ಜೀವನೋಪಾಯಕ್ಕೆ ಸಾಕಾಗಬಹುದೆಂಬ ವಿಚಾರವು ಹೊಳೆಯುತ್ತಲೇ, ನನಗೆ ಮನಸ್ಸಿನಲ್ಲಿ ಬಹಳ ಕಳವಳವಾಯಿತು. ನಿಷ್ಪ್ರಯೋಜಕವಾದ ದುಂದುಗಾರಿಕೆಯ ಜೀವನದಲ್ಲಿ ಜುಗುಪ್ಸೆ ಹುಟ್ಟಿತು. ಸಮಾಜದೆದುರಲ್ಲಿ ನಾನೊಬ್ಬ ಅಪರಾಧಿಯೆಂದೆನಗೆ ತೋರಿತು.

ನಾನು ನಿಧಾನವಾಗಿ ಹೊಟೆಲಿನ ಮೆಟ್ಟಿಲುಗಳನ್ನಿಳಿದು ಮಾರ್ಗದ ಬದಿಯಲ್ಲಿದ್ದ ಕುರುಡನ ಬಳಿ ಸಾಗಿದೆನು. ನಾನಲ್ಲಿ ಹೋದೆನೆನ್ನುವುದಕ್ಕಿಂತ, ನನಗರಿಯದಂತೆ ನನ್ನ ಕಾಲುಗಳು ನನ್ನನ್ನಲ್ಲಿಗೊಯ್ದವು ಎನ್ನುವುದು ಹೆಚ್ಚು ಸಮಂಜಸವೆನಿಸಬಹುದು. ಹುಡುಗನು ನನ್ನ ಬರವನ್ನು ಕಾಣುತ್ತಲೆ 'ಒಂದು ಕಾಸು ಕೊಡಿ ಸ್ವಾಮಿ, ಕುರುಡನಿಗೆ' ಎಂದು ಅತಿ ದೈನ್ಯದಿಂದ ಕೈಗಳೆರಡನ್ನು ಜೋಡಿಸುತ್ತ ನಿಂತುಕೊಂಡನು. ಅವನ ಮಾತುಗಳಿಂದ ನನ್ನ ಹೃದಯದಲ್ಲಾದ ಪರಿವರ್ತನೆಯ ಅರಿವು ನನಗಾಗದಿದ್ದರೂ, ನಾನು ಹುಡುಗನನ್ನು ಹೊಟೆಲಿಗೆ ಕರೆದುಕೊಂಡು ಹೋಗಿ ತಲಾ ನಾಲ್ಕರಂತೆ ಎಂಟು ಇಡ್ಲಿಗಳನ್ನು ಅವನ ಕೈಯಲ್ಲಿ ಕೊಟ್ಟೆನು. ಹುಡುಗನು ತನ್ನ ಕಣ್ಣುಗಳಿಂದಲೇ ಕೃತಜ್ಞತೆಯನ್ನು ಸೂಚಿಸಿ ತಿಂಡಿಯೊಂದಿಗೆ ಓಡಿ ಹೋದನು.

ನಾನು ಮನೆ ಸೇರಿದವನೇ ನನ್ನ ಚಿರಂಜೀವಿಯನ್ನು ಕರೆದು, ನೆರೆಮನೆಯ ಹುಡುಗನು ಓದುತ್ತಿದ್ದ ಪುಸ್ತಕವನ್ನು ತರಿಸಿ, ಮೊದಲಿನಿಂದ ಕೊನೆಯವರೆಗೆ ಓದಿ ನೋಡಿದೆನು. ಕನ್ನಡದ ಹಿರಿಯ ಕವಿಗಳಲ್ಲೊಬ್ಬರಾದ 'ಕುವೆಂಪು' ಬರೆದ 'ಹಾಳೂರು' ಎಂಬುದೇ ಆ ಪುಸ್ತಕವಾಗಿತ್ತು. ಅದನ್ನೋದಿ ಉತ್ತೇಜಿತನಾದ ನಾನು ಅದರಲ್ಲಿಯ –

'ಬೀದಿಯ ದರಿದ್ರ ನಾರಾಯಣರ ನೋಡು ।
ಅನ್ನ ವಸ್ತ್ರವನೀವ ಪೂಜೆಯನು ಮಾಡು ॥
ಮಾನವನ ಸೇವೆಯೇ ಪರಮಾತ್ಮ ಸೇವೆ ।
ಪರಮೇಶ್ವರನ ಪರಮ ದಿವ್ಯಾಂಶನಾವೆ ॥'

ಎಂಬ ನಾಲ್ಕು ಸಾಲುಗಳನ್ನು ದೊಡ್ಡದಾಗಿ ಹಲಿಗೆಯ ಮೇಲೆ ಬರೆಯಿಸಿ ನನ್ನ ಕೋಣೆಯಲ್ಲಿ ತೂಗ ಹಾಕಿಸಿದೆನು. ಬಡವರಿಗೆ ಮುಚ್ಚಿ ರುತ್ತಿದ್ದ ನನ್ನ ಮನೆಯ ಬಾಗಿಲುಗಳು ಈಗ ಅವರಿಗೆ ಸದಾ ಸ್ವಾಗತ ವನ್ನು ಬಯಸುತ್ತ ತೆರೆದಿರುತ್ತವೆ. ನಾನು ನಿನ್ನೆಯಿಂದ ಸಿಗರೇಟು ಸೇದುವುದನ್ನು ಬಿಟ್ಟಿದ್ದೇನೆ. ಹೊಟೆಲಿನಲ್ಲಿ ದಿನಕ್ಕೆರಡು ಬಾರಿ ಮಾತ್ರ ಚಾ ಕುಡಿಯುತ್ತಿದ್ದೇನೆ. ಹಾಗೆ ಉಳಿಸಿದ ಹಣವನ್ನು ದೀನ ದಲಿತರ ಸೇವೆಗಾಗಿ ಮೀಸಲಿರಿಸುತ್ತಿದ್ದೇನೆ. ಹಾಗಾಗಿ ನಿನ್ನೆಯಿಂದ ನನ್ನ ಮಿದುಳು ತುಕ್ಕು ಹಿಡಿದ ಕಬ್ಬಿಣದಂತೆ ಸರಿಯಾಗಿ ಕೆಲಸ ಮಾಡಲು ಮುಂದುವರಿಯುವುದಿಲ್ಲ. ಪರಿಸ್ಥಿತಿಯು ಕೆಲವೇ ದಿನಗಳಲ್ಲಿ ಹತೋಟಿಗೆ ಬರಬಹುದೆಂಬ ನಂಬಿಕೆಯು ನನಗಿರುವುದರಿಂದ, ಉಳಿದ ವಿಚಾರವನ್ನು ಆಗ ಸಾವಕಾಶವಾಗಿ ಹೇಳಿದರೆ ಸಿಟ್ಟಾಗುವುದಿಲ್ಲವಷ್ಟೆ?

ಚಿನ್ನದ ಸರ

ಟಿ. ಎಸ್. ಶಂಕರ ಭಟ್ಟ, ಕುರ್ನಾಡು.

ಆ ದಿನ ಮುಂಜಾನೆಯಿಂದ ಮನೆಯಿಡಿ ಗದ್ದಲದಿಂದ ಕೂಡಿತ್ತು, ಆದರೆ ಬೈಗಿನ ಹೊತ್ತು 'ಮಗುವಿನ ಕೊರಳಿನಲ್ಲಿದ್ದ ಚಿನ್ನದ ಸರ ಕಾಣೆ ಯಾಗಿತ್ತು' ಎಂದು ಗಲಭೆಯಾಯಿತು. ಎಲ್ಲರೂ ಊಟ ಮಾಡಿ ತುಸು ಒರಗಿ ಈ ಗಲಭೆಯಿಂದೆದ್ದು, ಮನೆಯ ಒಳಗೂ ಹೊರಗೂ, ಅಲ್ಲೂ ಇಲ್ಲೂ, ಹುಡುಕಾಡಿ ಸಿಕ್ಕದೆ, ಮಧ್ಯಾಹ್ನ ದೇಶಾವರಕ್ಕಾಗಿ ಮನೆಗೆ ಬಂದು ಊಟ ಮಾಡಿ, ಎಂಟಾಣೆ ದಾನವನ್ನೂ ಪಡೆದುಕೊಂಡು ಹೋದ ಬಡಬ್ರಾಹ್ಮಣನ ಮೇಲೆ ಸಂದೇಹಪಟ್ಟರು. ಮಾಧವರಾಯರು ತನ್ನ

ಜೊತೆಗೆ ಇಬ್ಬರು ಆಳುಗಳನ್ನು ಕರೆದುಕೊಂಡು ಆ ಬ್ರಾಹ್ಮಣನನ್ನು ಹುಡುಕುತ್ತ ಹೊರಟರು.

ಮನೆ ಮನೆಗಳಲ್ಲಿ ತಿರುಗಾಡಿ ಆಯಾಸಗೊಂಡ ಬ್ರಾಹ್ಮಣನು ಸಂಜೆ ಊರ ದೇವಾಲಯದ ಹೊರ ಗೋಪುರದಲ್ಲಿ ಹರಕು ವಸ್ತ್ರವನ್ನು ಹಾಸಿ, ಮಲಗಿ ವಿಶ್ರಾಂತಿ ಹೊಂದುತ್ತಿದ್ದನು. ಅಲ್ಲಿಗೆ ರಾಯರು ಹೆಡೆಮೆಟ್ಟಿದ ಹಾವಿನಂತೆ ಬುಸುಗುಟ್ಟುತ್ತ ಬಂದರು.

“ಏ ಕಳ್ಳ, ಚಿನ್ನದ ಸರವೆಲ್ಲಿದೆ? ಬೇಗನೆ ಹೊರ ತೆಗೆ. ಇಲ್ಲವಾದರೆ ಸುಮ್ಮನೆ ಬಿಡಲಾರೆ” ಎಂದು ಮಾಧವರಾಯರು ಬ್ರಾಹ್ಮಣನ ಬಳಿಗೆ ಬಂದು ಏರು ಸ್ವರದಿಂದ ದಟ್ಟಿಸಿದರು.

ರಾಯರ ಆರ್ಭಟವನ್ನು ಕೇಳಿ ಬ್ರಾಹ್ಮಣನು ಬೆಚ್ಚಿಬಿದ್ದು, ಎದ್ದು ಕುಳಿತನು. ಆಶ್ಚರ್ಯದಿಂದ ರಾಯರನ್ನೂ ಅವರ ಜೊತೆಗಿದ್ದ ಆಳುಗಳನ್ನೂ ಕಣ್ಣು ಬಿಡದೆ ನೋಡಿದನು.

“ಯಾವ ಚಿನ್ನದ ಸರ? ನನ್ನೊಡನೆ ಯಾವ ಸರವೂ ಇಲ್ಲವಲ್ಲ!” ಎಂದು ಬ್ರಾಹ್ಮಣನೆಂದನು.

“ಸಾಕಯ್ಯ ನಿನ್ನ ನಟನೆ. ಕದ್ದವರು ಎಂದಾದರೂ ತಾನು ಕದ್ದವನ್ನು ಒಪ್ಪಿಕೊಳ್ಳುವುದಿದೆಯೆ? ನೀನು ಆಗ ನಮ್ಮ ಮನೆಗೆ ಬಂದು ಹೋದ ಮೇಲೆ ನನ್ನ ಮೊಮ್ಮಗು ಲಲಿತೆಯ ಸರ ಕಾಣೆಯಾಗಿದೆ. ಅದನ್ನು ನೀನೇ ಅಪಹರಿಸಿರುವೆ. ನೀನು ಮಗುವಿನೊಡನೆ ಸ್ನೇಹದಿಂದ ಮಾತಾಡುತ್ತ ಬಹಳ ಸಲುಗೆಯಿಂದ ವರ್ತಿಸಿ ಒಳ್ಳೆಯವನಂತೆ ನಟಿಸಿ ಸರವನ್ನೇ ಕದ್ದಿರುವೆ. ಒಳ್ಳೆಯ ಮಾತಿನಿಂದ, ಬೇಗನೆ, ಕದ್ದ ಸರವನ್ನು ಕೊಟ್ಟು ನಿನ್ನ ಹಾದಿ ಹಿಡಿ,” ಎಂದು ಕೆಂಗಣ್ಣುಗಳಿಂದ ಕಿಡಿಗೆದರುತ್ತ ರಾಯರು ಗರ್ಜಿಸಿದರು.

“ಸ್ವಾಮಿ, ನಾನು ತೀರಾ ಬಡವನಾದರೂ ಹುಟ್ಟಿದಂದಿನಿಂದ ಈ ವರೆಗೆ ಕಳ್ಳತನವನ್ನೇ ಮಾಡಲಿಲ್ಲ. ಪ್ರಮಾಣ ಪೂರ್ವಕವಾಗಿಯೂ ಸರವನ್ನು ನಾನು ಕದಿಯಲಿಲ್ಲ. ಅನುಮಾನವಿದ್ದರೆ ನನ್ನ ಈ ಹರಕು ಚೀಲವನ್ನು ಶೋಧಿಸಿ ನೋಡಬಹುದು,” ಎಂದು ಬ್ರಾಹ್ಮಣನು ದೈನ್ಯದಿಂದ ಕೈ ಜೋಡಿಸಿ ಹೇಳಿದನು.

ಇದೆಲ್ಲ! ಬ್ರಾಹ್ಮಣನ ಕೃತ್ರಿಮ ನಟನೆಯೆಂದು ತಿಳಿದು, ರಾಯರು

ಆಳುಗಳೊಡನೆ ಬ್ರಾಹ್ಮಣನ ಚೀಲ, ಹರಕು ಅಂಗಿ ಇತ್ಯಾದಿಗಳನ್ನು ಹುಡುಕಿಸಿದರು. ಅದೆಷ್ಟು ಹುಡುಕಿಸಿದರೂ ಚಿನ್ನದ ಸರ ಮಾತ್ರ ಬ್ರಾಹ್ಮಣನೊಡನೆ ಸಿಕ್ಕಲಿಲ್ಲ.

"ಅರೇ ಹುಚ್ಚಪ್ಪ, ನೀನು ಎಲ್ಲಿಯೋ ಅಡಗಿಸಿಟ್ಟಿರಬೇಕು ಅಥವಾ ಯಾರಿಗಾದರೂ ಕೊಟ್ಟಿರಬೇಕು. ಸತ್ಯ ಹೇಳಿ ಸರವನ್ನು ಕೊಟ್ಟು ಮರ್ಯಾದೆಯಿಂದ ನಡೆ. ಇದು ನಿನಗೆ ಕೊನೆಯ ಎಚ್ಚರಿಕೆಯ ಮಾತು. ಅದನ್ನು ನೀನು ಮನ್ನಿಸದಿದ್ದರೆ ಪರಿಣಾಮ ಬೇರೆಯೇ ಇದೆ," ಎನ್ನುತ್ತಾ ರಾಯರು ತುಟಿ ಕಚ್ಚಿ, ಕಣ್ಣು ಕೆಂಪುಮಾಡಿ ದರ್ಪದಿಂದ ಗದರಿಸಿದರು.

"ನಾನು ನಿಜವಾಗಿಯೂ ನಿಮ್ಮ ಸರವನ್ನು ಕದಿಯಲಿಲ್ಲ. ನಾನು ನಿರಪರಾಧಿ ಎಂದಿಷ್ಟೇ ಹೇಳಬಲ್ಲೆ" ಎಂದು ಬ್ರಾಹ್ಮಣನು ಮತ್ತೂ ವಿನಯದಿಂದಲೇ ಮಾತಾಡಿದನು.

ರಾಯರಿಗೆ ಕೋಪ ಉಕ್ಕೇರಿತು. ತಾನೇ ಎರಡು ಹೆಜ್ಜೆ ಮುಂದೆ ಹೋಗಿ ಬ್ರಾಹ್ಮಣನ ಕೈಹಿಡಿದು ಎಳೆದು ಬೆನ್ನಿಗೆ ಬಲವಾಗಿ ಒಂದೇಟು ಕೊಟ್ಟು ಸತ್ಯ ಹೇಳಲು ಪ್ರಯತ್ನಿಸಿದರು; ಆ ಮೇಲೆ ಆಳುಗಳ ವಶಕ್ಕೊಪ್ಪಿಸಿ ಸರಿಯಾಗಿ ಹೊಡೆಯಿಸಿ ಬಾಯಿ ಬಿಡಿಸಲು ಪ್ರಯತ್ನಿಸಿದರು. ಧನಿಗಳ ಅಪ್ಪಣೆಯಂತೆ ಆಳುಗಳು ಕಣ್ಣು ಮೋರೆ ನೋಡದೆ ಬ್ರಾಹ್ಮಣನನ್ನು ಚೆನ್ನಾಗಿ ಹೊಡೆದರು.

"ನಾನು ನಿರಪರಾಧಿ. ನನಗೆ ಸರದ ಸಂಗತಿಯೇ ತಿಳಿಯದು." ಎಂದು ಬ್ರಾಹ್ಮಣನು ಕೊನೆಯ ತನಕ ಅದೆಷ್ಟೋ ಹೊಡೆತಗಳ ವೇದನೆಗಳಾಗುತ್ತಿದ್ದರೂ ವಾದಿಸುತ್ತಿದ್ದನು. ಕೊನೆಗೆ ಏಟುಗಳ ಪ್ರಭಾವದಿಂದ ಬ್ರಾಹ್ಮಣನ ಪ್ರಜ್ಞೆ ತಪ್ಪಿತು. ಆತನು ನೆಲದ ಮೇಲೆ ಧೊಪ್ಪನೆ ಬಿದ್ದುಬಿಟ್ಟನು.

ರಾಯರು ನಿರಾಶರಾಗಿ ಆಳುಗಳೊಂದಿಗೆ ಮನೆಯ ದಾರಿಹಿಡಿದರು. ಮನೆಯ ಅಂಗಳಕ್ಕೆ ಕಾಲಿಡುವಷ್ಟರಲ್ಲಿ ಅವರ ಪತ್ನಿ ನಾಗಮ್ಮನೂ ಪುತ್ರಿ ಶಾರದೆಯೂ ಎರಡು ವರ್ಷದ ಮಗು ಲಲಿತೆಯನ್ನೆತ್ತಿಕೊಂಡು ಹೊರಬಂದರು.

"ಚಿನ್ನದ ಸರ ಸಿಕ್ಕಿತು!" ಎಂದು ಇಬ್ಬರೂ ಹರ್ಷಚಿತ್ತರಾಗಿ ಒಟ್ಟಿಗೇ ತಿಳಿಸಿದರು.

"ಎಲ್ಲಿ? ಎಲ್ಲಿತ್ತು ಆ ಸರ?" ರಾಯರು ಅಧೀರರಾಗಿ ಮಿಂಚಿ ಹೋದ ಆಕಾರ್ಯವನ್ನು ನೆನೆದು ಪ್ರಶ್ನಿಸಿದರು.

"ನಾವು ಮನೆಯ ಒಳಗೂ ಹೊರಗೂ ಹುಡುಕಾಡಿ ಸುಮ್ಮನೆ ಸೋತು ಸುಣ್ಣವಾಗಿ ಬಿಟ್ಟೆವು. ಲಲಿತೆಯೊಡನೆ ಕೇಳಿದಾಗ ಅವಳೂ ಏನೇನೋ ಆಡುತ್ತಿದ್ದಳು. ಕಡೆಗೆ ನಾನು ಅವಳ ಆಟದ ಸಾಮಾನುಗಳನ್ನು ಎತ್ತಿ ಆಚೆಗೆ ಇರಿಸುವಾಗ ಆ ಡಬ್ಬಿಯಲ್ಲಿ ಸರವಿತ್ತು! ಮೊದಲೊಮ್ಮೆ ಅಲ್ಲಿ ಹುಡುಕಿದಾಗ ಗಡಿಬಿಡಿಯಲ್ಲಿ ಸಿಕ್ಕಿರಲಿಲ್ಲ." ಎಂದಳು ಶಾರದೆ.

ರಾಯರಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ನಿಷ್ಕಾರಣವಾಗಿ ತಾನು ಪೂರ್ವಾಪರ ವಿಚಾರವಿಲ್ಲದೆ ಮಾಡಿದ ಪ್ರಮಾದವನ್ನು ನೆನೆದು ಪಶ್ಚಾತ್ತಾಪದಿಂದ ದೇಹವು ಕಂಪಿಸುತ್ತಿತ್ತು. ಬಾಯಿಯಿಂದ ಒಂದು ಮಾತೂ ಹೊರಡಲಿಲ್ಲ. ಕಾರ್ಯವು ಮಿಂಚಿಹೋಯಿತೆಂದು ಚಿಂತಿಸಿದರು. ನಿರಪರಾಧಿಯೆಂದು ವಾದಿಸಿದರೂ ಬಿಡದೆ ಬ್ರಾಹ್ಮಣನನ್ನು ಹೊಡೆದು ಶಿಕ್ಷಿಸಿದ ವೇದನೆಯು ತನ್ನ ಕರುಳನ್ನೇ ಕೊರೆಯತೊಡಗಿತು. ಮನೆಯ ಹೆಂಗುಸರ ಅವಸರದ ಮಾತುಗಳನ್ನು ನಂಬಿ ಮಾಡಬಾರದ ಕೆಲಸ ಮಾಡಿಯಾಗಿತ್ತು.

ದೇವಾಲಯದ ಗೋಪುರದತ್ತ ರಾಯರು ಪುನಃ ಧಾವಿಸಿದರು. ಬ್ರಾಹ್ಮಣನನ್ನು ಕಂಡು ಅಪರಾಧಕ್ಕಾಗಿ ಆತನೊಡನೆ ಕ್ಷಮೆ ಕೇಳಬೇಕೆಂದು ನಿಶ್ಚೈಸಿದರು. ದೂರದಿಂದಲೇ ಬ್ರಾಹ್ಮಣನು ಮಲಗಿರುವುದನ್ನು ನೋಡಿ ಸಮೀಪಕ್ಕೆ ಹೋದರು. ಬ್ರಾಹ್ಮಣನ ದೇಹವನ್ನು ಮುಟ್ಟಿದಾಗ ಅವನ ದೇಹವು ತಣಿದಿತ್ತು. ಆತನ ಇಹಲೋಕದ ಜೀವನವು ಮುಗಿದಿತ್ತು.

ಚಿನ್ನದ ಸರ ಕಾಣೆಯಾಗಿತ್ತು; ಸಿಕ್ಕಿತು. ಬ್ರಾಹ್ಮಣನ ಜೀವ ಹೋಗಿತ್ತು; ಪುನಃ ಬರಲಿಲ್ಲ.

ಅಲೌಕಿಕ-ಸುಖ

ಲೇಖಕಿ: ಶ್ರೀಮತಿ ಆನಂದಿ ಸದಾಶಿವರಾವ್, ಮಂಗಳೂರು,

ಮುರಲೀ ಮೋಹನ ಕೃಷ್ಣನೆಂದರೆ ಸಾವಿರಾರು ವರ್ಷಗಳ ಬಳಿಕವೂ ಏಕೆ ಜನರಿಗೆ ಪ್ರಿಯವೆಂದೂ, ನೂರಾರು ಕವಿಗಳು ಲೀಲಾವತಾರಿ ಪುರುಷೋತ್ತಮನ ಬಗ್ಗೆ ಕಾವ್ಯಗಳನ್ನು ರಚಿಸಿದರೆಂದೂ, ಹಲವಾರು ದಾರ್ಶನಿಕರ ದಿವ್ಯಾನುಭವಕ್ಕೆ ಕಾರಣನಾದನೆಂದೂ ಸುನಂದೆಗೆ ಆ ಒಂದು ಸಂಜೆ ಭಾಗವತವನ್ನು ಓದುತ್ತಿದ್ದಂತೆ ಭಾಸವಾಯಿತು. ಮಹಾಭಾರತದಲ್ಲಿ ವ್ಯಾಸ ಮಹರ್ಷಿ ಸೃಷ್ಟಿಸಿದ ಶ್ರೀ ಕೃಷ್ಣನ ಪಾತ್ರಕ್ಕೂ, ಭಾಗವತದಲ್ಲಿ ಬಂದ ಪರಮಾತ್ಮನ ವರ್ಣನೆಗೂ ಅಂತರವಿತ್ತು. ಮಹಾಭಾರತದ ಕೃಷ್ಣ ಪಾಂಡವರ ಹಿತೈಷಿಯಾಗಿ, ಓದುಗರ ಮನಸ್ಸನ್ನು ಸೂರೆಗೊಳ್ಳುವ, ಹೃದಯದಲ್ಲಿ ಚಿರಸ್ಥಾಯಿಯಾಗಿ ನೆಲೆಗೊಳ್ಳುವ, ಅತ್ಯಂತ ಸಮೀಪವರ್ತಿಯಾಗುವ, ಚಿರಪರಿಚಿತ ವ್ಯಕ್ತಿಯಾಗುವಂತಿರುವವನು. ಭಾಗವತದಲ್ಲಿ 'ಪರಮಾತ್ಮ' ಎಂದರೆ, ಸಾಮಾನ್ಯರಿಗೆ ಅತೀತನಾದ ಅದ್ಭುತ ಅಲೌಕಿಕ, ಲೀಲೆ ತೋರುವ, ಮನ ಬುದ್ಧಿಗಳಿಗೆ ವಿಭ್ರಮೆ ಹಿಡಿಸುವ ದೇವನಾಗಿರುವನು.

ಸುನಂದೆಗೆ ಈ ಎರಡರ ಸಮ್ಮಿಶ್ರಣ ವಿರಳವಾದಂತೆ, ಶ್ರೀ ಕೃಷ್ಣ ಪಾತ್ರ ರಚನಾ ಕೌಶಲ್ಯದರಿವು ಆದಂತೆ, ಮನದಲ್ಲಿ ಎಲ್ಲಿಲ್ಲದ ಶಾಂತಿ ಸಮಾಧಾನ ತುಂಬಿ ಬಂತು. ಕಣ್ಣುಗಳಲ್ಲಿ ಕಂಬನಿ ಮೂಡಿ ಬಂತು. ಪುಸ್ತಕ ಮುಚ್ಚಿದಳು.

"ಇಂದಿಗೆ ಸಾಕು. ಒಂದೇ ಬಾರಿ ಸ್ವರ್ಗದ ಸುಖವನ್ನು ಅನುಭವಿಸಿ ಮುಗಿಸಬಾರದು. ಅದರ ಸವಿಯನ್ನು ಮೆಲ್ಲಮೆಲ್ಲಗೆ ಮೆಲ್ಲಬೇಕು. ಮೆಲ್ಲುವುದರಲ್ಲಿಯೇ ಅಡಗಿದೆ ಅದರ ರಸವೌತಣ" ಎಂದುಕೊಂಡಳು. ಹಾಗೆ ಎಷ್ಟು ಹೊತ್ತು ಯೋಚನಾಮಗ್ನಳಾಗಿ ಕುಳಿತಿದ್ದಳೋ? ಕಿಟಕಿಯಿಂದ ತೋರಿ ಬರುವ ಸಂಧ್ಯಾಕಾಲದ ಅರುಣ ಛಾಯೆ ಕಳೆದು ದಿಗಂತವು ಸಂಜೆಗತ್ತಲು ಹರಡಿದಂತೆ ತನ್ನ ಬಣ್ಣ ಬದಲಾಯಿಸಿತು. ಕೋಣೆಯಲ್ಲಿದ್ದ ಬೆಳಕು ಮಾಯವಾಗುತ್ತಾ ಕತ್ತಲು ಹರಡಿತು.

"ಕತ್ತಲೆಯಲ್ಲಿ ಕುಳಿತು ಏನು ಮಾಡುತ್ತಿರುವೆ? ದೀಪವನ್ನು ಹಚ್ಚ ಬಾರದೇ?" ಎನ್ನುತ್ತಾ ಸೀತಮ್ಮ ವಿದ್ಯುದ್ದೀಪದ ಗುಂಡಿ ಒತ್ತಿದರು, ಕಿಟಕಿಯ ಬಳಿ ಕುರ್ಚಿಯೊಂದರಲ್ಲಿ ಕುಳಿತಿದ್ದ ಮೊಮ್ಮಗಳ ಮುಖವನ್ನು ನೋಡುತ್ತಾ.

"ತುಳಸಿ ಕಟ್ಟೆಗೆ ಈ ಕಾರ್ತಿಕ ಮಾಸದಲ್ಲಾದರೂ ದೀಪ ಹಚ್ಚಿ ಇಡಬಾರದೇ? ಹೋಗು. ಅಮ್ಮ ಎಷ್ಟು ಕೆಲಸ ಮಾಡುವುದು? ಸ್ವಲ್ಪ ಸಹಾಯ ಮಾಡು. ದೇವರಿಗೆ ದೀಪ ಹತ್ತಿಸಿ ಇಟ್ಟರೆ ಒಳ್ಳೆಯದು. ಹೆಣ್ಣು ಮಕ್ಕಳಿಗೆ ಯೋಗ್ಯ ಪತಿ ಸಿಗುತ್ತಾನೆ."

ಸೀತಮ್ಮ ನುಡಿಯುತ್ತಿದ್ದಂತೆ ಸುನಂದಾ, "ಹೂಂ, ಆಯಿತು. ಆಯಿತು" ಎಂದು ಕೋಣೆಯಿಂದ ಹೊರಬಿದ್ದಳು. ಅವಳ ವಿಚಾರ ಲಹರಿಗೆ ತಟ್ಟನೆ ತಡೆ ಬಂದಿತ್ತು. ಓದಿದ ಪುಸ್ತಕದ ವಿಷಯವನ್ನು ಚಿಂತಿಸುತ್ತಾ ಇದ್ದವಳು ತತ್‌ಕ್ಷಣ ದೊಡ್ಡಮ್ಮನ ಮಾತಿನಿಂದಾಗಿ ವಾಸ್ತವಿಕ ಪ್ರಪಂಚಕ್ಕೆ ಬಂದಿದ್ದಳು. "ಯೋಚಿಸುತ್ತಾ ಇರುವುದರಲ್ಲಿ ಎಷ್ಟು ಸಂತೋಷವಿದೆ! ದೊಡ್ಡಮ್ಮನಿಗೆ ಅದು ತಿಳಿದಿದ್ದರಲ್ಲವೆ? ಒಂದು ದಿನ ದೀಪ ಹಚ್ಚಿ ಇಡದಿದ್ದರೆ ಏನು ಕೊಳ್ಳೆ ಹೊಡೆದು. ಹೋಗುತ್ತದೆ" ಎಂದುಕೊಂಡಾಕೆ ನಡೆದಿದ್ದಳು. ಆದರೆ ಬಾಯಿ ಬಿಟ್ಟು ದೊಡ್ಡಮ್ಮನಿಗೆ ಇದಿರು ಹೇಳಲು ಅವಳಿಗೆ ಸಾಧ್ಯವಿರಲಿಲ್ಲ. ಉತ್ತರ ಕೊಟ್ಟರೂ ಅವರ ವಾದವನ್ನು ಇದಿರಿಸುವಷ್ಟು ಅವಳು ಶಕ್ತಳಾಗಿರಲಿಲ್ಲ. ಆದರೆ ಇಂದು ತನ್ನ ಕರ್ತವ್ಯ ನಿರ್ವಹಣೆಗಾಗಿ ಅವರು ನುಡಿದ ಮಾತಿಗೆ ವಾದ ಹೂಡುವ ಅವಶ್ಯವಿರಲಿಲ್ಲ. ಆದ್ದರಿಂದಲೇ ಸುನಂದಾ ಮೌನವಾಗಿಯೇ ಎದ್ದು ಹೋದಳು.

ಕರ್ತವ್ಯ, ಕರ್ತವ್ಯ, ಹುಡುಗಿಯರು ಮಾಡಬೇಕಾದ ಕೆಲಸ ಮಾಡಿಯೇ ತೀರಬೇಕು. ದಿನಾ ಬೆಳಗ್ಗೆ ಗಂಡು ಹುಡುಗರಂತೆ ತಡವಾಗಿ ಏಳಲು ಅವರಿಗೆ ಹಕ್ಕಿಲ್ಲ. ತಾಯಿಗೆ ಕೆಲಸದಲ್ಲಿ ನೆರವಾಗಬೇಕು. ಹಿರಿಯರ ಮಾತಿನಂತೆ ನಡೆಯಲೇ ಬೇಕು. ಪ್ರತಿಭಟನೆ ತೋರಿದರೆ "ಇನ್ನೊಬ್ಬರ ಮನೆಗೆ ಹೋಗಿ ಬಾಳ್ವೆ ಮಾಡಬೇಕು ನೀವು. ಈಗಲೇ ಹೇಳಿದಂತೆ ಕೇಳುವ ಅಭ್ಯಾಸ ಮಾಡಿದರೆ ಒಳ್ಳೆಯದು. ಇಲ್ಲವಾದರೆ ತವರು ಮನೆಗೆ ಹೆಸರು ತರಿಸುತ್ತೀರಿ," ಎಂಬ ಮಾತನ್ನು ಬಾಲ್ಯದಿಂದಲೂ

ಕೇಳಿ ಕೇಳಿ ಸಾಕಾದ ಸುನಂದೆ ಈಗ ಆ ಮಾತು ಹೇಳುವಂತಹ ಅವಕಾಶ ಕೊಡಬಾರದೆಂದು ಶ್ರಮಿಸ ತೊಡಗಿದಳು. ಎರಡು ವರ್ಷಗಳ ಹಿಂದೆ ಅವಳ ಅಕ್ಕ ನಿರ್ಮಲಾಗೆ ಮದುವೆಯಾಗಿ ಹೋಗುವ ತನಕ ಇಬ್ಬರಿಗೂ ಹಿತೋಪದೇಶ ನಡೆಯುತ್ತಿತ್ತು. ಆಗ ಜತೆಯಲ್ಲಿ ಅಕ್ಕ ಇದ್ದಾಳೆ ಎಂಬ ಧೈರ್ಯವಿತ್ತು. ಈಗ ಏಕಾಕಿನಿಯಾಗಿ ಅವಳೇ ಆ ಮಾತು ಕೇಳಬೇಕು, ಕೇವಲ ಹೆಣ್ಣಾಗಿ ಹುಟ್ಟಿದುದಕ್ಕೆ.

ಒಮ್ಮೆ ಮನೆಮಂದಿಯರೆಲ್ಲರ ಸಿಟ್ಟಿನ ದೃಷ್ಟಿಯಾಗಿ, ಇನ್ನೊಮ್ಮೆ ಅವರ ಅಸಹಾಯಕತೆಯ ಗುರಿಯಾಗಿ, ಇನ್ನೊಮ್ಮೆ ಸಹಾನುಭೂತಿಗೆ ಕಣಿಯಾಗಿ, ಮಗುದೊಮ್ಮೆ ಕರುಣಾಜಲದಲ್ಲಿ ಮೀಯುವಂತಾಗಿರಬೇಕಾದ ಅವಶ್ಯಕತೆ ಅವಳಿಗೆ ಈ ಹದಿನೆಂಟು ವರ್ಷಗಳೊಳಗೆ ಅನುಭವವಾಗಿತ್ತು. ವ್ಯಕ್ತಿಶಃ ಅನುಭವಿಸದಿದ್ದರೂ, ಇತರರ ಪಾಡನ್ನು ನೋಡಿ ಬಾಳಿನ ಸಿಹಿ ಕಹಿ ರುಚಿ ಉಂಡಾಗಿತ್ತು.

ಅಕ್ಕ ನಿರ್ಮಲಾ ಮದುವೆಯಾದ ಬಳಿಕ ತನ್ನ ಸ್ಥಾನಮಾನಗಳಿಂದ ಎಲ್ಲರ ಪ್ರಶಂಸೆಗೆ ಪಾತ್ರಳಾಗಿದ್ದಳು. ಭಾವನ ಆಫೀಸರ್ ಪದ್ವಿಯಿಂದಾಗಿ ಅಕ್ಕನಿಗೆ ತವರು ಮನೆಯಲ್ಲಿ ಹಿಂದೆ ನಿರೀಕ್ಷಿಸದ ಗೌರವವು ದೊರಕಿತ್ತು. ನಿರ್ಮಲಾ ಕೂಡಾ ತುಂಬಾ ಬದಲಾಗಿದ್ದಳು; ಹಿಂದಿನ ಸರಳ ಮುಗ್ಧ ತರುಣಿ ಈಗ ಗಾಂಭೀರ್ಯದ ಮೂರ್ತಿಯಾಗಿ ತಂಗಿಯೊಡನಿದ್ದ ಹಳೆಯ ಸ್ನೇಹ ಸಲುಗೆಗಳನ್ನು ಮರೆತು ಬಿಟ್ಟಿದ್ದಳು. ಸುನಂದೆಗೆ ಅಕ್ಕನಿಗೆ ಸಂತೋಷ, ಉತ್ತಮ ಭವಿಷ್ಯತ್ತಿನ ದಾಂಪತ್ಯ ಜೀವನ ದೊರಕಿದೆ ಎಂದ ಸಮಾಧಾನವು ಅಕ್ಕನ ವರ್ತನೆಯಿಂದಾಗಿ ಕೊಂಚ ಕಡಿಮೆಯಾಗಿತ್ತು. ಆದರೆ ಅದನ್ನು ಅವಳು ಯಾರ ಮುಂದೆಯೂ ತೋಡಿಕೊಂಡಿರಲಿಲ್ಲ.

ಒಳಗಡೆ ಹೋದಾಗ ಸುನಂದೆಯ ತಾಯಿ ರಾಧಮ್ಮ ಅಡುಗೆ ಮನೆಯಲ್ಲಿ ಇದ್ದವರು "ಎಲ್ಲಿ ಅಡಗಿ ಕೂತಿದ್ದೆ. ಶಾಲೆಯಿಂದ ಬಂದುದು ತಿಳಿದಿತ್ತು. ಬಳಿಕ ಎಲ್ಲಿ ಮಾಯವಾಗಿ ಬಿಟ್ಟೆ?" ಎಂದರು.

"ಎಲ್ಲಿಗೂ ಹೋಗಿರಲಿಲ್ಲ. ಕೋಣೆಯಲ್ಲಿ ಓದುತ್ತಾ ಕೂತಿದ್ದೆ".

"ಇಡೀ ದಿನ ಓದು; ಓದು. ಅದರಿಂದ ಬೇಜಾರಾಗುವುದೂ ಇಲ್ಲ. ಓದಿ ಓದಿ ಕಣ್ಣಿಗೆ ಕನ್ನಡಕ ಇಂಸುವಂತಾಗದಿದ್ದರೆ ಸಾಕು."

ಆಗ ಸೀತಮ್ಮ ಬಂದವರು,

"ಅವಕ್ಕೆ ನಾನು ಹೇಳುವುದು, ಹೆಣ್ಣು ಮಕ್ಕಳಿಗೆ ಹೆಚ್ಚಿಗೆ ಕಲಿಸ ಬಾರದು ಎಂದು."

"ಈ ಒಂದು ವರ್ಷವಲ್ಲವೆ, ಮ್ಯಾಟ್ರಿಕ್ ಪಾಸಾದ ಬಳಿಕ ಯಾರು ಕಳಿಸ್ತಾರೆ. ನಿರ್ಮಲನಿಗೂ ಅಷ್ಟೆ ಓದಿಸಿದುದು. ಇವಳಿಗೂ ಅಷ್ಟೆ." ರಾಧಮ್ಮ ಅತ್ತೆಗೆ ಉತ್ತರವಿತ್ತರು.

"ನಿರ್ಮಲಾ ಅವಳು ಒಂದು ರತ್ನ, ರೂಪಕ್ಕೂ ಕೊರತೆ ಇರಲಿಲ್ಲ," ಸೀತಮ್ಮನು ಮಾತನಾಡುತ್ತಿದ್ದಂತೆ ನಡುವೆ ಸುನಂದಾ ದೇವರ ಕೋಣೆ ಯೊಳಗೆ ಹೋಗಿ ಹೊರ ಬಂದು, "ಅಮ್ಮಾ, ದೀಪದ ಎಣ್ಣೆ ಮುಗಿದಿದೆ" ಎಂದವಳು.

"ಇಂದು ತೆಂಗಿನ ಎಣ್ಣೆಯಿಂದಲೇ ದೀಪ ಹಚ್ಚಿ ಇಡು. ನಾಳೆ ಎಣ್ಣೆ ತರಿಸಿದರಾಯಿತು," ಎಂದು ರಾಧಮ್ಮ ಮಗಳಿಗೆ ಹೇಳಿದರು.

"ನಾನು ಬೆಳಿಗ್ಗೆಯೇ ರಾಮಚಂದ್ರನ ಹತ್ತಿರ ಎಣ್ಣೆ ತರಲು ಹೇಳಿದ್ದೆ. ಅವನು ತರಲಿಲ್ಲವೆ? ಬಹುಶಃ ಸಮಯ ಸಿಗಲಿಲ್ಲಾಂತ ಕಾಣುತ್ತದೆ," ಎಂದು ಸೀತಮ್ಮ ಮೊಮ್ಮಗನ ಮೇಲೆ ತಮ್ಮ ಸಹಾನು ಭೂತಿ ವ್ಯಕ್ತಪಡಿಸಿದರು. ರಾಮಚಂದ್ರ ಸುನಂದೆಯ ಅಣ್ಣ, ನಿರ್ಮಲಾಳ ತಮ್ಮ, ರಾಧಮ್ಮ ಮತ್ತು ಗೋವಿಂದರಾಯರ ಒಬ್ಬನೇ ಮಗ, ಅದ ರಿಂದಾಗಿ ಎಲ್ಲರ ಅಚ್ಚುಮೆಚ್ಚಿಗೆ ಪಾತ್ರನಾಗಿದ್ದನು. ಸೀತಮ್ಮನವರಿಗೆ ಅವನು ಅತ್ಯಂತ ಮೆಚ್ಚಿನ ಮೊಮ್ಮಗನಾದುದರಿಂದ ತನ್ನ ಬಾಳಿನ ನಂದಾ ದೀಪ ಎನ್ನುತ್ತಿದ್ದರು. ಸುನಂದೆಗೆ ಅಣ್ಣನ ಗುಣಗಾನ ಕೇಳಿ ಕೇಳಿ ಕಿವಿ ಚಿಟ್ಟು ಹಿಡಿದಿತ್ತು. ಒಂದೇ ಒಂದು ಬಾರಿ ರಾಮಚಂದ್ರನನ್ನು ದೊಡ್ಡಮ್ಮ ನಿಂದಿಸಿದುದು ಕೇಳಿರಲಿಲ್ಲ. ಅವನು ಏನು ತಪ್ಪು ಮಾಡಿ ದರೂ ಕ್ಷಮಿಸಿ ಬಿಡುವ ಔದಾರ್ಯ ಅವರಲ್ಲಿತ್ತು. ಅವನೇನು ಮಾಡಿ ದರೂ, "ಅವನು ಗಂಡುಮಗನಲ್ಲವೇ? ಇನ್ನೊಬ್ಬರ ಮನೆಗೆ ಹೋಗಿ ದುಡಿಯಬೇಕೆಂದು ಇಲ್ಲವಷ್ಟೆ. ಅದು ಒಬ್ಬನೇ ಮೊಮ್ಮಗ. ಅವನಿಂ ದಾಗಿ ನನ್ನ ವೃದ್ಧಾಪ್ಯದಲ್ಲಿಯೂ ತುಂಬಾ ಶಾಂತಿಯಿಂದ ಇದ್ದೇನೆ" ಎಂದು ಸೀತಮ್ಮ ಮೊಮ್ಮಗನ ಗುಣಗಾನ ಮಾಡಲು ಎಡೆ ದೊರಕಿದೊಡನೆ ಆಡ ತೊಡಗುತ್ತಿದ್ದರು.

ಸುನಂದೆ ತುಳಸಿಗೆ ದೀಪವಿಟ್ಟು ಬರುವಾಗ, ರಾಮಚಂದ್ರನು ಕೈ ಕಲ್ಲು ದೂಡಿಕೊಂಡು ಬರುವುದು ಕಾಣಿಸಿತು.

ರಾಮಚಂದ್ರನು ಆ ವರ್ಷ ಬಿ. ಎ. ತರಗತಿಗೆ ಸೇರಿದ್ದನು. ಅದ ರೊಡನೆ ತಾನು ಇನ್ನು ಪದವೀಧರನಾಗುವೆನು ಎಂದು ಕೊಂಚ ಅಭಿಮಾ ನವೂ ಬಂದಿತ್ತು. ಎರಡು ವರ್ಷಗಳ ಕಾಲೇಜು ಜೀವನದಲ್ಲಿ ಹೆಚ್ಚಿನ ಬದಲಾವಣೆ ಹೊಂದದ ರಾಮಚಂದ್ರ ಈ ಮೂರು ತಿಂಗಳುಗಳಲ್ಲಿ ಒಮ್ಮೆಗೆ ಪರಿವರ್ತನೆಗೊಂಡಿದ್ದನು. ಅದು ಒಂದು ವಾರದ ಹಿಂದೆ ಸುನಂದೆಗೆ ಸರಿ ಯಾಗಿ ಅರಿವಾಗಿತ್ತು.

"ಒಳ್ಳೆಯ ಸಿನಿಮಾ ಬಂದಿದೆ ಅಣ್ಣಾ. ನನ್ನನ್ನು ಕರೆದುಕೊಂಡು ಹೋಗುತ್ತೀಯಾ?" ಎಂದು ಸುನಂದೆ ಒಂದು ವಾರದ ಹಿಂದೆ ಕೇಳಿದು ದಕ್ಕೆ,

"ನೀನು ಮ್ಯಾಟಿನಿ ಶೋಗೆ ಹೋಗು....ನನಗೆ ನಿನ್ನನ್ನು ಒಯ್ಯಲು ಪುರುಸೊತ್ತಿಲ್ಲ, ಸಂಜೆ ಇಡೀ ಹಾಳಾಗಿ ಹೋಗುತ್ತಿದೆ," ಎಂದಿದ್ದನು ರಾಮಚಂದ್ರ, ಹಿಂದು ಮುಂದು ನೋಡದೆ.

ಸುನಂದಾ, ಅಣ್ಣನ ಬಾಯಿಂದ ಇಂತಹ ಮಾತುಗಳನ್ನು ಅಷ್ಟರ ತನಕ ಕೇಳಿರಲಿಲ್ಲ. ಅವಳ ಆಸೆ ಕಮರಿಹೋಯಿತು. ಸಿನಿಮಾ ನೋಡ ಬೇಕೆಂಬ ಲವಲವಿಕೆ ಮತ್ತು ಆತುರ-ಶಾಲೆಯಲ್ಲಿ ಸಹಪಾಠಿಗಳು ಅದರ ಕತೆ, ಪಾತ್ರ ವಹಿಸಿದ ನಾಯಕ ನಾಯಕಿರ ಸ್ವೈಜ ಜೀವನವನ್ನು, ಸಂಗೀತ ವನ್ನು ವಿವರಿಸಿದಾಗಿನಿಂದ ಬೆಳೆದು ಬಂದಿತ್ತು. ಅಣ್ಣನೊಡನೆ ಅದನ್ನು ನೋಡ ಹೋಗಬೇಕೆಂದು ನಿಶ್ಚಯಿಸಿದುದು ನಿರಾಶೆಯಾಗಿ ಪರಿಣಾಮ ಗೊಂಡಿತು. 'ಮ್ಯಾಟಿನಿಗೆ ಹೋಗಲು ಸಾಧ್ಯವಿಲ್ಲ ನಾಳೆಯೇ ಕಡೆ ದಿನ ವಂತೆ' ಕೊಂಚ ಯೋಚಿಸಿ ಸ್ವರವನ್ನು ಸರಿಪಡಿಸಿಕೊಂಡು ಪುನಃ ಕೇಳಿ ದ್ದಳು.

"ಅದು ಹೋದರೆ ಇನ್ನೊಂದು ಬರುತ್ತದೆ. ಚಿತ್ರಗಳಿಗೇನು ಕೊರತೆ?" ಲೋಕಾಭಿರಾಮನಾಗಿ ಅಣ್ಣ ಉತ್ತರ ಕೊಟ್ಟಿದ್ದನು.

ಸುನಂದೆಗೆ ಅಣ್ಣನ ಮಾತು ಕೇಳಿದಾಗ, ಎರಡು ದಿವಸಗಳ ಹಿಂದೆ ಹೊಸ ಪರಾಯಿ ಹೊಲಿಸಿಕೊಳ್ಳಲು ರಾಧಮ್ಮನನ್ನು ಗೋಳು ಹುಯ್ದುದು ನೆನಪಿಗೆ ಬಂತು. ಗೋವಿಂದರಾಯರು ಮಗನಿಗೆ ಇನ್ನೂರು

ರೂಪಾಯಿಗಳ ಡ್ರೆಸ್ ಹೊಲಿಸಿ ಎರಡು ತಿಂಗಳಾಗಿದ್ದುವು. ಅದರಲ್ಲಿ ತೃಪ್ತನಾಗದೆ ಆತ ರಾಘಮ್ಮನನ್ನು ಗೋಳುಹುಯ್ದು ಇಪ್ಪತ್ತೈದು ರೂಪಾಯಿ ಕೊಂಡೊಯ್ದಿದ್ದನು. ಅದು ನೆನಪಾದೊಡನೆ ಸುನಂದೆಗೆ ಅಣ್ಣನ ಬಾಯಿಯಲ್ಲಿ ಆ ಮಾತು ಬಂದುದು ಆಶ್ಚರ್ಯವೆಂದಾಗಲಿಲ್ಲ.

ಹಲವಾರು ಬಾರಿ ಈ ತರಹದ ನಿರಾಶೆ ಅವಳಿಗಾಗಿತ್ತು. ಆದರೆ ಇಷ್ಟು ಆಳವಾದ ಪರಿಣಾಮ ಉಂಟಾಗಿರಲಿಲ್ಲ. ಒಂದು ವಾರ ಆ ಒಂದು ಪುಟ್ಟ ನಿರಾಶೆಯನ್ನು ಮರೆಯಲು ಬೇಕಾಗಿತ್ತು.

ರಾಮಚಂದ್ರ ಸೈಕಲ್ ಇಳಿಯುತ್ತಾ, 'ಒಂದು ಲೋಟ ಹಾಲು ತಯಾರು ಮಾಡಿ ಇಡು' ಎಂದು ತಂಗಿಗೆ ಹೇಳಿದನು.

ಅವನು ಊಟದ ಮನೆಗೆ ಬಂದಾಗ, ಸೀತಮ್ಮನವರು,

"ಏನೊ ಮಗೂ ಇಷ್ಟು ಹೊತ್ತು ? ಶಾಲೆಯಿಂದ ಬರುವಾಗ ದೀಪ ಹಚ್ಚುವ ವೇಳೆಯಾಗುತ್ತದೆ. ಇಷ್ಟು ಹೊತ್ತು ಏನೂ ಕುಡಿಯದೆ ಇದ್ದೆಯಾ ?" ಎಂದು ಕೇಳಿದರು.

"ಇಷ್ಟು ಬೇಗ ಬಂದೆ, ಹೊತ್ತಾಯಿತಂತೆ, ನಿಮಗೆ ಮನೆಯಲ್ಲಿ ಕುಳಿತಿದ್ದವರಿಗೆ ಏನು ಗೊತ್ತು ನಮ್ಮ ಕಷ್ಟ ?"

"ಹೌದು, ಹೌದು, ಈಗ ಓದಬೇಕು, ಕಲಿಯಬೇಕು. ಮುಂದೆ ಇಡೀ ರಾತ್ರಿ ಹಗಲು ಸಂಪಾದಿಸಬೇಕು." ಎಂದರು ಸೀತಮ್ಮ ಕರುಣಾ ವ್ಯಂಜಕ ದನಿಯಿಂದ, ಕೈಯಲ್ಲಿ ಜಪಮಾಲೆ ತಿರುಗಿಸುತ್ತಾ. ಸುನಂದೆ ಅದನ್ನು ನೋಡುತ್ತಾ, "ದೊಡ್ಡಮ್ಮಾ ನೀವು ಜಪಮಾಡುತಿದ್ದಂತೆ ಹೇಗೆ ಮಾತನಾಡುತ್ತೀರಿ ? ಮಾತನಾಡಬಾರದಲ್ಲವೆ ?" ಎನ್ನಲು,

"ನನಗೆ ಬುದ್ಧಿ ಹೇಳಲಿಕ್ಕೆ ಬಂದಿದ್ದಾಳೆ. ಇನ್ನು ನಿನ್ನ ಕೈಯಿಂದ ನಾನು ಬುದ್ಧಿ ಹೇಳಿಸಿಕೊಳ್ಳಬೇಕು. ಅಲ್ಲವೇ ?" ಎಂದರು ಸಿಟ್ಟಿನಿಂದ.

"ಹಾಗಲ್ಲ ದೊಡ್ಡಮ್ಮಾ" ಎಂದು ಸುನಂದ ನಸು ನಗಲು, ರಾಮಚಂದ್ರನಿಗೂ ನಗುಬಂತು.

ಸಂಜೆಯ ತಿರುಗಾಟ ಮುಗಿಸಿ ಬಂದ ಗೋವಿಂದರಾಯರು, ಒಳಗೆ ಬಂದರು. "ಏನು ಸುನಂದಾ ? ಏನು ಗಲಭೆ ?" ಎಂದು ಮಗಳನ್ನು ಪ್ರಶ್ನಿಸಿದರು.

ಅವಳು ಉತ್ತರ ಕೊಡುವ ಮೊದಲೇ, ಸೀತಮ್ಮನವರು, "ಏನು

ಹೇಳೋದು, ನಿನ್ನ ಮಗಳು ನನಗೆ ಬುದ್ಧಿ ಹೇಳಲಿಕ್ಕೆ ಬರ್ತಾಳೆ, ಹುಡುಗಿಯರಿಗೆ ಹೆಚ್ಚು ಕಲಿಸಬಾರದೆಂದು ಹೇಳಿದರೆ ನೀವೆಲ್ಲಾ ಕೇಳ್ತೀರಾ? ಅದರ ಫಲ" ಎಂದರು.

"ದೊಡ್ಡಮ್ಮನಿಗೆ ಏನು ಹೇಳಿದೆ ಸುನಂದಾ?" ಎಂದರು ರಾಯರು.

"ಜಪಮಾಡುತಿದ್ದಾಗ ಯಾರಾದರೂ ಮಾತಾಡ್ತರೇನೋ ದೊಡ್ಡಮ್ಮಾ ಎಂದೆ;" ಅದಕ್ಕೆ ಸಿಟ್ಟು ಬಂದಿದೆ.

"ಅಷ್ಟೇನೋ ಹೋಗಲಿ ಬಿಡು ಅಮ್ಮಾ."

"ನೀನು ಹೀಗೆ ಮಾಡಿ ಸುನಂದಾ ಜೋರಾಗಿದ್ದು. ನಿರ್ಮಲಾ ಒಳ್ಳೆ ಹುಡುಗಿ. ಅದೇ ಅವಳಿಗೆ ಅಷ್ಟು ಉತ್ತಮ ವರನೂ ದೊರಕಿದ. ಭಾಗ್ಯವಂತೆ." ·

"ಅವಳಿಗಿಂತ ಉತ್ತಮ ನೆಂಟಸ್ತಿಕೆ ಸುನಂದೆಗೆ ಬರಬೇಕು," ಎಂದು ರಾಯರು ಮಗಳ ಕಡೆ ವಾದಿಸಿದರು.

"ಅಂತಹ ಆಫೀಸರ್ ಸಿಗಲು ಸ್ವಲ್ಪ ಕಷ್ಟವಿದೆ. ನಿರ್ಮಲಾನ ಅದೃಷ್ಟ ಚೆನ್ನಾಗಿತ್ತು."

"ಆಫೀಸರ್ ಹುದ್ದೆ ಇದ್ದರೆ ಸಾಕೆ ಅಮ್ಮ? ಗುಣಬೇಡವೆ? ಸುನಂದೆಯನ್ನು ಉದ್ಯೋಗ ಮತ್ತು ಹಣ ಮಾತ್ರ ನೋಡಿ ಕೊಡುವುದಿಲ್ಲ. ನನ್ನ ಮಕ್ಕಳಲ್ಲಿ ಅವಳದು ಸೂಕ್ಷ್ಮ ಮನೋಭಾವ. ಅವಳ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುವವರಿಗೆ ಮದುವೆ ಮಾಡಿಕೊಡ್ತೇನೆ," ಎಂದರು ರಾಯರು.

"ಅದೇನು ಹಾಗೆಂದರೆ?"

"ನಿನಗೆ ಅರ್ಥವಾಗಲಿಕ್ಕಿಲ್ಲ."

"ನೀನು ಕೂಡಾ ನನ್ನನ್ನು ಅನ್ನಲಿಕ್ಕೆ ಆರಂಭಿಸಿದಿ. ರಾಮ ರಾಮ! ನನಗೆ ಯಾಕೆ ಬೇಕು ಈ ವ್ಯವಹಾರಿಕ ವಿಷಯ ಎಲ್ಲಾ?" ಎಂದು ಸೀತಮ್ಮ ಬಾಯಿ ಮುಚ್ಚಿದರು.

ರಾತ್ರಿ ಸುನಂದೆ ಮಲಗುವ ಮುನ್ನ ದೇವರ ಪಟಕ್ಕೆ ವಂದಿಸುವ ಕ್ರಮ ಇಟ್ಟುಕೊಂಡಿದ್ದಳು.

ಹಾಗೆ ವಂದಿಸಿ ಮಲಗಿದಾಗ, ಆ ದಿನ ತತ್‌ಕ್ಷಣ ನಿದ್ರೆ ಹಿಡಿಯಲಿಲ್ಲ. ತಂದೆ ಹೇಳಿದ ಮಾತುಗಳು ನೆನಪಾದುವು:

ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುವವರಿಗೆ ಕೊಡಬೇಕು. ಹಣ ಇದ್ದರೇನು? ಸುಖ ಸೌಕರ್ಯಗಳಿದ್ದರೇನು? ನಿರ್ಮಲಾಕ್ಕ ಮದುವೆಯಾದ ಬಳಿಕ ಬೇರೆ ರೀತಿಯಾಗಿ ಬಿಟ್ಟಿದ್ದಾಳೆ. ಭಾವ ಹೇಳಿದ ಹಾಗೆ ಕುಣಿಯುತ್ತಾಳೆ, ತನ್ನ ವ್ಯಕ್ತಿತ್ವವೇ ಅವಳಲ್ಲಿ ಇಲ್ಲ. ಅವರವರ ವಿಚಾರ ಸ್ವಾತಂತ್ರ್ಯ ಅವರವರಲ್ಲಿ ಇರಬೇಕು.

ಅಪ್ಪ ಎಷ್ಟು ಚೆನ್ನಾಗಿ ನನ್ನ ಅಭಿಪ್ರಾಯವನ್ನು ಸರಳವಾಗಿ ವಿವರಿಸಿದರು. ಅದು ನನಗೆ ತಿಳಿದಿರಲೇ ಇಲ್ಲ. ಹಣವಿದ್ದ ಮಾತ್ರಕ್ಕೆ ಮನದ, ವಿಚಾರಲಹರಿಗೆ ಬೆಳವಣಿಗೆ ವಿಕಾಸನ ಪಡೆಯಲು ಸಾಧ್ಯವಿಲ್ಲ. ಅದಕ್ಕೆ ಪೋಷಕವಾಗುವಂತಹ ವಿಚಾರ ಸ್ವಾತಂತ್ರ್ಯವು ಜೀವನದಲ್ಲಿ ಬಹು ಪ್ರಾಮುಖ್ಯ. ಅದು ನನಗಂತೂ ಆಹಾರಕ್ಕಿಂತ ಹೆಚ್ಚಿನ ಅಗತ್ಯವಿದೆ. ಅದರಿಂದಲೇ ಓದುವಿನಲ್ಲಿ, ವ್ಯಾಸಂಗದಲ್ಲಿ ಸುಖ ಕಾಣುತ್ತಿರುವೆನು........ ಮಹಾವ್ಯಕ್ತಿಗಳ ಜೀವನಗಳನ್ನು, ಬರಹಗಳನ್ನು ಓದಿ ಅವರ ಮನನದಲ್ಲಿ ಸುಖ ಕಾಣುತ್ತಿರುವೆ..............ಅದರಲ್ಲಿ ದೈನಂದಿನ ಜೀವನದ ಸಮಸ್ಯೆಗಳು ಮರೆತು ಹೋಗುವವು..............ಎಂತಹ ಅಲೌಕಿಕ ಸುಖ, ಶಾಂತಿ.........

ನಿದ್ರೆ ಆಕೆಯನ್ನು ನಿಧಾನವಾಗಿ ಆವರಿಸಿತು......... ನಾಳೆ ಓದಲು, ಕಲಿಯಲು ಅಭ್ಯಸಿಸಲು, ತುಂಬಾ ಇದೆ .... ತುಂಬಾ ಇದೆ.........

ಚಿತ್ತೂರಿನ ವೀರಾಂಗನೆ

ಯಂ. ಎಸ್. ಆಚಾರ್, ಸುರತ್ಕಲ್ಲು.

೧. ಅದೊಂದು ರಾತ್ರಿ, ಚಿತ್ತೂರಿನ ಅಂತಃಪುರದಲ್ಲಿ ಈ ಸಂವಾದ ನಡೆಯಿತು:

"ಆಕ್ರಮಣಕಾರಿಗಳ ದಾಹ ಇನ್ನೂ ಮುಗಿದಿಲ್ಲ. 'ದೆಹಲಿಯ ಚಕ್ರವರ್ತಿಗೆ ಮಣಿಯಬೇಕೆಂಬ ಆ ಮಾತು ಮರ್ಮಘಾತಕವಾಗಿದೆ. ಕೆಲವರು ಆಳರಸರು ಆ ದಿಲ್ಲೀಶ್ವರನ ಅಡಿಗೆ ಶರಣಾದರು. ಆದರೆ ನಮ್ಮ ಕೆಚ್ಚಿ

ದೆಯ ವೀರ ರಾಜಪುತ್ರರು ಹಲವರು ಹಂಗು ತೊರೆದು ಕಾದಿ ಮಡಿದರು. 'ಜಯಶ್ರೀ'ಯು ಆ ಯವನರ ಪಾಲಿಗೆ ಸೇರುತ್ತಿದ್ದಾಳೆ. ಈಗ ನಾನೇನು ಮಾಡಲಿ? ಕಾದಿ ಮಡಿಯಲೇ? ಶರಣಾಗಲೇ?"

"ಅದೇಕೆ ತಾವು ಶರಣಾಗಬೇಕು? ಅದು ರಜಪೂತರಿಗೆ ಸಲ್ಲದುದು!"

"ಅದಾರು ಹೀಗೆ ಮಾತಾಡುತ್ತಿರುವುದು?"

"ನಾನು, ತಮ್ಮ ಸಹಧರ್ಮಿಣಿ!"

"ಪ್ರಿಯೇ! ಸರಿಯಾಗಿ ಯೋಚಿಸು. ಇದೀಗ ಶರಣಾಗುವುದಲ್ಲದೆ ಬೇರೇನು ಮಾಡಬೇಕೆನ್ನುವೆ?"

"ಪತಿದೇವಾ! ತಮ್ಮ ಮುನ್ನಡೆಯಲ್ಲಿ ಸಾಗಿ, ಯುಕ್ತಿ ಮೂಲಕ ಗೆಲವನ್ನು ಸಾಧಿಸಬೇಕೆಂದು ನಿರ್ಧರಿಸಿರುವೆನು."

"ಅಂದರೆ, ನಿನ್ನ ಯುಕ್ತಿಯಾದರೂ ಏನು?"

"ಆ ದಿಲ್ಲೀಶ್ವರನು ಇಲ್ಲಿಯ ಸಂಸ್ಕೃತಿಯಲ್ಲಿ ಆಸಕ್ತಿಯ ಸೋಗು ಹಾಕಿದ್ದಾನೆ. ಗಾನಪ್ರಿಯನಾದ ಅವನನ್ನು ನಾನು ವೇಷಾಂತರದಿಂದ ಸಮೀಪಿಸಿ, ಗೆಲ್ಲಲು ಸಾಧಿಸುವೆನು."

"ಅಬಲೆಯಾದ ನಿನಗೆ ಇದು ಸಾಧ್ಯವೇ?"

"ಇದು ನನಗೆ ಸಾಧ್ಯವೇ ಸೈ! 'ನಾರಿ ಮುನಿದರೆ ಮಾರಿ' ಎಂಬುದನ್ನು ನಾನು ತೋರಿಸಬಲ್ಲೆನು."

"ಇದು ನಿನ್ನ ಅಚಲ ನಿರ್ಧಾರವಾದರೆ, ಸಾಧಿಸಿ ಬಾ." ಚಿತ್ತೂರಿನ ರಾಜನಾದ ಜಗಮಲ್ಲನೂ, ಅವನ ಪತ್ನಿ ರಾಮಾಬಾಯಿಯೂ ಹೀಗೆ ಮಾತಾಡಿಕೊಂಡರು.

೨. ಇತಿಹಾಸದಲ್ಲಿ ಪ್ರಸಿದ್ಧವಾದ ಸಂಸ್ಥಾನಗಳಲ್ಲಿ ಚಿತ್ತೂರು ಒಂದು. ರಾಜಪುತ್ರರೇ, ರಜಪೂತರೇ ಅಲ್ಲಿಯ ನಿವಾಸಿಗಳು. ಅದೊಮ್ಮೆ ಜಗಮಲ್ಲನು ಅಲ್ಲಿ ರಾಜನಾಗಿ ಮೆರೆದನು. ಆತನ ರಾಣಿ ರಾಮಾಬಾಯಿಯು ಚಿಕ್ಕಂದಿನಲ್ಲೇ ರಾಜನೀತಿ, ಯುದ್ಧವಿದ್ಯೆಗಳನ್ನೆಲ್ಲಾ, ಕಲಿತಿದ್ದಳು. ಆಗಾಗ ಪತಿಯೊಂದಿಗೆ ರಾಜಕಾರ್ಯದಲ್ಲಿ ಚರ್ಚಿಸುತಿದ್ದಳು. ಈ ರಾಜ ದಂಪತಿಗಳ ಆದರ್ಶದಲ್ಲಿ ಅಲ್ಲಿನ ಪ್ರಜೆಗಳು ಸುಖಿಗಳಾಗಿದ್ದರು.

ಆ ಕಾಲದಲ್ಲಿ ದಿಲ್ಲಿಯಲ್ಲಿ ಅಕ್ಬರನು ಅರಸನಾಗಿದ್ದನು. ಅವನು

ರಾಜ್ಯವಿಸ್ತಾರದ ದುರಾಸೆಯಿಂದ ಅಕ್ಕಪಕ್ಕದ ರಾಜರನ್ನು ಸೋಲಿಸಿ, ಅಂಕಿತರನ್ನಾಗಿಸಿ, ಕಪ್ಪ ಕಾಣಿಕೆಗಳನ್ನು ಪಡೆಯುತಿದ್ದನು. ಅಂತೆಯೇ ಅವನು ಚಿತ್ತೂರಿಗೆ ದಂಡೆತ್ತಿ ಬಂದನು. ಆ ರಜಪೂತರು ಪ್ರತಿಭಟಿಸಿ, ಕಿಲ್ಲೆಯ ರಕ್ಷಣೆ ಮಾಡಿದರು. ಆ ಹೋರಾಟದಲ್ಲಿ ಅಕ್ಬರನಿಗೆ ಗೆಲುವಾಯಿತು. ಆ ರಾತ್ರಿ ಸಂತಸದ ಉಬ್ಬಿನಲ್ಲಿ ಅಕ್ಬರನು ಸುಖ ನಿದ್ರೆಯಲ್ಲಿದ್ದನು.

ಮರು ಬೆಳಗಿಗೆ ವೈರಾಗಿಣಿಯ ವೇಷದಿಂದ ರಾಮಾಬಾಯಿಯು ಅಕ್ಬರನ ಪಾಳಯದತ್ತ ಬಂದಳು. ಅವಳು ಮಧುರ ಕಂಠದಿಂದ ಹಾಡಿ ಅಕ್ಬರನ ಮನಸ್ಸನ್ನು ಸೆಳೆದಳು. ಅಕ್ಬರನು ಅವಳ ಸ್ವರಮಾಧುರ್ಯಕ್ಕೆ ತಲೆದೂಗಿ ಪರವಶನಾಗಿದ್ದನು. ಆಗಾ ವೈರಾಗಿಣಿಯು ಅವನನ್ನು ಖಡ್ಗದಿಂದ ಇರಿಯಲು ಮುಂದಾದಳು. ಅಕ್ಬರನು ಕಣ್ಣುಬಿಟ್ಟು ಅವಳನ್ನು ಕಂಡನು. ಅಲ್ಲಿದ್ದ ಸೈನಿಕರು ಅವಳನ್ನು ಬಂಧಿಸಿದರು. ಅವಳ ಸಾಹಸಕ್ಕೆ ಮೆಚ್ಚಿದ ಅಕ್ಬರನು ಅವಳನ್ನು ವಿಮೋಚನೆಗೊಳಿಸಿದನು!

೩. ರಾಮಾಬಾಯಿಯು ವಿಫಲಳಾಗಿ ತನ್ನ ಬೀಡಿನತ್ತ ಬಂದಳು. ಅವಳ ಚಲನ ವಲನಗಳಿಂದ 'ಕಾರ್ಯವು ಕೈಗೂಡಿಲ್ಲ'ವೆಂದು ಜಗಮಲ್ಲನಿಗೆ ತಿಳಿಯದಿರಲಿಲ್ಲ. ಆಕೆ ಪತಿಯ ಬಳಿಗೈದಿ ಮುಂದಿನ ಹೋರಾಟಕ್ಕಾಗಿ ಹುರಿದುಂಬಿಸಿದಳು. ಜಗಮಲ್ಲನು ತನ್ನ ಸೈನಿಕರನ್ನು ಹುರಿದುಂಬಿಸಿದನು. ಅವರೆಲ್ಲರೂ ಹಂಗು ತೊರೆದು ತಿರುಗೊಮ್ಮೆ ಅಕ್ಬರನಲ್ಲಿ ಹೋರಾಡಿದರು. ಆದರೇನು? ದೈವದ ಆಟವೇ ಬೇರೆಯಾಗಿತ್ತು!

ಇದಿರಾಳಿಯ ಒಂದು ಬಾಣವು ಜಗಮಲ್ಲನ ಮರ್ಮಕ್ಕೆ ತಗಲಿ, ಅವನ ಪ್ರಾಣವನ್ನೇ ಹೀರಿತು. ಇದರಿಂದ ಉಬ್ಬೇರಿ ಮುನ್ನಡೆದ ಅಕ್ಬರನ ಸೈನಿಕರನ್ನು ಕಂಡು, ರಾಮಾಬಾಯಿ ಪುರುಷ ವೇಷದಲ್ಲಿ ಬಂದು ಹೋರಾಡಿ ತಡೆದಳು. ಆದರೆ ಆಕೆಯನ್ನು ಸೈನಿಕರು ಸುಲಭದಲ್ಲಿ ಕೈಸೆರೆ ಹಿಡಿದು, ಅಕ್ಬರನ ಮುಂದೆ ನಿಲ್ಲಿಸಿದರು. ಆಗ ಅವಳು ತನ್ನ ನಿರ್ಧಾರವನ್ನು ಖಚಿತವಾಗಿ ಹೇಳಿದಳು:

"ನಾನು ಮರಣಕ್ಕೆ ಅಂಜತಕ್ಕವಳಲ್ಲ. ಈ ಬಾರಿಯೂ ನನ್ನನ್ನು ಬಿಟ್ಟು ಬಿಟ್ಟಲ್ಲಿ ಪತಿಯ ಮರಣದ ಸೇಡನ್ನು ತೀರಿಸದೆ ಬಿಡಲಾರೆನು!"

"ಜಗಮಲ್ಲನನ್ನಾಗಲೀ, ನಿನ್ನನ್ನಾಗಲೀ ಕೊಲ್ಲಲು ನಾನು ಬಯ

ಸಿಲ್ಲ. ಚಿತ್ತೂರು ಅಕ್ಬರನ ಆಶ್ರಿತ ರಾಜ್ಯವೆಂದು ಒಪ್ಪಿಗೆಯಾದರೆ, ಇಲ್ಲಿಂದಲೇ ನಾನು ಮರಳುವೆನು."

"ರಜಪೂತರ ಒಂದು ಸಿಳ್ಳೆ ಜೀವಂತವಿರುವ ತನಕ ಚಿತ್ತೂರು ಯಾರ ಆಶ್ರಿತವಾಗಲಾರದು!"

ಈ ತೆರದ ಸ್ವಾತಂತ್ರ್ಯ ಪ್ರೇಮದ ವೀರ ವಾಣಿಗೆ ಅಕ್ಬರನು ಮನದಲ್ಲೇ ಮೆಚ್ಚಿದನು, ತನ್ನ ಅಭಿಲಾಷೆಯ ಬಗ್ಗೆ ಕೊಂಚ ನಾಚಿದನು. ಆದರೆ ಅದನ್ನು ಹೊರಗೆಡಹದೆ, ಆಕೆಯನ್ನು ಸೆರೆಬಿಡಿಸಿ, ಕಳುಹಿದನು.

೬. ರಾಮಾಬಾಯಿಯು ದುಃಖ, ದ್ವೇಷ, ಕ್ರೋಧಗಳಿಂದ ಮಸಗಿದಳು. ಅಂದೇ ತನ್ನ ಕಡೆಯ ಅಳಿದುಳಿದ ಸೈನಿಕರನ್ನು ಕರೆಸಿ, ಯೋಚಿಸಿದಳು. "ಅನ್ಯಾಯವಾಗಿ ನಮ್ಮ ಮೇಲೆ ಸಾಗಿ ಬಂದ ದಿಲ್ಲೀಶ್ವರನಿಗೆ ಮಣಿದು ಬದುಕುವುದು ಸರಿಯೇ? ಇನ್ನಾದರೂ ರಜಪೂತ ಜನರ– ಮಹಿಳೆಯರ– ರಾಜ್ಯದ ಪ್ರಾಣ–ಮಾನ–ಸಂಪತ್ತುಗಳು ಅನ್ಯರ ಕೈ ಸೇರದಂತೆ ಹೆಣಗಬೇಡವೇ?" ಎಂದು ಆಕೆ ಪ್ರಶ್ನಿಸಿದಳು. ಅಲ್ಲಿದ್ದವರೆಲ್ಲರೂ ಆಕೆಯ ಮಾತನ್ನು ಒಪ್ಪಿದರು: "ರಾಜಪುತ್ರರಾದ ನಾವು ಪ್ರಾಣದ ಪಣವಿಟ್ಟು ಹೋರಾಡುವುದೇ ಸಿದ್ಧ!" ಎಂದು ಜಯ ಘೋಷವನ್ನೂ ಮಾಡಿದರು.

ಮರುದಿನ ಸೂರ್ಯನ ಕಿರಣಗಳು ನೆಲಕ್ಕೆ ಸೋಕುವ ಮೊದಲು ರಜಪೂತರ ದಂಡು ಅಕ್ಬರನನ್ನು ಇದಿರಿಸತೊಡಗಿತು. ಅವರ ರಣಕಹಳೆ-ರಣಭೇರಿಗಳ ಸದ್ದು ವೈರಿಗಳ ಕಿವಿಯನ್ನು ಚುಚ್ಚಿ ಎದೆಗುಂದಿಸಿತು. ಆಗ ಅಕ್ಬರನೇ ಮುಂದಾಳಾಗಿ ಅವರನ್ನು ಪ್ರತಿಭಟಿಸಿದನು. ರಜಪೂತ ಯೋಧರು ಹಲವು ಯವನ ವೀರರನ್ನು ಕೊಲ್ಲುತ್ತಾ, ತಾವೂ ರಣದಲ್ಲಿ ಮಡಿದು ಬಿದ್ದರು. ಆ ಕೊನೆಗೆ ಅಕ್ಬರನಿಗೆ ಗೆಲುವಾಯಿತು. ಆ ಮೇಲೆ ಅವನು ಕೋಟೆಯನ್ನು ಭೇದಿಸಲು ಮುಂದಾದನು!

೭. ಈ ಸುದ್ದಿ ರಾಮಾಬಾಯಿಯ ಕಿವಿಗೆ ತಲಪಿತು. "ಇನ್ನೇನು ಸಾಧ್ಯವಿದೆ? ಯವನರು ತಮ್ಮ ಮೇಲೇರಿ ಬರುವರು. ಅವರ ಕೈಸೆರೆಯಾಗಿ ಬಾಳಲಾರೆನು!" ಎಂದು ವೃದ್ಧವೀರನೊಬ್ಬನು ಕೋಟೆಯಿಂದ ಕೆಳಕ್ಕೆ ಹಾರಿ ತೀರಿದನು. ಈ ಘಟನೆಯಿಂದ ಎಚ್ಚೆತ್ತ ರಾಮಾಬಾಯಿಯು ಅಂತಃಪುರದಲ್ಲಿ ಮೊದಲೇ ಸಿದ್ಧವಾಗಿದ್ದ ಅಗ್ನಿ ಕುಂಡದ ಬಳಿ

ಗೈದಿವಳು! ಆಕೆಯ ಇಬ್ಬರು ಪುತ್ರಿಯರೂ, ಉಳಿದ ಸ್ತ್ರೀ ವೃಂದವೂ ಆಕೆಯ ಬೆನ್ನಲ್ಲಿ ಬಂದರು. "ಸೋದರಿಯರೇ! ಪರಕೀಯರಾದ ಯವನರ ಕೈಗೆ ಸಿಕ್ಕಿ ದಾಸ್ಯ ಹಾಗೂ ಮಾನದ ಶಂಕೆಗೆ ಒಳಪಡುವುದು ರಜಪೂತ ಸ್ತ್ರೀಯರಿಗೆ ಸಲ್ಲದಮ! ನೀವೆಲ್ಲರೂ ಈ ರಾಜ್ಯದ ವಂಶದ-ಮಾನದ ರಕ್ಷೆಗಾಗಿ ಬಹಳ ಸವೆದಿದ್ದೀರಿ! ಇಂತಹ ಪರಿಸ್ಥಿತಿಯಲ್ಲಿ ಪ್ರಾಣ ಬಲಿಯೇ ನಮಗೆ ತಕ್ಕುದು. ನಮ್ಮ ವೀರಪತಿಗಳನ್ನು ಸ್ವರ್ಗದಲ್ಲಾದರೂ ಸೇರಿಕೊಳ್ಳುವ" ಎನ್ನುತ್ತಾ, ಆಕೆ ಅಗ್ನಿಗೆ ಮೂರು ಸುತ್ತು ತಿರುಗಿ, ಹಾರಿಕೊಂಡಳು. ಆಗ ರಾಜಪುತ್ರಿಯರು ಮತ್ತು ಸ್ತ್ರೀಯರೆಲ್ಲರೂ ಒಬ್ಬರ ಹಿಂದೊಬ್ಬರಂತೆ ಅಗ್ನಿನಾರಾಯಣನಲ್ಲಿ ಐಕ್ಯವಾದರು!

೬. ಅಕ್ಬರನು ತನ್ನ ಸೈನಿಕರೊಡನೆ ಆ ಕೋಟೆಯನ್ನು ಭೇದಿಸಲು ಬರುವಾಗ ಅಗ್ನಿಯ ಜ್ವಾಲೆಗಳು ಅವನನ್ನು ತಡೆದುವು. ಅದೇನೆಂದು ತಿಳಿಯಲು ಮುಂಬರಿದ ಸೈನಿಕನೊಬ್ಬನು ಆ ಘಟನೆಯ ವಿವರವನ್ನು ರಾಜನಿಗೆ ತಿಳುಹಿದನು. ಅಕ್ಬರನ ಮನಸ್ಸು ಕಲ್ಲೋಲವಾಯಿತು.

"ಚಿತ್ತೂರು ಸಂಸ್ಥಾನವು ತನ್ನ ಆಶ್ರಯವಾಗಬೇಕೆಂದು ಹೆಣಗಾಡಿದೆನು. 'ರಜಪೂತರ ಒಂದು ಸಿಳ್ಳೆಯು ಜೀವಂತವಿರುವ ತನಕ ಚಿತ್ತೂರು ಯಾರ ಆಶ್ರಿತವಾಗಲಾರದು' ಎಂದು ಆಕೆ ನುಡಿದಿದ್ದಳು! ಹಾಗೆಯೇ, ಇದೀಗ ನಿರ್ಜೀವ ರಾಜ್ಯವೇ ನನ್ನ ಪಾಲಿಗೆ ಲಭಿಸಿತು. 'ಈ ರಜಪೂತರು ಪ್ರಾಣಕ್ಕಿಂತಲೂ ಅಭಿಮಾನದ ರಕ್ಷಕ'ರೆಂಬುದು ಇಂದಿಗೆ ವೃಥವಾಯಿತು!" ಎಂದು ಉದ್ಗಾರವೆತ್ತಿದನು!

'ಚಿತ್ತೂರಿನ ವೀರಾಂಗನೆ' ರಾಮಾಬಾಯಿಯ ಹೆಸರು ಇಂದಿಗೂ ಇತಿಹಾಸದಲ್ಲಿ ಶಾಶ್ವತವಾಗಿ ಕೇಳಿ ಬರುತ್ತಿದೆಯೆಂದರೆ ಸುಳ್ಳಲ್ಲ!

ಪರಾಮರ್ಶೆಗಾಗಿ

“ಇದೀಗಣ ‘ಸಂಕಲನ’ದಲ್ಲಿ ಕನ್ನಡದ ಹಿರಿಯರು—ಕಿರಿಯರು ಬರೆದ ಚಿತ್ರ, ಕವಿತೆ, ನಾಟಕ, ಪ್ರಬಂಧ, ಕತೆಗಳು ಒಳಗೊಂಡಿವೆ........ ಈ ಸಂಕಲನವು ‘ಉದ್ಯಾನ’ದಂತೆ ಹಲವು ಬಗೆಗಳ ಸೌಂದರ್ಯದಿಂದ ಕೂಡಿದೆಯೆಂದು ತಿಳಿಯಬಹುದು.”

—ಅರಿಕೆಗಳು.

ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು.

ಉದಯ ಪ್ರಿಂಟರಿ & ಪಬ್ಲಿಕೇಷನ್ಸ್ (ಪ್ರೈವೇಟ್) ಲಿಮಿಟೆಡ್, ಮಂಗಳೂರು-3.